ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 11 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 233 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4

ಸಂರಕ್ಷಣೆಯಲ್ಲಿದ್ದ ನಾಲ್ಕು ಹುಲಿ ಮರಿಗಳು ಸಾವು

ವನ್ಯಜೀವಿ ಪ್ರೇಮಿಗಳಿಗೆ ಆಘಾತದ ವಿಷಯ

ಗ್ಯಾಸ್ಟ್ರಿಕ್‌ನಿಂದ ಸತ್ತಿರುವ ಶಂಕೆ; ಪ್ರಯೋಗಾಲಯದ ವರದಿ ನಿರೀಕ್ಷೆ





ಮೈಸೂರು, ಡಿ.10(ಎಂಟಿವೈ, ಎಂಕೆ)– ಅರಣ್ಯದಲ್ಲಿ ಸ್ವಚ್ಛಂದವಾಗಿದ್ದ ಮುದ್ದಾದ ಮೂರು ತಿಂಗಳ ನಾಲ್ಕು ಹುಲಿ ಮರಿಗಳು ಅರಣ್ಯ ಇಲಾಖೆಯ ಸಂರಕ್ಷಣೆಯಲ್ಲೇ ಸಾವನ್ನಪ್ಪಿವೆ.

ಹುಣಸೂರು ತಾಲೂಕು ಹನಗೋಡು ಹೋಬಳಿಯ ಗೌಡನಕಟ್ಟೆ ಗ್ರಾಮದ ರೈತ ರವಿಕುಮಾರ್ ಅವರಿಗೆ ಸೇರಿದ ಮೆಕ್ಕೆಜೋಳದ ಹೊಲದಲ್ಲಿ ನ.27ರಿಂದ 30ರವರೆಗೆ ನಡೆದ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಸೆರೆಯಾದ ತಾಯಿ ಹುಲಿ ಮತ್ತು ನಾಲ್ಕು ಮರಿಗಳನ್ನು ಕೂರ್ಗಳ್ಳಿಯಲ್ಲಿರುವ ಮೈಸೂರು ಮೃಗಾಲಯದ ಚಾಮುಂಡಿ ವನ್ಯಜೀವಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು. ಆದರೆ, ಈ ನಾಲ್ಕೂ ಹುಲಿ ಮರಿಗಳು ಸಾವನ್ನಪ್ಪಿರುವುದು ವನ್ಯಜೀವಿ ಪ್ರಿಯರಲ್ಲಿ ಅತೀವ ನೋವು ತಂದಿದೆ.

ಡಿ.1ರಂದು ಒಂದು ಹೆಣ್ಣು ಹುಲಿ ಮರಿಯು ಹೃದಯ ರಕ್ತನಾಳದ ವೈಫಲ್ಯ ಮತ್ತು ತೀವ್ರವಾದ ಗ್ಯಾಸ್ಟ್ರಿಕ್ (cardiopulmonary failure and acute severe gastritis) ನಿಂದ ಸಾವನ್ನಪ್ಪಿದ್ದರೆ, ಡಿ.5ರಂದು ಒಂದು ಗಂಡು ಹುಲಿ ಮರಿಯು ರಕ್ತಸ್ರಾವದ ಜಠರದುರಿತ ಮತ್ತು ಎನ್ಸೆಫಾಲಿಟಿಸ್ (hemorrhagic gastroenteritis & encephalitis) ನಿಂದ ಹಾಗೂ ಡಿ.7 ಮತ್ತು ಡಿ.9ರಂದು ಉಳಿದ ಎರಡು ಹೆಣ್ಣು ಹುಲಿ ಮರಿಗಳು Feline panleuko -penia ಎಂಬ ಸೋಂಕಿನಿಂದ ಮೃತಪಟ್ಟಿವೆ. ಆದರೆ ತಾಯಿ ಹುಲಿ ಆರೋಗ್ಯವಾಗಿದೆ ಎಂದು ಅರಣ್ಯ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ವಿಷಯ ಮುಚ್ಚಿಟ್ಟ ಅರಣ್ಯ ಇಲಾಖೆ: ಕೂಂಬಿಂಗ್ ಕಾರ್ಯಾಚರಣೆ ವೇಳೆ ಉಂಟಾದ ಗದ್ದಲದಿಂದಾಗಿ ಗಾಬರಿಗೊಂಡಿದ್ದ ಹುಲಿ ಮರಿಗಳು, ಎರಡು ದಿನಗಳ ಕಾಲ ತಾಯಿಯಿಂದ ಬೇರ್ಪಟ್ಟು ಹಸಿವಿನಿಂದ ದುರ್ಬಲಗೊಂಡಿರಬಹುದೆಂದು ಆರೈಕೆಗಾಗಿ ಅವುಗಳನ್ನು ತಕ್ಷಣ ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತಾದರೂ, ಅವು ಬದುಕುಳಿದಿಲ್ಲ. ಇದು ಸಾರ್ವಜನಿಕ ವಲಯದಲ್ಲಿ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಡಿ.1ರಂದೇ ಹುಲಿ ಮರಿಯೊಂದು ಸಾವನ್ನಪ್ಪಿದ್ದರೂ ಅರಣ್ಯ ಇಲಾಖೆ ಮಾಹಿತಿ ನೀಡದೆ ಮುಚ್ಚಿಟ್ಟಿದ್ದೇಕೆ ಎಂದು ಪ್ರಾಣಿ ಪ್ರಿಯರು ಪ್ರಶ್ನಿಸಿದ್ದಾರೆ.

ಮಾನವ–ವನ್ಯಜೀವಿ ಸಂಘರ್ಷದಿಂದಾಗಿ ವನ್ಯಜೀವಿಗಳು ಕಾಡು ಬಿಟ್ಟು ನಾಡಿಗೆ ಬರುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಪೂರ್ವ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು, ವನ್ಯಜೀವಿಗಳನ್ನು ರಕ್ಷಣೆ ಮಾಡಬೇಕಾದ ಅರಣ್ಯ ಇಲಾಖೆ, ವನ್ಯ ಸಂಪತ್ತನ್ನು ಉಳಿಸಿ, ಕಾಪಾಡುವ ಕಾರ್ಯ ಬಿಟ್ಟು ಏನು ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

■ 6ನೇ ಪುಟಕ್ಕೆ

> ಪ್ಯಾನ್ಲ್ಯುಕೋಪೆನಿಯಾ ಸೋಂಕು ಹಾಗೂ ಅತಿಯಾದ ಗ್ಯಾಸ್ಟ್ರಿಕ್‌ನಿಂದ ಹುಲಿ ಮರಿಗಳು ಸಾವನ್ನಪ್ಪಿರುವ ಸಾಧ್ಯತೆ ಇದೆ. ಸಾಕು ಪ್ರಾಣಿಯಾದ ನಾಯಿಗೂ ಕೂಡ ಆಹಾರದಲ್ಲಿ ಬದಲಾವಣೆಯಾದರೆ ಗ್ಯಾಸ್ಟ್ರಿಕ್ ಹೆಚ್ಚಾಗಲಿದೆ. ಒಂದು ದಿನ ನಾಯಿಗೆ ನಾನ್‌ವೆಜ್ ತಿನಿಸಿದರೆ, ಅದು ಎರಡು ದಿನ ಸರಿಯಾಗಿ ಆಹಾರ ಸೇವನೆ ಮಾಡುವುದಿಲ್ಲ. ಹಾಗಾಗಿ ಅದೇ ಫ್ಯಾಮಿಲಿಯಲ್ಲಿ ಬರುವ ಹುಲಿ ಮರಿಗಳ ಸಾವು ಕೂಡ ಗ್ಯಾಸ್ಟ್ರಿಕ್‌ನಿಂದಾಗಿರುವ ಸಾಧ್ಯತೆ ಇದೆ.
> - ಡಾ. ನಾಗರಾಜು, ಉಪ ನಿರ್ದೇಶಕರು, ಪಶುಪಾಲನ ಇಲಾಖೆ, ಮೈಸೂರು

ಸಂರಕ್ಷಣೆ ಹೆಸರಲ್ಲಿ ಬಂಧನ ಸರಿಯಲ್ಲ!

ಪ್ರಾಣಿಗಳ ಸಹಜ ಸ್ವಭಾವಕ್ಕೆ ಮೃಗಾಲಯ ಸೂಕ್ತವಲ್ಲ. ಮನುಷ್ಯರು ಮೃಗಾಲಯ ಮಾಡಿಕೊಂಡು ಪ್ರಾಣಿಗಳನ್ನು ರಕ್ಷಣೆ ಮಾಡಿದ್ದೇವೆ ಎಂದು ಸಂತೋಷಪಡಬಹುದಷ್ಟೇ. ಪ್ರಾಣಿಗಳಿಗೆ ಮೃಗಾಲಯದಲ್ಲಿ ಬಂಧಿಯಾಗಿರುವುದು ಹಿಂಸೆ ನೀಡಿದಂತಾಗುತ್ತದೆ. ಜೀವ ಸಂಕುಲವನ್ನು ಉಳಿಸುವುದು, ಅವುಗಳ ಸಂತತಿಯನ್ನು ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಅಂತಹುದರಲ್ಲಿ ಮೂರ್‍ನಾಲ್ಕು ವನ್ಯಜೀವಿಗಳನ್ನು ರಕ್ಷಣೆ ಮಾಡಿದ್ದೇವೆ ಎಂದು ಹೇಳಿಕೊಳ್ಳುವುದಲ್ಲ. ವನ್ಯಜೀವಿಗಳಿಗೆ ಬೇಕಿರುವುದು ಅರಣ್ಯ. ಆದ್ದರಿಂದ ಅರಣ್ಯ ಸಂರಕ್ಷಣೆ ಜೊತೆಗೆ ವನ್ಯಜೀವಿಗಳನ್ನು ರಕ್ಷಣೆ ಮಾಡಬೇಕೇ ಹೊರತು ನಾವೂ ಸಂರಕ್ಷಣೆ ಮಾಡುತ್ತೇವೆ ಎಂದು ಬಂಧಿಸುವುದಲ್ಲ.

- ಕೃಪಾಕರ, ಹಿರಿಯ ವನ್ಯಜೀವಿ ಛಾಯಾಗ್ರಾಹಕ.

ವಿಧಾನಸಭೆಯಲ್ಲಿ ದ್ವೇಷ ಭಾಷಣ ಪ್ರತಿಬಂಧಕ ಮಸೂದೆ ಮಂಡನೆ

1 ಲಕ್ಷ ರೂ ದಂಡ; 10 ವರ್ಷ ಶಿಕ್ಷೆ

ಬೆಳಗಾವಿ, ಡಿ.10– ರಾಜ್ಯದಲ್ಲಿ ದ್ವೇಷ ಭಾಷಣಗಳಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ– 2025' ಅನ್ನು ಬುಧವಾರ ವಿಧಾನ ಸಭೆಯಲ್ಲಿ ಮಂಡಿಸಿದೆ.



ಡಾ. ಜಿ.ಪರಮೇಶ್ವರ್

ಇಂದು ಪ್ರಶ್ನೋತ್ತರ ಕಲಾಪದ ನಂತರ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು, ದ್ವೇಷ ಭಾಷಣ ಪ್ರತಿಬಂಧಕ ಮಸೂದೆ ಮಂಡಿಸಿದರು. ಇದಕ್ಕೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು. ಈ ಮಸೂದೆಯು ಒಂದು ಲಕ್ಷ ರೂ.ಗಳವರೆಗೆ ದಂಡ ಮತ್ತು ಗರಿಷ್ಠ 10 ವರ್ಷಗಳವರೆಗೆ ಜೈಲು ಶಿಕ್ಷೆಗೆ ಅವಕಾಶ ನೀಡುತ್ತದೆ. ಡಿ.4ರಂದು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಈ ಮಸೂದೆಯನ್ನು ಅಂಗೀಕರಿಸಲಾಗಿತ್ತು. ಪರಮೇಶ್ವರ್ ಅವರು ಮಸೂದೆಯನ್ನು ಮಂಡಿಸಲು ಸದನದ ಅನುಮತಿ ಕೋರಿದಾಗ ಮತ್ತು ಸ್ಪೀಕರ್ ಯು.ಟಿ. ಖಾದರ್ ಅದನ್ನು

■ 6ನೇ ಪುಟಕ್ಕೆ

ಭೂ ಪರಿವರ್ತನೆ ದಂಧೆಗೆ ಬ್ರೇಕ್

● ಪರಿಷತ್‌ನಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ ಮಾಹಿತಿ ● ಇನ್ನು ಮುಂದೆ 30 ದಿನಗಳಲ್ಲಿ ಭೂ ಪರಿವರ್ತನೆ; 2 ಎಕರೆವರೆಗೆ ಭೂ ಪರಿವರ್ತನೆಯೇ ಅನಗತ್ಯ




ಬೆಳಗಾವಿ, ಸುವರ್ಣವಿಧಾನ ಸೌಧ, ಡಿ.10(ಕೆಎಂಶಿ)–ಕರ್ನಾಟಕ ಭೂಕಂದಾಯ ಕಾಯ್ದೆ 1964ರ ತಿದ್ದುಪಡಿಗೆ ಕಳೆದ ಅಕ್ಟೋಬರ್‌ನಲ್ಲೇ ಕರಡು ರಚಿಸಲಾಗಿದ್ದು, ಮುಂದಿನ ಒಂದು ತಿಂಗಳೊಳಗೆ ಅಧಿಸೂಚನೆ ಹೊರಡಿಸಿ ಕಾರ್ಯರೂಪಕ್ಕೆ ತರಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನ ಪರಿಷತ್‌ನಲ್ಲಿ ಇಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆ ರಾಮೋಜಿಗೌಡ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಭೂಕಂದಾಯ ಕಾಯ್ದೆ 1964ರಲ್ಲಿ ಜಾರಿಯಾಗಿದ್ದರೂ ಅಗತ್ಯ ತಿದ್ದುಪಡಿ ಆಗಿರಲಿಲ್ಲ. ಕಲಂ 95ಕ್ಕೆ ತಿದ್ದುಪಡಿ ಮಾಡಿದ್ದು, ಕಳೆದ ಅಕ್ಟೋಬರ್ 20ರಲ್ಲೇ ಕರಡು ರಚಿಸಿ, ಜನರಿಗೆ ಅನುಕೂಲವಾಗಲು ಭೂಪರಿವರ್ತನೆಯನ್ನು ಮತ್ತಷ್ಟು ಸರಳೀಕರಣ ಮಾಡಲಾಗಿದೆ.

ಒಂದು ಕಾಲದಲ್ಲಿ ಭೂಪರಿವರ್ತನೆ ಎಂಬುದೇ ಹಗರಣ ಎಂಬಂತಹ ಪರಿಸ್ಥಿತಿ ಇತ್ತು. ಇದರಲ್ಲಿ ಅಧಿಕಾರಿಗಳು ಭಾಗಿಯಾಗಿದ್ದಾರೋ, ಇಲ್ಲವೋ ಗೊತ್ತಿಲ್ಲ. ಅನೇಕ ಮಧ್ಯವರ್ತಿಗಳಂತೂ ಹುಟ್ಟಿಕೊಂಡಿದ್ದಾರೆ. ಇದರಿಂದ ಅಧಿಕಾರಿಗಳಿಗೂ ಕೆಟ್ಟ ಹೆಸರು, ಸರ್ಕಾರಕ್ಕೂ ಕೆಟ್ಟ ಹೆಸರು, ಆದ್ದರಿಂದ ಭೂಪರಿವರ್ತನೆ ದಂಧೆಗೆ ಸಂಪೂರ್ಣ ಬ್ರೇಕ್ ಹಾಕುವಲ್ಲಿ ಮಹತ್ವದ ತಿದ್ದುಪಡಿ ತರಲಾಗಿದೆ. ಪ್ರಸ್ತುತ 30 ದಿನಗಳಲ್ಲಿ ಭೂ ಪರಿವರ್ತನೆಗೆ

■ 6ನೇ ಪುಟಕ್ಕೆ

ಶಾಲೆಗಳಲ್ಲಿ 'ವಂದೇ ಮಾತರಂ' ಹಾಡುವುದನ್ನು ಕಡ್ಡಾಯಗೊಳಿಸಿ

ಸರ್ಕಾರಕ್ಕೆ ರಾಜ್ಯಸಭಾ ಸದಸ್ಯೆ ಡಾ. ಸುಧಾಮೂರ್ತಿ ಒತ್ತಾಯ



ನವದೆಹಲಿ, ಡಿ.10– ಶಾಲೆಗಳಲ್ಲಿ ವಂದೇ ಮಾತರಂ ಹಾಡುವುದನ್ನು ಕಡ್ಡಾಯಗೊಳಿಸಬೇಕು ಎಂದು ರಾಜ್ಯಸಭೆ ಸದಸ್ಯೆ ಡಾ. ಸುಧಾಮೂರ್ತಿ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ವಂದೇ ಮಾತರಂ ರಚನೆಗೆ 150 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ರಾಜ್ಯಸಭೆಯಲ್ಲಿ ನಡೆದ ಚರ್ಚೆಯಲ್ಲಿ ಮಾತನಾಡಿದ ಅವರು, ವಂದೇ ಮಾತರಂ ಗೀತೆ ದೇಶವನ್ನು ಒಂದುಗೂಡಿಸುವ ಸೂತ್ರ. ಹೀಗಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 'ವಂದೇ ಮಾತರಂ' ಹಾಡುವುದನ್ನು ಕಡ್ಡಾಯಗೊಳಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ನಾನು ಇಲ್ಲಿ ಸಂಸದೆಯಾಗಿ, ಲೋಕೋಪಕಾರಿ ಅಥವಾ ಲೇಖಕಿಯಾಗಿ ನಿಂತಿಲ್ಲ. ಮದರ್ ಇಂಡಿಯಾ ಅಥವಾ ಭಾರತ ಮಾತೆಯ ಮಗಳಾಗಿ ನಿಂತಿದ್ದೇನೆ ಎಂದು ಹೇಳಿದರು.

ಭಾರತದಲ್ಲಿರುವ ಪ್ರತಿ ರಾಜ್ಯವು ಬಣ್ಣ ಬಣ್ಣದ ತುಂಡಿನ ಬಟ್ಟೆಯಂತೆ. ಆ ಎಲ್ಲಾ ತುಂಡುಗಳನ್ನು ಒಟ್ಟಿಗೆ ಬೆಸೆಯುವ ದಾರ ಮತ್ತು ಸೂಜಿಯೇ ಈ ವಂದೇ ಮಾತರಂ ಗೀತೆ. ಇದು ಕೇವಲ ಭೂಪಟ ಅಥವಾ ಧ್ವಜವಲ್ಲ, ಇದು ಭೂಮಿಯನ್ನು ತಾಯ್ನಾಡು ಎಂದು ಪರಿಗಣಿಸುವ ಪರಿಕಲ್ಪನೆ. ಇದು ಕೇವಲ ಭೂಮಿಯ ತುಂಡಲ್ಲ, ಇದು ಮಾತೃಭೂಮಿ

■ 6ನೇ ಪುಟಕ್ಕೆ

ಯುನೆಸ್ಕೋ ಪರಂಪರೆ ಪಟ್ಟಿಗೆ ಬೆಳಕಿನ ಹಬ್ಬ ದೀಪಾವಳಿ ಸೇರ್ಪಡೆ



ನವದೆಹಲಿ, ಡಿ.10– ಯುನೆಸ್ಕೋದ ಮಾನವೀಯತೆಯ ಅಮೂರ್ತ ಸಾಂಸ್ಕೃತಿಕ ಪರಂಪರೆಯ ಪಟ್ಟಿಗೆ ನಮ್ಮ ಬೆಳಕಿನ ಹಬ್ಬ ದೀಪಾವಳಿ ಸೇರ್ಪಡೆಯಾಗಿದೆ. ದೆಹಲಿಯ ಕೆಂಪು ಕೋಟೆಯಲ್ಲಿ ಆಯೋಜಿಸಲಾದ ಯುನೆಸ್ಕೋದ ಪ್ರಮುಖ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಭಾರತ ದೇಶವು ಅಮೂರ್ತ ಸಾಂಸ್ಕೃತಿಕ ಪರಂಪರೆಯ ರಕ್ಷಣೆಗಾಗಿ ಅನಂತರ ಸರ್ಕಾರಿ ಸಮಿತಿಯ (ಐಸಿಹೆಚ್) ಅಧಿವೇಶನವನ್ನು ಆಯೋಜಿಸುತ್ತಿರುವುದು ಇದೇ ಮೊದಲು.

■ 6ನೇ ಪುಟಕ್ಕೆ

ಯೂನಿಟಿ ಮಾಲ್‌ಗೆ ಮಗ ಶಂಕುಸ್ಥಾಪನೆ; ಕೋರ್ಟ್‌ನಿಂದ ತಡೆಯಾಜ್ಞೆ ತಂದ ತಾಯಿ!

● 193 ಕೋಟಿ ವೆಚ್ಚದಲ್ಲಿ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಸಂಸದ ಯದುವೀರ್ ಜುಲೈನಲ್ಲಿ ಶಂಕುಸ್ಥಾಪನೆ ● ಪ್ರಮೋದಾದೇವಿ ಕೋರ್ಟ್ ಮೊರೆ ಹೋಗಿದ್ದರು; ಯಥಾಸ್ಥಿತಿಗೆ ಈಗ ಕೋರ್ಟ್ ಆದೇಶ


ಯದುವೀರ್


ಪ್ರಮೋದಾದೇವಿ


ಮೈಸೂರು, ಡಿ.10– ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ 193 ಕೋಟಿ ರೂ. ವೆಚ್ಚದಲ್ಲಿ ಪಿಪಿಪಿ ಮಾದರಿಯಲ್ಲಿ ನಿರ್ಮಿಸಲುದ್ದೇಶಿಸಿರುವ ಯೂನಿಟಿ ಮಾಲ್‌ಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗುದ್ದಲಿ ಪೂಜೆ ನೆರವೇರಿಸಿದ ಕೆಲವೇ ತಿಂಗಳಲ್ಲಿ ಇದಕ್ಕೆ ಅವರ ತಾಯಿ ಪ್ರಮೋದಾದೇವಿ ಒಡೆಯರ್ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ.

ದೇಶೀಯ ಕರಕುಶಲ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಕೇಂದ್ರ ಸರಕಾರದ ಮಹತ್ವದ ಯೋಜನೆಯಡಿ ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದ ಸರ್ವೇ ನಂ.1ರ 6.5 ಎಕರೆ ಪ್ರದೇಶದಲ್ಲಿ ಯೂನಿಟಿ ಮಾಲ್ ನಿರ್ಮಾಣಕ್ಕೆ ತೀರ್ಮಾನಿಸಲಾಗಿತ್ತು. ಕಳೆದ ಜುಲೈ 27ರಂದು ಸಂಸದ ಯದುವೀರ್ ಕೃಷ್ಣದತ್ತ

■ 6ನೇ ಪುಟಕ್ಕೆ

ಪತ್ನಿಯೂ ಸೇರಿದಂತೆ ನಾಲ್ವರ ಹತ್ಯೆ: ಅಪರಾಧಿಗೆ ಗಲ್ಲು ಶಿಕ್ಷೆ

ವಿರಾಜಪೇಟೆ ಕೋರ್ಟ್ ಮಹತ್ವದ ತೀರ್ಪು


ಗಿರೀಶನೊಂದಿಗೆ ನಾಗಿ


ಕರಿಯ


ಕಾವೇರಿ

ಮಡಿಕೇರಿ, ಡಿ.10– ಪತ್ನಿ, ಮಲ ಮಗಳು, ಪತ್ನಿಯ ಅಜ್ಜ, ಅಜ್ಜಿಯನ್ನು ಹತ್ಯೆ ಮಾಡಿದ್ದ ಹಂತಕನಿಗೆ ವಿರಾಜಪೇಟೆ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಸ್.ನಟರಾಜ ಅವರು ಗಲ್ಲು ಶಿಕ್ಷೆ ವಿಧಿಸಿ, ತೀರ್ಪು ನೀಡಿದ್ದಾರೆ.

ಮೂಲತಃ ಕೇರಳದ ವಯನಾಡು ಜಿಲ್ಲೆಯ ಮಾನಂದವಾಡಿಯ ನಿವಾಸಿ ಗಿರೀಶ್(35) ಎಂಬಾತ ಗಲ್ಲು ಶಿಕ್ಷೆಗೆ ಗುರಿಯಾದವನು. ಈತ ಪೊನ್ನಂಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ 2025ರ ಮಾ.27ರ ರಾತ್ರಿ ತನ್ನ ಪತ್ನಿ ನಾಗಿ(30), ಮಲ ಮಗಳು ಕಾವೇರಿ(5) ಪತ್ನಿಯ ಅಜ್ಜ ಜೇನು ಕುರುಬರ ಕರಿಯ(75) ಅಜ್ಜಿ ಗೌರಿ(70) ಎಂಬುವರನ್ನು ಕತ್ತಿಯಿಂದ ಕಡಿದು ಭೀಕರವಾಗಿ ಹತ್ಯೆ ಮಾಡಿದ್ದ.

ಪ್ರಕರಣ ಹಿನ್ನೆಲೆ: ಸುಮಾರು 40 ವರ್ಷಗಳ ಹಿಂದೆ ಕೇರಳದಿಂದ ಕರಿಯ ಮತ್ತು ಗೌರಿ ದಂಪತಿ ಪೊನ್ನಂಪೇಟೆ ತಾಲೂಕಿನ ಬೇಗೂರು ಗ್ರಾಮಕ್ಕೆ ಬಂದು ಚೋಡುಮಾಡ ವಿಕ್ರಂ ಅವರ ತೋಟದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರು. ಈ ದಂಪತಿಗೆ ಮೂವರು ಮಕ್ಕಳಿದ್ದು, ಆ ಪೈಕಿ ಜಯ ಎಂಬಾಕೆಯ ಮಗಳು ನಾಗಿ ತನ್ನ ಮೊದಲ ಪತಿ ಸುಬ್ರಮಣಿಯನ್ನು ತೊರೆದು ವರ್ಷದ ಹಿಂದೆ ಕೇರಳ ಮೂಲದ ಗಿರೀಶ್ ಎಂಬಾತನ ವಿವಾಹವಾಗಿದ್ದಳು. ಈತ ವಿವಾಹಿತನಾಗಿದ್ದು, ಪತ್ನಿಯನ್ನು ತೊರೆದು ನಾಗಿಯನ್ನು ವಿವಾಹವಾಗಿದ್ದ ಎನ್ನಲಾಗಿದೆ.

ನಾಗಿಯ ಮೊದಲ ಪತಿಗೆ ಜನಿಸಿದ್ದ ಮಗಳು ಬೇಗೂರಿನಲ್ಲಿ ಅಜ್ಜ ಮತ್ತು ಅಜ್ಜಿ ಜೊತೆಯಲ್ಲಿ ವಾಸಿಸುತ್ತಿದ್ದಳು. 2ನೇ ಪತಿ ಗಿರೀಶ್ ಆಗಾಗ್ಗೆ ನಾಗಿ ಮನೆಗೆ ಬಂದು ಹೋಗುತ್ತಿದ್ದ. 2025ರ ಮಾ.27ರಂದು ಸಂಜೆ ಆರೋಪಿ ಗಿರೀಶ್ ಪತ್ನಿ ಜೊತೆ ಜಗಳ ತೆಗೆದು ನೀನು ಸುಬ್ರಮಣಿ ಎಂಬವರ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದೀಯ. ನಿನ್ನ ಅಜ್ಜ, ಅಜ್ಜಿ ನನಗೆ ಕಾಫಿ ಮಾರಿದರೂ ಹಣ ನೀಡುವುದಿಲ್ಲ ಎಂದು ತಗಾದೆ ತೆಗೆದಿದ್ದಾನೆ. ಅದು ತಾರಕಕ್ಕೇರಿ ಮೊದಲು ಆತ ಕತ್ತಿಯಿಂದ

■ 6ನೇ ಪುಟಕ್ಕೆ

ಗ್ಯಾರಂಟಿ ಯೋಜನೆಯಿಂದ ಅರ್ಹರು ಬಿಟ್ಟು ಹೋಗದಂತೆ ಎಚ್ಚರ ವಹಿಸಿ

ಅಧಿಕಾರಿಗಳಿಗೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಅರುಣ್‌ಕುಮಾರ್ ಸೂಚನೆ



ಮೈಸೂರು ಜಿಪಂ ಸಭಾಂಗಣದಲ್ಲಿ ಬುಧವಾರ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.


ಮೈಸೂರು, ಡಿ.10(ಎಂಕೆ)– ಮೈಸೂರು ಜಿಲ್ಲೆಯ ಹಾಡಿಗಳಲ್ಲಿ ವಾಸವಾಗಿರುವ ಕುಟುಂಬಗಳಿಗೆ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ತಲುಪಿಸಿ, ಅವರನ್ನು ಆರ್ಥಿಕವಾಗಿ ಸಬಲರನ್ನಾಗಿಸುವಂತೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಎಸ್.ಅರುಣ್ ಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಬುಧವಾರ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಹಾಡಿ ಪ್ರದೇಶದಲ್ಲಿ ವಾಸಿಸುವ ಜನರಿಗೆ ಆಧಾರ್ ಕಾರ್ಡ್ ಇಲ್ಲದಿದ್ದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು ಖುದ್ದು ಹಾಜರಿದ್ದು, ಗ್ಯಾರಂಟಿ ಯೋಜನೆಗಳಿಂದ ಅರ್ಹರು ಬಿಟ್ಟುಹೋಗದಂತೆ ಗಮನ ಹರಿಸಬೇಕು. ಪಡಿತರ ಅಂಗಡಿಗಳ ಪರಿಶೀಲನೆ ನಡೆಸಿ, ಅನ್ನಭಾಗ್ಯ ಯೋಜನೆಯಡಿ ನೀಡುವ ಅಕ್ಕಿಯ ಗುಣಮಟ್ಟ ಪರಿಶೀಲಿಸಬೇಕು. ತೂಕ ಮಾಪನ ಪರಿಶೀಲನೆ ಯಾಗಬೇಕು ಎಂದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷ ಪ್ರೊ. ಶಿವಕುಮಾರ್ ಮಾತನಾಡಿ, ಸರ್ಕಾರದ ನಡೆ ಹಾಡಿಗಳ ಕಡೆ ಎಂಬಂತೆ ಹಾಡಿಗಳಲ್ಲಿರುವ ಫಲಾನುಭವಿಗಳಿಗೆ ಯೋಜನೆಗಳು ತಲುಪಿದರೆ, ಕಟ್ಟಕಡೆಯ ಜನರಿಗೂ ಗ್ಯಾರಂಟಿ ಯೋಜನೆಗಳು ತಲುಪಿ, ಸರ್ಕಾರದ ಯೋಜನೆ ಸಾರ್ಥಕತೆ ಕಾಣುತ್ತದೆ ಎಂದರು.

ಜಿಪಂ ಸಿಇಓ ಯುಕೇಶ್ ಕುಮಾರ್ ಮಾತನಾಡಿ, ಪಂಚ ಗ್ಯಾರಂಟಿ ಯೋಜನೆಯ ಐದು ಇಲಾಖೆಗಳು ಹಾಗೂ ಬುಡಕಟ್ಟು ಯೋಜನೆಗಳ ಇಲಾಖೆ ಒಟ್ಟಿಗೆ ಸೇರಿ ಹಾಡಿಗಳಿಗೆ ಭೇಟಿ ನೀಡಿ ಶಿಬಿರಗಳನ್ನು ನಡೆಸಿ ಅವರಿಗೆ ಗ್ಯಾರಂಟಿ ಯೋಜನೆಗಳನ್ನು ಒದಗಿಸುವುದರ ಜೊತೆಗೆ ಸರ್ಕಾರದ ಇನ್ನಿತರೆ ಯೋಜನೆಗಳನ್ನು ಒದಗಿಸಿಕೊಡಿ ಎಂದರು. ಉಪಾಧ್ಯಕ್ಷ ಕರೀಗೌಡ, ಸದಸ್ಯರಾದ ಸಾ.ಮಾ. ಯೋಗೇಶ್, ಸದಸ್ಯರಾದ ಹುಣಸೂರು ಬಸವಣ್ಣ, ಕುಮಾರಿ ಲಲಿತಾ, ಅಬ್ದುಲ್ ಖಾದರ್, ಚಲುವರಾಜು, ಎಂ.ಎಸ್. ಮಹದೇವ್, ಉದಯ್ ಶಂಕರ್, ಚಾಮರಾಜು, ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ ಮತ್ತಿತರರಿದ್ದರು.

ಕೆಎಸ್‌ಸಿಎ ಮೈಸೂರು ವಲಯದ ಸಂಚಾಲಕರಾಗಿ ಶ್ರೀನಿವಾಸಪ್ರಸಾದ್



ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಮೈಸೂರು ಝೋನ್ ನೂತನ ಸಂಚಾಲಕರಾಗಿ ಶ್ರೀನಿವಾಸಪ್ರಸಾದ್ ಬುಧವಾರ ತಮ್ಮ ಬೆಂಬಲಿಗರೊಂದಿಗೆ ಅಧಿಕಾರ ವಹಿಸಿಕೊಂಡರು.


ಮೈಸೂರು, ಡಿ.10(ಎಂಕೆ)– ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಮೈಸೂರು ವಲಯದ ನೂತನ ಸಂಚಾಲಕರಾಗಿ ಶ್ರೀನಿವಾಸಪ್ರಸಾದ್ ಬುಧವಾರ ಅಧಿಕಾರ ವಹಿಸಿಕೊಂಡರು.

ಮೈಸೂರು ಮಾನಸಗಂಗೋತ್ರಿ ಆವರಣದಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಸ್ಟೇಡಿಯಂನಲ್ಲಿರುವ ಕೆಎಸ್‌ಸಿಎ ಮೈಸೂರು ವಲಯ ಕಚೇರಿಯಲ್ಲಿ ಬುಧವಾರ ವಿಶೇಷ ಪೂಜೆ ಸಲ್ಲಿಸಿದ ಅವರು, ತಮ್ಮ ಬೆಂಬಲಿಗರು, ಹಿತೈಷಿಗಳೊಂದಿಗೆ ಕೆಎಸ್‌ಸಿಎ ಮೈಸೂರು ವಲಯದ ನೂತನ ಸಂಚಾಲಕರಾಗಿ ಅಧಿಕಾರ ವಹಿಸಿಕೊಂಡರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಾನು ಕ್ರಿಕೆಟ್ ಹಿನ್ನಲೆಯಿಂದ ಬಂದಿದ್ದೇನೆ. ಮುಂದೆಯೂ ಕ್ರಿಕೆಟ್‌ನೊಂದಿಗೆ ಇರಲಿದ್ದು, ಕ್ರಿಕೆಟ್ ಕ್ರೀಡೆಯ ಬೆಳವಣಿಗೆಯ ಕೆಲಸಗಳನ್ನು ಮಾಡಲಿದ್ದೇನೆ. ಮುಖ್ಯವಾಗಿ ಮೈಸೂರಿನಲ್ಲಿ ಕ್ರಿಕೆಟ್ ಪಂದ್ಯಾವಳಿಗಳನ್ನು ಹೆಚ್ಚೆಚ್ಚು ಆಯೋಜನೆ ಮಾಡುವ ಮೂಲಕ ಹೊಸ ಪ್ರತಿಭೆಗಳಿಗೆ ಅವಕಾಶ ಸೃಷ್ಟಿಸಬೇಕಿದೆ. ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದರು.

ಮೈಸೂರಿನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಸರ್ಕಾರ ಹಾಗೂ ಕೆಎಸ್‌ಸಿಎ ನೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಸ್ಟೇಡಿಯಂ ನಿರ್ಮಾಣಕ್ಕೆ ಪ್ರಯತ್ನ ಮಾಡಲಾಗುವುದು ಹಾಗೆಯೇ ಕರ್ನಾಟಕ ಪ್ರೀಮಿಯರ್ ಲೀಗ್ ಪಂದ್ಯಾವಳಿಯನ್ನು ವಿಜೃಂಭಣೆಯಿಂದ ಆಯೋಜಿಸಲು ಸಮಾಲೋಚನೆ ನಡೆಸಲಾಗುವುದು ಎಂದು ತಿಳಿಸಿದರು. ಈ ವೇಳೆ ಅವರ ಬೆಂಬಲಿಗರು, ಹಿತೈಷಿಗಳು ಹೂಗುಚ್ಛ ನೀಡಿ ಶುಭ ಕೋರಿದರು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ 13ನೇ ಪುಣ್ಯಸ್ಮರಣೆ



ಮೈಸೂರು ಅರಮನೆ ಮಂಡಳಿಯಲ್ಲಿ ರಾಜವಂಶಸ್ಥರಾದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ 13ನೇ ವರ್ಷದ 'ಪುಣ್ಯ ಸ್ಮರಣೆ' ಕಾರ್ಯಕ್ರಮ ನಡೆಯಿತು.

ಮೈಸೂರು, ಡಿ.10(ಎಂಕೆ)– ಮೈಸೂರು ಅರಮನೆ ಮಂಡಳಿ ಕಚೇರಿಯಲ್ಲಿ ರಾಜವಂಶಸ್ಥರಾದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ 13ನೇ ವರ್ಷದ 'ಪುಣ್ಯ ಸ್ಮರಣೆ' ಕಾರ್ಯಕ್ರಮ ನಡೆಯಿತು.

ಈ ವೇಳೆ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಗೌರವ ನಮನ ಸಲ್ಲಿಸಲಾಯಿತು. ಬಳಿಕ ಮಧುವನಕ್ಕೆ ಪೂಜೆ ಸಲ್ಲಿಸಲಾಯಿತು. ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹೆಚ್.ಸತೀಶ್, ಮಹೇಂದ್ರ, ಬುದ್ದಿ, ರಾಘವೇಂದ್ರ, ಗಂಗಾಧರಸ್ವಾಮಿ, ನಾಗರಾಜು, ಮಹೇಶ್, ಧರ್ಮಪಾಲ ಮತ್ತಿತರರಿದ್ದರು.

ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನದ ಪ್ರಯುಕ್ತ

ಮಾನವ ಹಕ್ಕುಗಳ ಬಲವರ್ಧನೆಗೆ ಒತ್ತಾಯಿಸಿ ಪ್ರತಿಭಟನೆ



ಮೈಸೂರಿನ ಗಾಂಧಿಚೌಕದಲ್ಲಿ ಜನ ಸಂಗ್ರಾಮ ಪರಿಷತ್ ವತಿಯಿಂದ ಬುಧವಾರ ಸಾಂಕೇತಿಕ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.10(ಪಿಎಂ)– ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನದ ಪ್ರಯುಕ್ತ ಮಾನವ ಹಕ್ಕುಗಳನ್ನು ಬಲವರ್ಧನೆ ಮಾಡುವಂತೆ ಒತ್ತಾಯಿಸಿ ಜನ ಸಂಗ್ರಾಮ ಪರಿಷತ್ ವತಿಯಿಂದ ಬುಧವಾರ ಸಾಂಕೇತಿಕ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿಚೌಕದ ಗಾಂಧಿ ಪ್ರತಿಮೆ ಮುಂದೆ ಕಪ್ಪುಪಟ್ಟಿ ಧರಿಸಿ ಸಮಾವೇಶಗೊಂಡ ಪ್ರತಿಭಟನಾಕಾರರು, ಮೊಂಬತ್ತಿ ಬೆಳಗಿದರಲ್ಲದೆ, ಮಾನವ ಹಕ್ಕುಗಳ ಉಳಿವಿಗೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ತಡೆಯಲು ಸರ್ಕಾರ ಪರಿಣಾಮಕಾರಿಯಾಗಿ ಕಠಿಣ ಕಾನೂನು ತರಬೇಕು ಎಂದು ಒತ್ತಾಯಿಸಿದರು.

ಸ್ವಾತಂತ್ರ್ಯ ಬಂದು 7 ದಶಕಗಳೇ ಕಳೆದಿವೆ. ಹೀಗಿದ್ದರೂ ಮಹಿಳೆಯರು, ದೀನ–ದಲಿತರು, ಬಡವರ ಮಾನವ ಹಕ್ಕುಗಳನ್ನು ಉಲ್ಲಂಘನೆ ಮಾಡುವಂತಹ ಪ್ರಕರಣಗಳು ಮರುಕಳಿಸುತ್ತಲೇ ಇವೆ. ಯಾವುದೇ ಸರ್ಕಾರಿ ಕಚೇರಿಗೆ ದುರ್ಬಲರೂ ಹೋದರೆ ಅವರ ನ್ಯಾಯಯುತ ಬೇಡಿಕೆಗಳಿಗೆ ಸ್ಪಂದಿಸದ ಎಷ್ಟೋ ಪ್ರಕರಣಗಳು ದೇಶದಲ್ಲಿ ದಿನ ನಿತ್ಯ ನಡೆಯುತ್ತಿವೆ. ವಿಶೇಷವಾಗಿ ಪೊಲೀಸ್ ಠಾಣೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದೌರ್ಜನ್ಯ ಪ್ರಕರಣಗಳು ನಡೆಯುತ್ತಿವೆ ಎಂದು ಆರೋಪಿಸಿದರು.

ದೇಶದ ಸಂವಿಧಾನದಲ್ಲಿ ಮಾನವ ಹಕ್ಕುಗಳ ರಕ್ಷಣೆಗೆ ಕಾನೂನು ಇದ್ದಾಗ್ಯೂ, ಆಳುವ ಸರ್ಕಾರಗಳು ಸರಿಯಾದ ರೀತಿಯಲ್ಲಿ ಜಾರಿ ಮಾಡುವಲ್ಲಿ ವಿಫಲವಾಗಿರುವುದೇ ಹೆಚ್ಚು. ವ್ಯವಸ್ಥೆ ಬಲಾಢ್ಯರ ಪರವಾಗಿ ನಿಲ್ಲುವುದರಿಂದ ಮಾನವ ಹಕ್ಕುಗಳ ಉಲ್ಲಂಘನೆ ನಿತ್ಯ ವರದಿಯಾಗುತ್ತಿವೆ. ಇಂತಹ ದೌರ್ಜನ್ಯ ತಡೆಗಟ್ಟಲು ಮಾನವ ಹಕ್ಕುಗಳ ಆಯೋಗ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧೀನದಲ್ಲಿ ಇದ್ದರೂ ಅವುಗಳು ಮುಕ್ತವಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡದಿರುವುದೇ ಹೆಚ್ಚಿದೆ ಎಂದು ದೂರಿದರು.

ಆಯೋಗಗಳು ಅಧಿಕಾರವನ್ನು ಸಮರ್ಪಕವಾಗಿ ಚಲಾಯಿಸಿ ಮಾನವ ಹಕ್ಕುಗಳನ್ನು ರಕ್ಷಣೆಗಾಗಿ ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಿಸಲು ಆಳುವ ಸರ್ಕಾರಗಳು ಅವುಗಳಿಗೆ ಪೂರ್ಣ ಸ್ವಾತಂತ್ರ್ಯ ನೀಡಬೇಕು ಎಂದು ಒತ್ತಾಯಿಸಿದರು. ಜನ ಸಂಗ್ರಾಮ ಪರಿಷತ್ ರಾಜ್ಯ ಗೌರವಾಧ್ಯಕ್ಷ ನಗರ್ಲೆ ಎಂ.ವಿಜಯಕುಮಾರ್, ರಾಜ್ಯ ಉಪಾಧ್ಯಕ್ಷ ಪಾಲಹಳ್ಳಿ ಪ್ರಸನ್ನ, ರೈತ ಸಂಘದ ರಘು, ಕರ್ನಾಟಕ ಅಂಗವಿಕಲರ ವೇದಿಕೆ ಅಧ್ಯಕ್ಷ ಎಂ.ಪ್ರಭುಸ್ವಾಮಿ, ವಕೀಲ ಕೆಂಪೇಗೌಡ, ಸಾಮಾಜಿಕ ಹೋರಾಟಗಾರ ರಾಜೇಂದ್ರ, ವಿವಿಧ ಸಂಘಟನೆಗಳ ಮುಖಂಡರಾದ ಕುಮುದಾ, ತ್ಯಾಗರಾಜ್, ಎನ್.ಟಿ. ಜ್ಞಾನಪ್ರಕಾಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ

ಮೈಸೂರು, ಡಿ.10– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಡಿಸೆಂಬರ್ 11 ರಂದು ಮಧ್ಯಾಹ್ನ 02 ಗಂಟೆಗೆ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಉಪಸಮಿತಿ ವತಿಯಿಂದ ಮಹಿಳೆಯರಿಗಾಗಿ "ರಂಗೋಲಿ" ಸ್ಪರ್ಧಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಡಿಸೆಂಬರ್ 10 ರಿಂದ 11 ರೊಳಗೆ ಅರ್ಧಗಂಟೆ ಮುಂಚಿತವಾಗಿ ತಮ್ಮ ಹೆಸರುಗಳನ್ನು ಮಹಿಳಾ ಮತ್ತು ಮಕ್ಕಳ ಉಪಸಮಿತಿ ಅಧ್ಯಕ್ಷರಾದ ಭವ್ಯ ಅಭಿಷೇಕ್, ಮೊ.ಸಂ: 9606990727 ಮತ್ತು ಅನುಸೂಯ ಮೊ.ಸಂ: 9611600103 ಅವರಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ.

ಮಹಿಳಾ ಮತ್ತು ಮಕ್ಕಳ ಉಪ ಸಮಿತಿ ಪರವಾಗಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನೀಡಲಾಗುವುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮ್ಮಸಂದ್ರ ಸುರೇಶ್‌ಗೆ ಪುಸ್ತಕ ಬಹುಮಾನ



ಮೈಸೂರು, ಡಿ. 10– ಬಿ.ಎಂ.ಶ್ರೀ ಪ್ರತಿಷ್ಠಾನ ನೀಡುವ ಸಾರಂಗಿ ವೆಂಕಟರಾಮಯ್ಯ ಪುಟ್ಟಚ್ಚಮ್ಮ ದತ್ತಿ ಪುಸ್ತಕ ಬಹುಮಾನಕ್ಕೆ ಡಾ. ಅಮ್ಮಸಂದ್ರ ಸುರೇಶ್ ಅವರ 'ಅಗ್ನಿಕುಂಡದಿಂದ ಬಂದ ಚೇತನ' ಕಾದಂಬರಿ ಆಯ್ಕೆಯಾಗಿದೆ. ಇದೇ ಡಿ. 23ರಂದು ಬೆಂಗಳೂರಿನ ಬಿ.ಎಂ. ಶ್ರೀ ಪ್ರತಿಷ್ಠಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆ ಮಾಡಲಾಗುವುದು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜುತಿಳಿಸಿದ್ದಾರೆ. ಅಮ್ಮಸಂದ್ರ ಸುರೇಶ್ ಮೈಸೂರು ಅಂಚೆ ವಿಭಾಗದಲ್ಲಿ ಮಾರುಕಟ್ಟೆ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಡಿ. 10– ಶ್ರೀ ಶ್ರೀ ರವಿಶಂಕರ್ ಗುರುದೇವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಡಿ. 16 ರಿಂದ 20 ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಿಗ್ಗೆ 6 ರಿಂದ 8.30 ಹಾಗೂ ಸಂಜೆ 6 ರಿಂದ 8.30 ವರೆಗೆ ಎರಡು ಅವಧಿಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9480476825, 9483589825 ಸಂಪರ್ಕಿಸಬಹುದು.

ಜೈ ಚಾಮುಂಡಿ ಟಾರ್ಗೆಟ್ ಶೂಟಿಂಗ್ ಅಕಾಡೆಮಿಯ ಶೂಟರ್‌ಗಳು ರಾಷ್ಟ್ರಮಟ್ಟದ ಶೂಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆ



ಮೈಸೂರು, ಡಿ.10– ಮೈಸೂರಿನ ಜೈ ಚಾಮುಂಡಿ ಟಾರ್ಗೆಟ್ ಶೂಟಿಂಗ್ ಅಕಾಡೆಮಿಯ 9 ಶೂಟರ್‌ಗಳು ಡಿ. 11 ರಿಂದ ನಡೆಯುವ 68ನೇ ರಾಷ್ಟ್ರ ಮಟ್ಟದ ಶೂಟಿಂಗ್ ಚಾಂಪಿಯನ್‌ಶಿಪ್‌ಗೆ ಭಾಗವಹಿಸಲು ಅರ್ಹತೆ ಪಡೆದಿದ್ದಾರೆ.

ಅನುಶ್ರೀ ಜಕ್ಕನಟ್ಟಿ, ನರೇನ್ ಅಯ್ಯಪ್ಪ ಟಿ.ಟಿ, ಪ್ರೇಮ್ ಹೆಚ್, ಪ್ರೀತಂ ಜೇವೂರ್, ಚಿರಾಂತ್ ಡಿ, ಖುಶಾಂಕ್ ಆರ್ ಭಟ್, ಅರ್ನವ್ ಎ ಶರ್ಮ, ರಿಷಿ ರಾಜ್ ಶಾ, ಪಾವನಿ ಕಾಮತ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾದವರಾಗಿದ್ದು, ಇವರನ್ನು ಜಯಂತ್ ಪಿ (ಮುಖ್ಯ ತರಬೇತುದಾರರು ಮತ್ತು ಕಾರ್ಯದರ್ಶಿಗಳು), ಪುರುಷೋತ್ತಮ ಎಸ್ (ಅಕಾಡೆಮಿ ಅಧ್ಯಕ್ಷ), ಸಹಾಯಕ ಪೊಲೀಸ್ ಸಬ್–ಇನ್ಸ್‌ಪೆಕ್ಟರ್, ವಿ.ವಿ ಪುರಂ ಪೊಲೀಸ್ ಠಾಣೆ, ಮಹೇಶ್ ಎಂ.ಎನ್ (ಸಹಾಯಕ ತರಬೇತುದಾರರು ಮತ್ತು ತಂಡದ ವ್ಯವಸ್ಥಾಪಕರು) ಅಭಿನಂದಿಸಿದ್ದಾರೆ.

76ನೇ ಸಂವಿಧಾನ ದಿನಾಚರಣೆ



ಮೈಸೂರು, ಡಿ.10– ಅಖಿಲ ಭಾರತೀಯ ಅಧಿವಕ್ತ ಪರಿಷತ್, ಕರ್ನಾಟಕ ದಕ್ಷಿಣ ಪ್ರಾಂತ್ಯ, ಮೈಸೂರು ಘಟಕ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮತ್ತು ಯಂಗ್ ಇಂಡಿಯನ್ಸ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ 76 ನೇ ಸಂವಿಧಾನ ದಿನಾಚರಣೆ ಹಾಗೂ ವಕೀಲರ ದಿನಾಚರಣೆ ಮತ್ತು 2025 ನೇ ಸಾಲಿನ ಪ್ರಶಿಕ್ಷಣ ವರ್ಗ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಧಿವಕ್ತ ಪರಿಷದ್ ಮೈಸೂರು ಘಟಕದ ಅಧ್ಯಕ್ಷೆ ಶ್ರೀಮತಿ ವಿ. ಶಾರದ ವಹಿಸಿದ್ದರು. 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರನ್ಯಾಯಾಧೀಶ ಗುರುರಾಜ್ ಸೋಮಕ್ಕಳವರ್ ಕಾರ್ಯಕ್ರಮ ಉದ್ಘಾಟಿಸಿದರು. ಹಿರಿಯ ವಕೀಲ ಕೆ.ಆರ್. ಶಿವಶಂಕರ್, ರಾಷ್ಟ್ರೀಯ ಕಾರ್ಯಕಾರಣಿ ಸದಸ್ಯ ಶೌರಿ ಹೆಚ್.ಆರ್., ಅಖಿಲ ಭಾರತೀಯ ಅಧಿವಕ್ತ ಪರಿಷತ್, ಮೈಸೂರು ಘಟಕದ ಉಪಾಧ್ಯಕ್ಷ ಡಿ.ರವಿಕುಮಾರ್ ಉಪಸ್ಥಿತರಿದ್ದರು.

'ಸಮತೆಂತೋ' ರಂಗ ಸಂಭ್ರಮ ನಾಳೆಯಿಂದ

ಮೈಸೂರು, ಡಿ.10– ಮೈಸೂರಿನ ಸಮತೆಂತೋ ರಂಗ ತಂಡವು ಪ್ರತಿ ವರ್ಷದಂತೆ ಈ ವರ್ಷವೂ ಸಮತೆಂತೋ ರಂಗ ಸಂಭ್ರಮವನ್ನು ಡಿ.12, 13 ಮತ್ತು 14ರಂದು ಸಂಜೆ 6.30 ಗಂಟೆಗೆ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಆಯೋಜಿಸಿದೆ.

ಡಿಸೆಂಬರ್ 12ರಂದು ಸಂಜೆ 6.30ಕ್ಕೆ ಏರ್ಪಡಿಸಿರುವ ಸಮಾರಂಭದಲ್ಲಿ ರಂಗಕರ್ಮಿ ಪ್ರಸನ್ನ ಹೆಗ್ಗೋಡು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಎಚ್.ಎಸ್. ಉಮೇಶ್ ಅವರ ಹೊಸ ನಾಟಕ ಕೃತಿಗಳಾದ 'ದುಡ್ಡಿನ ದೇವರು' 'ಮಂಟಿಲ' ಮತ್ತು 'ಅವನ ಆಳು ಮಾಟ್ಟಿ' ಬಿಡುಗಡೆಗೊಳಿಸುವರು. ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ ಸಮತೆಂತೋವಿನ ಯೂಟ್ಯೂಬ್ ಚಾನೆಲ್‌ಗೆ ಚಾಲನೆ ನೀಡುವರು. ಹಿರಿಯ ರಂಗಕಲಾವಿದೆ ರಾಮೇಶ್ವರಿ ವರ್ಮಾ ಅಧ್ಯಕ್ಷತೆ ವಹಿಸುವರು.

ಸಮಾರಂಭದ ನಂತರ ಟಿ.ಪಿ.ಕೈಲಾಸಂ ಅವರ 'ಪುಲ್ ಫಿಲ್ ಮೆಂಟ್' ನಾಟಕವನ್ನು ನ.ರತ್ನ ಕನ್ನಡಕ್ಕೆ ತಂದಿರುವ 'ಗುರಿಮುಟ್ಟು' ನಾಟಕವು ಪ್ರದರ್ಶನಗೊಳ್ಳಲಿದೆ. ಇದರ ನಿರ್ದೇಶಕರು ಎಚ್.ಎಸ್.ಉಮೇಶ್. ಈ ನಾಟಕಕ್ಕೆ ಪ್ರವೇಶ ಉಚಿತ ಇರುತ್ತದೆ.

13ರಂದು ಸಂಜೆ 6.30ಕ್ಕೆ 'ಗುಂಡಾಯಣ' ನಾಟಕವಿದೆ. ಮೂಲ ಕಥೆ ನಾ. ಕಸ್ತೂರಿ ಅವರದು. ಇದನ್ನು ರಂಗರೂಪಕ್ಕೆ ತಂದವರು ಲಕ್ಷ್ಮಿ ಚಂದ್ರಶೇಖರ್. ಇದು ಬೆಂಗಳೂರಿನ ಕ್ರಿಯೇಟಿವ್ ರಂಗ ತಂಡ ಪ್ರಸ್ತುತಪಡಿಸಲಿದೆ. ಇದರ ನಿರ್ದೇಶನ ಜೋಸೆಫ್ ಜಾನ್.

14ರಂದು ಸಂಜೆ 6.30ಕ್ಕೆ 'ದುಡ್ಡಿನ ದೇವರು' ನಾಟಕವಿದೆ. ಗ್ರೀಕ್ ಮೂಲ ಅರಿಸ್ಟೋಫೆನಸ್. ಇದರ ಅನುವಾದ ಮತ್ತು ನಿರ್ದೇಶನ ಎಚ್.ಎಸ್.ಉಮೇಶ್ ಅವರದು. ಮೂರು ದಿನಗಳವರೆಗೆ ನಾಟಕದ ಮೊದಲು ರಂಗಗೀತೆಗಳಿರುತ್ತವೆ ಎಂದು ಸಮತೆಂತೊ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.12.2025 ಗುರುವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2025 ರಿಂದ 15.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯುವರೆಗೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಹುಟ್ಟಿನಿಂದ 16 ವರ್ಷ ವಯಸ್ಸಿನ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಗಾಗಿ ಮಕ್ಕಳಿಗೆ ಸ್ವರ್ಣಪ್ರಾಶನ ಕಾರ್ಯಕ್ರಮ. ಕಿಟಿಬ ಕುಷ್ಟ (Psoriasis). ಋತು ಚಕ್ರದ ಸಮಸ್ಯೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್ ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ :** ಇಂಡಿಯಾ ಬಯೋ ಇಮೇಜಿಂಗ್ ಪ್ರಥಮ ವಾರ್ಷಿಕ ಸಮ್ಮೇಳನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಜೆಎಸ್‌ಎಸ್ ಎಹೆಚ್‌ಇಆರ್ ಸಮಕುಲಾಧಿಪತಿ ಡಾ. ಬಿ. ಸುರೇಶ್, ಮುಖ್ಯ ಅತಿಥಿಗಳು : ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಗಿರಿಧರ್ ಪರ್ವತಮ್, ಕುಲಸಚಿವ ಡಾ. ಬಿ. ಮಂಜುನಾಥ, ಡೀನ್ ಡಾ. ವಿಶಾಲ್ ಕುಮಾರ್ ಗುಪ್ತಾ, ಡೀನ್ ಡಾ. ಪ್ರಶಾಂತ್ ವಿಶ್ವನಾಥ್, ಡಾ. ಸಂತೋಷ್ ಪಾಡರ್, ಡಾ. ಎಸ್. ಚಂದನ್, ಡಾ. ಎ. ಜಮುನಾ ಬಾಯಿ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ :** ಭಾರತೀಯ ಭೌಗೋಳಿಕ ರಾಜಕೀಯದ ಭೌಗೋಳಿಕ ದೃಷ್ಟಿಕೋನಗಳು ಕುರಿತು ಫ್ಯಾಕಲ್ಟಿ ಡೆವಲಪ್‌ಮೆಂಟ್ ಕಾರ್ಯಕ್ರಮ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಪ್ರಾಸ್ತಾವಿಕ ನುಡಿ : ಐಜಿಪಿ (ನಿವೃತ್ತ) ಅರ್ಕೇಶ್, ಉಪಸ್ಥಿತರು : ಹಿರಿಯ ಪ್ರಾಧ್ಯಾಪಕ ಪ್ರೊ. ಬಿ. ಚಂದ್ರಶೇಖರ, ಸ್ಥಳ: ಜಿಯೋ ಮಾನಸ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ವೃತ್ತಿ ಕೇಂದ್ರ, ಬಿ.ಎನ್. ಬಹದ್ದೂರ್ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ :** ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಅರಿವು ಮೂಡಿಸುವ ಮತ್ತು ಸಂವಾದ ಕಾರ್ಯಕ್ರಮ, ಅಧ್ಯಕ್ಷತೆ : ಬಿಐಎಂಎಸ್ ನಿರ್ದೇಶಕ ಪ್ರೊ. ಆರ್. ಮಹೇಶ್, ಉದ್ಘಾಟನೆ : ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ. ರಂಗೇಗೌಡ, ಮುಖ್ಯ ಅತಿಥಿಗಳು : ಗಿರೀಶ್ ಭಾಗ, ಡಾ. ಎಂ.ಬಿ. ಸುರೇಶ್, ಡಿ. ರವಿಶಂಕರ್, ಸ್ಥಳ : ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಶ್ರೀಮಾತೆ ಶಾರದಾದೇವಿಯವರ 173ನೇ ಜನ್ಮ ದಿನ, ಬೆಳಗ್ಗೆಯಿಂದ ವೇದ ಮಂತ್ರ ಪಠನ, ಮಂಗಳಾರತಿ, ಭಜನೆ, ವಿಶೇಷ ಪೂಜೆ, ಲಲಿತಾಸಹಸ್ರನಾಮ ಪಾರಾಯಣ, ಭಜನೆ, ಗ್ರಂಥವಾಚನ, ಆರತಿ, ಹೋಮ, ಪ್ರಸಾದ ವಿತರಣೆ, ಸಂಜೆ 4.30 ರಿಂದ ಭಜನೆ–ಶ್ರೀ ಶಾರದಾ ಸಂವಿತ್ ಭಜನಾ ಮಂಡಳಿ, ಸಂಜೆ 6 ರಿಂದ ಕನ್ನಡದಲ್ಲಿ ಪ್ರವಚನ – ಶ್ರೀಮಾತೆ ಶಾರದಾದೇವಿ, ರಾ. 7 ರಿಂದ ಆರತಿ ಮತ್ತು ವಿಶೇಷ ಭಜನೆ, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಸೆಂಟರ್ :** ಮೈಬಿಲ್ಡ್–25 ವಸ್ತುಪ್ರದರ್ಶನ, ಮುಖ್ಯ ಅತಿಥಿಗಳು : ಪಬ್ಲಿಕ್ ಟಿವಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಅಧ್ಯಕ್ಷರಾದ ಹೆಚ್.ಆರ್. ರಂಗನಾಥ್, ಅಧ್ಯಕ್ಷತೆ : ಬಿಎಐ ರಾಷ್ಟ್ರೀಯ ಅಧ್ಯಕ್ಷ ರಾಜೇಂದ್ರ ಸಿಂಗ್ ಕಂಬೋ, ಗೌರವ ಅತಿಥಿಗಳು : ಬಿಎಐ ರಾಷ್ಟ್ರೀಯ ಉಪಾಧ್ಯಕ್ಷ ಡಿ.ವಿ.ಎಸ್. ರೆಡ್ಡಿ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಸಂಜೆ 4.30ಕ್ಕೆ.

■ **ಅರಮನೆ ಕೋಟೆ ಉತ್ತರ ಬಾಗಿಲು ಶ್ರೀ ಆಂಜನೇಯಸ್ವಾಮಿ ದೇವಸ್ಥಾನ:** ಶ್ರೀ ಹನುಮ ಜಯಂತಿ ಮಹೋತ್ಸವ, ಸಂಜೆ 5.30 ರಿಂದ ಚಿಗುರು ಭಜನಾ ಮಂಡಳಿಯಿಂದ ಭಜನೆ, ಸಂಜೆ 7 ರಿಂದ ಶ್ರೀದೇವಿ ಸಚಿನ್ ಮತ್ತು ತಂಡದವರಿಂದ ಭಕ್ತಿಗೀತೆ, ಸ್ಥಳ: ಅರಮನೆ ಕೋಟೆ ಉತ್ತರ ಬಾಗಿಲು ಆಂಜನೇಯ ಸ್ವಾಮಿ ದೇವಸ್ಥಾನ.

■ **ಸಾಧನಾ ಮಂದಿರ, ಮೈಸೂರು :** ಸರಸ್ವತಿ ಪೂಜೆ ಮಾಡುವ ಬಗ್ಗೆ ವಿಶೇಷ ತರಬೇತಿ, ಸ್ವಾಮಿ ಹಂಸಾನಂದ ಅವರಿಂದ. ಸಂಜೆ 6.30 ರಿಂದ ಶ್ರೀರಾಮಪುರ 2ನೇ ಹಂತದಲ್ಲಿರುವ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಸಂಜೆ 7 ರಿಂದ ಮೈಸೂರು ಯೋಗಾಲಯ, ವಿವೇಕಾನಂದ ನಗರ ಎಸ್‌ಬಿಎಂ ಲೇಔಟ್.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಕೆ. ಶ್ರೇಯಾ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಕನ್ನಡದ ಕಸ್ತೂರಿ–ನಾ ಕಸ್ತೂರಿ ನೆನಪುಗಳ ಮಾಲಿಕೆ, ನಾ. ಕಸ್ತೂರಿ ಸಂಸ್ಮರಣೋತ್ಸವದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರ ಆಶಯ ನುಡಿಗಳ ಪ್ರಸಾರ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎನ್. ರಮಣಿ – ಕೊಳಲುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ರಸಮಂಜರಿ–ಗಣಿತ ಸಂಸ್ಕೃತ–ಭಾರತೀಯ ಗಣಿತ ಶಾಸ್ತ್ರ ಪರಂಪರೆ ಒಂದು ಅವಲೋಕನ ಈ ಕುರಿತು ಮೈಸೂರಿನ ಗಣಿತ ಸಂಶೋಧನಾ ವಿದ್ಯಾರ್ಥಿ ವೃಕ್ಷ ವರ್ಧನ ಹೆಬ್ಬಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಸುರಭಿ ತಾತಾಚಾರ್, 6.50 ಕೃಷಿರಂಗ, ಕಿಸಾನ್‌ವಾಣಿ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ. ಅರಿಸಿಣದ ಮೌಲ್ಯವರ್ಧನೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಎ.ಬಿ.ಮೋಹನ್ ಕುಮಾರ್ ಹಾಗೂ ಡಾ. ಜಿ ದೀಪಾ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಆರ್.ಎನ್. ಶೀಲತಾ – ಹಾಡುಗಾರಿಕೆ, 10.00 ನಾಟಕ–ಬೇರು ಬಿಡದ ಮರ, 10.30 ಸವಿನೆನಪು

ಇನ್ನು ಆರು ತಿಂಗಳಲ್ಲಿ ಚಾಮುಂಡೇಶ್ವರಿ ಕ್ಷೇತ್ರದ

ಮನೆಗಳಿಗೆ 24 ಗಂಟೆಯೂ ಕುಡಿಯುವ ನೀರು ಪೂರೈಕೆ

● ಶಾಸಕ ಜಿ.ಟಿ.ದೇವೇಗೌಡ ಘೋಷಣೆ ● ವಿಜಯನಗರ ಮೂರನೇ ಹಂತದಲ್ಲಿ ವೀರಶೈವ ಲಿಂಗಾಯತ ಬಸವ ಬಳಗ ಉದ್ಘಾಟನೆ ● ಹೋರಾಟ ಮಾಡಿ ಹೂಟಗಳ್ಳಿ ನಗರಸಭೆ ಗ್ರೇಟರ್ ಮೈಸೂರ್‌ಗೆ ಸೇರ್ಪಡೆ



ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಜಿ.ಟಿ.ದೇವೇಗೌಡ ಸಮ್ಮುಖದಲ್ಲಿ ವೀರಶೈವ ಲಿಂಗಾಯತ ಬಸವ ಬಳಗವನ್ನು ಉದ್ಘಾಟಿಸಲಾಯಿತು.

ಮೈಸೂರು,ಡಿ.10(ಎಸ್‌ಪಿಎನ್)– ಮುಂದಿನ ಆರು ತಿಂಗಳಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಪ್ರತಿ ಹಳ್ಳಿ ಹಳ್ಳಿಗಳಿಗೂ ದಿನದ 24ಗಂಟೆಯೂ ನೀರು ಪೂರೈಕೆಯಾಗಲಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ಮೈಸೂರು ವಿಜಯನಗರ ಮೂರನೇ ಹಂತದ ವಿ.ಕೆ. ಪಬ್ಲಿಕ್ ಸ್ಕೂಲ್ ಆವರಣದಲ್ಲಿ ವೀರಶೈವ ಲಿಂಗಾಯತ ಬಸವ ಬಳಗದ ವತಿಯಿಂದ ಆಯೋಜಿಸಿದ್ದ ಬಳಗದ ಉದ್ಘಾಟನೆ, ಪದಾಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು, ಮಾತನಾಡಿದರು.

ವಿಜಯನಗರ ಮೂರು ಮತ್ತು ನಾಲ್ಕನೇ ಹಂತ, ವಿಜಯಶ್ರೀಪುರ, ಹಿನಕಲ್ ಸೇರಿದಂತೆ ಇತರೆ ಪ್ರದೇಶಗಳನ್ನು ಮೈಸೂರು ನಗರ ಪಾಲಿಕೆಗೆ ಸೇರಿಸಲು ಪ್ರಯತ್ನ ಮಾಡಿದೆ. ವಿಜಯನಗರ ನಾಲ್ಕನೇ ಹಂತ, ಹಿನಕಲ್‌ನಲ್ಲಿ ಅನೇಕ ಕೆಲಸಗಳನ್ನು ಪೂರ್ಣಗೊಳಿಸಿದ್ದೇನೆ. ಯುಜಿಡಿ ಮತ್ತು ಚರಂಡಿ ಮಾಡಿಸುವ ಜತೆಗೆ ಸುಂದರವಾದ ರಸ್ತೆಗಳನ್ನು ಮಾಡಿಸಿದ್ದೇನೆ.

ಕಳೆದ ಎರಡು ವರ್ಷಗಳ ಹಿಂದೆ ವಿಜಯನಗರ ಮೂರು, ನಾಲ್ಕನೇ ಹಂತವನ್ನು ನಗರಪಾಲಿಕೆಗೆ ಸೇರಿಸಲು ಯತ್ನಿಸಿದಾಗ ಬಿಜೆಪಿ–ದಳ, ಕಾಂಗ್ರೆಸ್ ಸೇರಿದಂತೆ ಎಲ್ಲರೂ ವಿರೋಧ ಮಾಡಿದರು. ಬಳಿಕ ಮಾಜಿ ಸಂಸದ ಪ್ರತಾಪ್‌ಸಿಂಹ, ಮಾಜಿ ಸಚಿವ ಎಸ್.ಟಿ.ಸೋಮಶೇಖರ್ ಎಲ್ಲರೊಂದಿಗೆ ಹದಿನೈದು ದಿನಗಳ ಕಾಲ ನಿರಂತರ ಒತ್ತಡದಿಂದಾಗಿ ಹೂಟಗಳ್ಳಿ ನಗರಸಭೆಯನ್ನಾಗಿ ಮಾಡಲಾಯಿತು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಒತ್ತಡ ತಂದು, ಹೂಟಗಳ್ಳಿ ನಗರಸಭೆಯನ್ನು ಗ್ರೇಡ್–1 ಮೈಸೂರು ಪಾಲಿಕೆಗೆ ಸೇರಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರದ ಜನರ ಹೋರಾಟದ ಫಲವಾಗಿ ಗ್ರೇಡ್–1 ಮೈಸೂರು ರಚನೆಯಾಗಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ 26 ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ, ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದೆ. ಮುಂದಿನ ಆರು ತಿಂಗಳಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಪ್ರತಿ ಗ್ರಾಮ, ಬಡಾವಣೆಗಳಿಗೆ ದಿನದ 24 ಗಂಟೆಯೂ ಕುಡಿಯುವ ನೀರು ಪೂರೈಕೆ ಮಾಡಲು ಶ್ರಮಿಸುತ್ತಿದ್ದೇನೆ. ನಾನು ಚುನಾವಣೆಯಲ್ಲಿ ಎರಡು ಬಾರಿ ಪ್ರತಾಪ್ ಸಿಂಹ, ಈಗ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗೆಲುವಿಗೆ ಹದಿನೈದು ದಿನಗಳ ಕಾಲ ಶ್ರಮಿಸಿರುವೆ. ಬಿಜೆಪಿಗೆ ಮಹಾಪೌರ–ಉಪ ಮಹಾಪೌರ ಸ್ಥಾನ ಸಿಗಲು ನಾನೇ ಸಹಾಯ ಮಾಡಿದ್ದೆ. ಆದರೆ, ನನ್ನ ಚುನಾವಣೆಯಲ್ಲಿ ಕೆಲ ನಾಯಕರು ದೂರ ಸರಿದು ಸಹಾಯ ಮಾಡಲಿಲ್ಲ ಎಂದು ಬೇಸರ ಹೊರಹಾಕಿದರು.

ಭಾಷಣ ಮಾಡುವವರಿಂದಲೇ ಜಾತೀಯತೆ ಪೋಷಣೆ: ಸಾಮಾಜಿಕ ಅನಿಷ್ಟ,ಮೌಢ್ಯತೆ ದೂರ ಮಾಡಿ ಸಾಮಾಜಿಕ ನ್ಯಾಯ, ಸಮಾನತೆಯ ಬೆಳಕು ಹರಿಸಿದ ಬಸವಣ್ಣನವರ ವಚನ ಸಾಹಿತ್ಯವನ್ನು ಯುವ ಜನತೆಗೆ ತಿಳಿಸಬೇಕು. ಜಾತೀಯತೆ ನಿರ್ಮೂಲನೆ ಕುರಿತು ಗಂಟೆಗಟ್ಟಲೆ ಭಾಷಣ ಮಾಡುವವರಿಂದಲೇ ಜಾತೀಯತೆ ಹೆಚ್ಚಾಗಿದೆ. ಅಲ್ಲದೆ, ಬಸವಣ್ಣ, ಬುದ್ಧ, ವಿವೇಕಾನಂದ, ಡಾ.ಬಿ.ಆರ್. ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯ, ಸಮಾನತೆಯನ್ನು ಪ್ರತಿಪಾದಿಸಿದ್ದಾರೆ. ಬಸವಣ್ಣ ಅವರು ದಯವೇ ಧರ್ಮದ ಮೂಲವಯ್ಯಾ ಎಂದಿದ್ದಾರೆ. ಬಡವರ ಬಗ್ಗೆ ಅಬಲೆಯರ ಬಗ್ಗೆ ಪ್ರೀತಿ, ಕರುಣೆ, ಮಾನವೀಯ ಮೌಲ್ಯದಿಂದ ನೋಡುವುದನ್ನು ಹೇಳಿಕೊಟ್ಟರು. ಆದರೆ, ಇಂದಿಗೂ ಸಮಾಜದಲ್ಲಿ ಜಾತೀಯತೆ ನಿರ್ಮೂಲನೆಯಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

12ನೇ ಶತಮಾನದಲ್ಲಿ ಬಸವಣ್ಣ ನಡೆಸಿದ ಕ್ರಾಂತಿ ಇಂದಿಗೂ ಮರೆಯಲಾಗದ ಕ್ಷಣ. ಉತ್ತರ ಕರ್ನಾಟಕ ಪ್ರವಾಸಕ್ಕೆ ಹೋದಾಗಲೆಲ್ಲಾ ಬಸವ ಕಲ್ಯಾಣ, ಕೂಡಲ ಸಂಗಮಕ್ಕೆ ಹೋಗಿಯೇ ಬರುತ್ತೇನೆ. ಬಸವಣ್ಣ, ಅಲ್ಲಮಪ್ರಭು ಸೇರಿದಂತೆ ಅನೇಕ ಶರಣರ ವಚನಸಾಹಿತ್ಯವನ್ನು ಪೂರ್ಣವಾಗಿ ಅಧ್ಯಯನ ಮಾಡಲು ಸಾಧ್ಯವಾಗಿಲ್ಲ. ವಚನ ಸಾಹಿತ್ಯವನ್ನು ನಿರಂತರವಾಗಿ ಅಧ್ಯಯನ ಮಾಡುತ್ತಾ ಹೋದರೆ ದಾರ್ಶನಿಕರುಗಳ ಕೊಡುಗೆ ಗೊತ್ತಾಗುತ್ತದೆ ಎಂದರು.

> ಲಿಂಗಾಯತ ಸಮುದಾಯ ಬಸವ ತತ್ವ ಪಾಲನೆ ಮಾಡಬೇಕು. ಇಲ್ಲದಿದ್ದರೆ, ಬೇರೆಬೇರೆ ಸಮುದಾಯಗಳು ನಿಮ್ಮಿಂದ ದೂರ ಸರಿಯುತ್ತವೆ. ಹಾಗಾಗಿ ಪ್ರತಿಯೊಬ್ಬ ಶರಣರು, ಬಸವಣ್ಣ ಪಾಲಿಸಿದ ಕಾಯಕ ದಾಸೋಹವನ್ನು ಅನುಸರಿಸಬೇಕು.
> –ಡಾ.ಕೆ.ಸಿ.ಬಸವರಾಜು,
> ನಿವೃತ್ತ ಪ್ರಾಧ್ಯಾಪಕ

ಬಸವಣ್ಣನವರ ಉತ್ಸವವನ್ನು ರಾಜ್ಯಾದ್ಯಂತ ಮಾಡಲಾಗುತ್ತಿದೆ. ಬಸವ ಕಲ್ಯಾಣದಿಂದ ಆರಂಭವಾಗಿ ಕರ್ನಾಟಕದ ಮೂಲೆ ಮೂಲೆಗಳಲ್ಲೂ ಬಸವಣ್ಣನವರ ಜಯಂತಿ ಆಚರಿಸಿ ಸುಮ್ಮನಾಗುವೆ, ಇಂದಿನ ಯುವ ಜನತೆಗೆ ವಚನಸಾಹಿತ್ಯದಲ್ಲಿರುವ ಸಾರವನ್ನು ತಿಳಿಸಿಕೊಡುವ ಕೆಲಸ ಆಗಬೇಕಿದೆ. ಜಾತೀಯತೆಯನ್ನು ತೊಲಗಿಸಿ ಸಮಾನತೆಯ ಸಮಾಜ ನಿರ್ಮಾಣ ಮಾಡಬೇಕೆಂದು ಹೇಳುತ್ತಾರೆ. ಆದರೆ, ಜಾತಿಗಳ ಎತ್ತಿಕಟ್ಟುವ ಕೆಲಸ ನಡೆಯುತ್ತಿದೆ ಎಂದರು.

ಬಸವ ಬಳಗದ ಮೂಲಕ ಅರಿವು, ಸಂಸ್ಕೃತಿ, ಜ್ಞಾನದ ಪ್ರಸಾರ ಮಾಡುವ ಕೆಲಸ ಮಾಡಬೇಕು. ಯುವ ಜನತೆಗೆ ಚಂಚಲ ಮನಸ್ಸು ಹೆಚ್ಚಾಗುತ್ತಿರುವುದರಿಂದ ವಚನ ಸಾಹಿತ್ಯಗಳ ಮೂಲಕ ಮನಸ್ಸನ್ನು ಬದಲಿಸಬೇಕು. ಜನರಿಗೆ ಬಸವಣ್ಣನವರ ವಚನ ಸಾಹಿತ್ಯವನ್ನು ತಿಳಿಸಬೇಕು. ಮಕ್ಕಳಿಗೆ ಕಲಿಸುವ ಸಂಸ್ಕಾರ ಅವರ ಬೆಳವಣಿಗೆಗೆ ಪೂರಕವಾಗಲಿದೆ ಎಂದು ಹೇಳಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಬಳಗವನ್ನು ಉದ್ಘಾಟಿಸಿದರು. ವಿಜಯನಗರ ಮೂರನೇ ಹಂತದ ವೀರಶೈವ ಲಿಂಗಾಯತ ಬಸವ ಬಳಗ ಅಧ್ಯಕ್ಷ ಡಿ.ಎಂ.ಶಿವಪ್ರಸಾದ್ ಉಪಸ್ಥಿತರಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ವಿಶೇಷ ಉಪನ್ಯಾಸ ನೀಡಿದರು.

ಶ್ರೀಬಸವೇಶ್ವರ ಪಟ್ಟದ ಮಠದ ಶ್ರೀಚಂದ್ರಶೇಖರ ಸ್ವಾಮೀಜಿ, ಮೈಮುಲ್ ಮಾಜಿ ನಿರ್ದೇಶಕ ಎಸ್.ಸಿ.ಅಶೋಕ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಎಚ್.ವಿ.ಬಸವರಾಜು, ಮೈಸೂರು ನಗರ ಅಧ್ಯಕ್ಷ ಎಂ.ಎಚ್.ಚಂದ್ರಶೇಖರ್, ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ.ಸಿ.ಬಸವರಾಜು, ನಿರ್ದೇಶಕರಾದ ಡಾ.ಶೈಲಾ ನಾಗರಾಜ್, ಬಸವ ಜಯಂತಿ ಉತ್ಸವದ ಅಧ್ಯಕ್ಷ ಬಿ.ಕೆ.ನಾಗರಾಜು, ಕೆ.ಎಸ್.ಮಹಾಲಕ್ಷ್ಮೀ, ಕೆಎಸ್.ಮಂಜುನಾಥ, ಎನ್.ಮಂಜುನಾಥ್, ಎಚ್.ಎಸ್.ಪ್ರಕಾಶ್, ಎಸ್.ಶಿವಕುಮಾರ್, ಗಂಗಾಧರ್ ವಿ.ಹಟ್ಟಿಹೊಳಿ, ಬಿ.ಕಾರ್ತಿಕ್, ಮಲ್ಲಿಕಾರ್ಜುನಸ್ವಾಮಿ, ಜಿ.ರತ್ನ, ಡಾ.ಎಚ್.ಎಸ್.ಸನತ್ ಕುಮಾರ್, ಎಸ್.ವೀರಣ್ಣ ಮತ್ತಿತರರು ಹಾಜರಿದ್ದರು.

ನಿಜಲಿಂಗಪ್ಪ ಪ್ರಾಮಾಣಿಕ ರಾಜಕಾರಣಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಗುಣಗಾನ



ಬೆಳಗಾವಿ, ಸುವರ್ಣವಿಧಾನಸೌಧ, ಡಿ.10(ಕೆಎಂಶಿ)–ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ದಕ್ಷ, ಪ್ರಾಮಾಣಿಕ ವ್ಯಕ್ತಿ. ಕರ್ನಾಟಕ ಕಂಡ ಅಪರೂಪದ ರಾಜಕಾರಣಿ. ಬದುಕಿನ ಕೊನೆಯವರೆಗೂ ಪ್ರಾಮಾಣಿಕವಾಗಿ ಇದ್ದವರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಗುಣಗಾನ ಮಾಡಿದರು.

ನಿಜಲಿಂಗಪ್ಪ ಜನ್ಮದಿನದ ಅಂಗವಾಗಿ ಬೆಳಗಾವಿಯ ಸುವರ್ಣಸೌಧದಲ್ಲಿರುವ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಭ್ರಷ್ಟಾಚಾರ ವಿರೋಧಿಯಾಗಿದ್ದ ನಿಜಲಿಂಗಪ್ಪ ಕರ್ನಾಟಕದ ಮುಖ್ಯಮಂತ್ರಿ ಅಲ್ಲದೆ, ಅವಿಭಜಿತ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರೊಂದಿಗಿನ ರಾಜಕೀಯ ಭಿನ್ನಾಭಿಪ್ರಾಯದಿಂದಾಗಿ ಬೇರೆ ಪಕ್ಷ ಕಟ್ಟಿದ್ದರು.

ಕರ್ನಾಟಕ ಏಕೀಕರಣಕ್ಕೆ ದುಡಿದ, ಪ್ರಾಮಾಣಿಕ, ಧೀಮಂತ ನಾಯಕನ ಆದರ್ಶಗಳು ನಮಗೆ ಮಾರ್ಗದರ್ಶಕವಾಗಿವೆ. ನಿಜಲಿಂಗಪ್ಪ ಅವರ ಹುಟ್ಟುಹಬ್ಬದಂದು ಸರ್ಕಾರ ಅವರನ್ನು ಸ್ಮರಿಸಿ ಗೌರವಿಸುತ್ತದೆ ಎಂದರು.

ಮೈಸೂರಿನಲ್ಲಿ ಹನುಮ ಹಬ್ಬ; ಪ್ರಚಾರ ವಾಹನಕ್ಕೆ ಗಣಪತಿ ಶ್ರೀಗಳಿಂದ ಚಾಲನೆ



ಹನುಮ ಹಬ್ಬ ಪ್ರಚಾರ ವಾಹನಕ್ಕೆ ಗಣಪತಿ ಸಚ್ಚಿದಾನಂದ ಸ್ವಾಮಿಗಳು ಚಾಲನೆ ನೀಡಿದರು.

ಮೈಸೂರು, ಡಿ.10–ಡಿಸೆಂಬರ್ 13ರಂದು ಮೈಸೂರಿನಲ್ಲಿ ಹನುಮ ಹಬ್ಬ ಆಚರಣೆ ಹಿನ್ನೆಲೆಯಲ್ಲಿ ಬುಧವಾರ ಹನುಮ ರಥಕ್ಕೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಆವರಣದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳು ಹಸಿರು ನಿಶಾನೆ ತೋರಿಸಿದರು.

ಈ ವೇಳೆ ಆಶ್ರಮದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ಸ್ವಾಮೀಜಿ, ಅರ್ಜುನ ಅವಧೂತ ಶ್ರೀಗಳು, ಹಿರಿಯ ವಕೀಲರು ಹಾಗೂ ಲಾ ಗೈಡ್ ಕನ್ನಡ ಮಾಸಪತ್ರಿಕೆ ಗೌರವ ಸಂಪಾದಕರಾದ ಹೆಚ್.ಎನ್.ವೆಂಕಟೇಶ್, ಸಂಜಯ್, ಶಂಭು, ಮನು, ಅಪ್ಪಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಡಿಸೆಂಬರ್ 13ರಂದು ಹನುಮ ಹಬ್ಬದ ಅಂಗವಾಗಿ ಭವ್ಯ ಮೆರವಣಿಗೆ ಆಯೋಜನೆ ಮಾಡಲಾಗಿದೆ. ಮೈಸೂರು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇಗುಲದ ಬಳಿಯಿಂದ ಆರಂಭವಾಗಲಿರುವ ಮೆರವಣಿಗೆ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಸಾಗಲಿದೆ.

ಅಲೋಕ್ ಕುಮಾರ್‌ಗೆ ಪದೋನ್ನತಿ: ಕಾರಾಗೃಹ ಡಿಜಿಪಿಯಾಗಿ ವರ್ಗಾವಣೆ



ಬೆಂಗಳೂರು, ಡಿ.10– ರಾಜ್ಯ ಪೊಲೀಸ್ ತರಬೇತಿ ಕೇಂದ್ರದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಾಗಿದ್ದ (ಎಡಿಜಿಪಿ) ಅಲೋಕ್ ಕುಮಾರ್ ಅವರಿಗೆ ರಾಜ್ಯ ಸರ್ಕಾರವು ಪದನ್ನೋತಿ ನೀಡಿ, ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿ (ಡಿಜಿಪಿ) ವರ್ಗಾವಣೆ ಮಾಡಿ ಬುಧವಾರ ಆದೇಶಿಸಿದೆ.

ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ಎಡಿಜಿಪಿ ಬಿ.ದಯಾನಂದ ಅವರನ್ನು ಪೊಲೀಸ್ ತರಬೇತಿ ಕೇಂದ್ರಕ್ಕೆ ವರ್ಗಾವಣೆ ಮಾಡಲಾಗಿದೆ.

2019ರಲ್ಲಿ ನಡೆದಿದ್ದ ಫೋನ್ ಟ್ಯಾಪಿಂಗ್ ಹಗರಣದಲ್ಲಿ ಅಲೋಕ್‌ಕುಮಾರ್ ಸೇರಿ ಕೆಲವು ಅಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರ ಇಲಾಖಾ ತನಿಖೆಗೆ ಆದೇಶ ಹೊರಡಿಸಿತ್ತು. ಹಗರಣ ನಡೆದ ವೇಳೆ ಅಲೋಕ್ ಕುಮಾರ್ ಅವರು ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದರು. ಪ್ರಕರಣದ ತನಿಖೆ ನಡೆಸಿದ್ದ ಸಿಬಿಐ ನ್ಯಾಯಾಲಯಕ್ಕೆ ಬಿ–ವರದಿ ಸಲ್ಲಿಸಿತ್ತು. ಆದರೆ ಕಳೆದ ಮೇನಲ್ಲಿ ಇಲಾಖಾ ತನಿಖೆಗೆ ರಾಜ್ಯ ಸರ್ಕಾರ ಆದೇಶಿಸಿತ್ತು. ಸರ್ಕಾರದ ಆದೇಶವನ್ನು ಪ್ರಶ್ನಿಸಿ ಅಲೋಕ್ ಕುಮಾರ್ ಅವರು ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ ಮೊರೆ ಹೋಗಿದ್ದರು.

ರಾಜ್ಯ ಸರ್ಕಾರ ಆದೇಶಿಸಿದ್ದ ಇಲಾಖಾ ತನಿಖೆಯನ್ನು ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ ಇತ್ತೀಚೆಗೆ ರದ್ದುಗೊಳಿಸಿದ ಬೆನ್ನಲ್ಲೇ ಅಲೋಕ್ ಕುಮಾರ್ ಅವರಿಗೆ ಮುಂಬಡ್ತಿ ನೀಡಲಾಗಿದೆ

ಪೊಲೀಸ್ ಅಧಿಕಾರಿ ಮೇಲೆ ಕೈಎತ್ತಿದ್ದ ಪ್ರಕರಣ: ಸಿದ್ದರಾಮಯ್ಯಗೆ ಬಿಗ್ ರಿಲೀಫ್

ಬೆಂಗಳೂರು, ಡಿ. 10– ಧಾರವಾಡದ ಎಎಸ್‌ಪಿ ಆಗಿದ್ದ ನಾರಾಯಣ.ವಿ. ಭರಮನಿ ಅವರ ಮೇಲೆ ಕೈಎತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕೋರ್ಟ್ ಬಿಗ್ ರಿಲೀಫ್ ನೀಡಿದೆ. ಬೆಳಗಾವಿ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ನಾರಾಯಣ ಅವರಿಗೆ ಸಾರ್ವಜನಿಕವಾಗಿ ಸಿಎಂ ಕೈಎತ್ತಿದ್ದು, ಈ ಸಂಬಂಧ ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲು ಕೋರಿ ಭೀಮಪ್ಪ ಗಡಾದ ಸಲ್ಲಿಸಿದ್ದ ಅರ್ಜಿಯನ್ನು ಬೆಂಗಳೂರಿನ 42ನೇ ಎಸಿಜೆಎಂ ಕೋರ್ಟ್ ವಜಾ ಮಾಡಿದೆ.

ಕೆಲ ತಿಂಗಳುಗಳ ಹಿಂದೆ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಬಿಜೆಪಿ ಕಾರ್ಯಕರ್ತರು ಕಪ್ಪು ಬಟ್ಟೆ ಪ್ರದರ್ಶನಕ್ಕೆ ಆಕ್ರೋಶಗೊಂಡಿದ್ದ ಸಿದ್ದರಾಮಯ್ಯ, ವೇದಿಕೆ ಮೇಲೆಯೇ ಧಾರವಾಡ ಎಎಸ್‌ಪಿ ನಾರಾಯಣ.ವಿ. ಭರಮನಿ ಅವರನ್ನು ಕರೆದು ಹೊಡೆಯಲು ಕೈ ಎತ್ತಿದ್ದರು. ಇದು ಭಾರೀ ವಿವಾದಕ್ಕೆ ಕಾರಣವಾಗಿತ್ತು ಇನ್ನು ಈ ಸಂಬಂಧ ಸಿಎಂ ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲು ಕೋರಿ ಭೀಮಪ್ಪ ಗಡಾದ ಎನ್ನುವರು ಕೋರ್ಟ್‌ಗೆ ಖಾಸಗಿ ದೂರು ಸಲ್ಲಿಸಿದ್ದು, ಇದನ್ನು ಇಂದು (ಡಿ.10) ಪರಿಶೀಲನೆ ಮಾಡಿದ ಬೆಂಗಳೂರಿನ 42ನೇ ಎಸಿಜೆಎಂ ಕೋರ್ಟ್ ಜಡ್ಜ್ ಕೆ.ಎನ್.ಶಿವಕುಮಾರ್ ಅವರು ಭೀಮಪ್ಪ ಗಡಾದ ಸಲ್ಲಿಸಿದ್ದ ಖಾಸಗಿ ದೂರು ವಜಾಗೊಳಿಸಿ ಆದೇಶ ಹೊರಡಿಸಿದ್ದಾರೆ.

ಧರ್ಮಸ್ಥಳ ಪ್ರಕರಣದಲ್ಲಿ ದೂರು ನೀಡಿದವರೇ ಈಗ ಆರೋಪಿಗಳು



ಬೆಂಗಳೂರು, ಡಿ.10– ಧರ್ಮಸ್ಥಳ ಕ್ಷೇತ್ರದ ವಿರುದ್ಧದ ಷಡ್ಯಂತ್ರ್ಯ ನಡೆಸಿದ ಪ್ರಕರಣದಲ್ಲಿ ದೂರು ನೀಡಿದವರೇ ಆರೋಪಿಗಳಾಗಿದ್ದಾರೆ. ವಿಶೇಷ ತನಿಖಾ ತಂಡದ ವರದಿಯಲ್ಲಿ ಬುರುಡೆ ಗ್ಯಾಂಗ್ ಷಡ್ಯಂತ್ರ ಬಟಾಬಯಲಾಗಿದೆ.

ಧರ್ಮಸ್ಥಳದಲ್ಲಿ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸಿದ ಎಸ್‌ಐಟಿ, ನ.20ರಂದು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ತನಿಖಾ ಪ್ರಾಥಮಿಕ ವರದಿ ಸಲ್ಲಿಸಿತ್ತು. ಈ ತನಿಖಾ ವರದಿಯಲ್ಲಿ 6 ಮಂದಿ ಯಾವ ರೀತಿ ನ್ಯಾಯಾಲಯದ ದಾರಿ ತಪ್ಪಿಸಿದ್ದಾರೆ ಎಂಬುದನ್ನು ಎಳೆ ಎಳೆಯಾಗಿ ಉಲ್ಲೇಖಿಸಲಾಗಿದೆ. ಬುರುಡೆ ಗ್ಯಾಂಗ್ ಸದಸ್ಯರ ಮೇಲೆ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್‌ಗಳ ಸುರಿಮಳೆ ಹೊರಿಸಲಾಗಿದೆ.

ಆರೋಪಿಗಳು: ಎ1 – ಚಿನ್ನಯ್ಯ, ಎ2 – ಮಹೇಶ್ ಶೆಟ್ಟಿ ತಿಮರೋಡಿ, ಎ3 – ಗಿರೀಶ್ ಮಟ್ಟಣ್ಣನವರ್, ಎ4 – ವಿಠಲ ಗೌಡ, ಎ5 – ಜಯಂತ್ .ಟಿ, ಎ6 – ಸುಜಾತ ಭಟ್.

ಮುರುಘಾ ಶರಣರ ವಿರುದ್ಧ ಪೋಕ್ಸೊ ಪ್ರಕರಣ: ಬಾಲಕಿಯರಿಂದ ಹೈಕೋರ್ಟ್‌ಗೆ ಮೇಲ್ಮನವಿ



ಬೆಂಗಳೂರು, ಡಿ.10– ಲೈಂಗಿಕ ದೌರ್ಜನ್ಯ ಆರೋಪದ ಪೋಕ್ಸೊ ಪ್ರಕರಣದಲ್ಲಿ ಶಿವಮೂರ್ತಿ ಮುರುಘಾ ಶರಣರು ಹಾಗೂ ಇನ್ನಿಬ್ಬರನ್ನು ಖುಲಾಸೆಗೊಳಿಸಿರುವ ಸೆಷನ್ಸ್ ನ್ಯಾಯಾಲಯದ ತೀರ್ಪನ್ನು ರದ್ದುಗೊಳಿಸಬೇಕು ಎಂದು ಕೋರಿ ಸಂತ್ರಸ್ತ ಬಾಲಕಿಯರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

ಈ ಕ್ರಿಮಿನಲ್ ಮೇಲ್ಮನವಿಯನ್ನು ಇಬ್ಬರು ಸಂತ್ರಸ್ತ ಬಾಲಕಿಯರು ಬುಧವಾರ ಹೈಕೋರ್ಟ್‌ನಲ್ಲಿ ದಾಖಲು ಮಾಡಿದ್ದು, ಅರ್ಜಿಯಲ್ಲಿ ಚಿತ್ರದುರ್ಗ ಗ್ರಾಮೀಣ ಪೊಲೀಸ್ ಠಾಣೆಯನ್ನು ಪ್ರತಿನಿಧಿಸುವ ರಾಜ್ಯ ಪ್ರಾಸಿಕ್ಯೂಷನ್, ಖುಲಾಸೆಗೊಂಡಿರುವ ಆರೋಪಿಗಳಾದ ಚಿತ್ರದುರ್ಗ ಮುರುಘರಾಜೇಂದ್ರ ಬೃಹನ್ಮಠದ ಶಿವಮೂರ್ತಿ ಮುರುಘಾ ಶರಣರು, ಎಸ್.ರಶ್ಮಿ ಮತ್ತು ಎ.ಜೆ.ಪರಮಶಿವಯ್ಯ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಅರ್ಜಿ ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ.

ಡಿ.13ರಂದು ಕೆಎಸ್‌ಆರ್‌ಟಿಸಿ ನಿಗಮಗಳ ಕಾರ್ಮಿಕ ಮುಖಂಡರೊಂದಿಗೆ ಸಭೆ

ಮೈಸೂರು, ಡಿ.10(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಬೇಡಿಕೆ ಕುರಿತು ಚರ್ಚಿಸಲು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಡಿ.13ರಂದು ಮಧ್ಯಾಹ್ನ 2 ಗಂಟೆಗೆ ಕೆಎಸ್‌ಆರ್‌ಟಿಸಿ ನಿಗಮದ ಕೇಂದ್ರ ಕಚೇರಿಯಲ್ಲಿ ಸಭೆ ನಡೆಯಲಿದೆ. ಈ ಸಭೆಗೆ ಪ್ರತಿ ಕಾರ್ಮಿಕ ಸಂಘಟನೆಯಿಂದ ಇಬ್ಬರು ಪ್ರತಿನಿಧಿಗಳು ಆಗಮಿಸುವಂತೆ ನಿಗಮ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೌರಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಪಾಲಿಕೆ ಆಯುಕ್ತರಿಗೆ ಒತ್ತಾಯ

2 ಸಾವಿರ ಸಂಕಷ್ಟ ಭತ್ಯ; ಖಾಯಂ ನೌಕರರು ನಿಧನರಾದರೆ ಅನುಕಂಪ ಆಧಾರಿತ ಕೆಲಸ; ರೂ.15 ಲಕ್ಷ ಡೆತ್ ಫಂಡ್ ಇತರೆ ಬೇಡಿಕೆ ಮಂಡನೆ



ಪೌರಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ನೇತೃತ್ವದಲ್ಲಿ ಬುಧವಾರ ನಡೆದ ಸಭೆಯಲ್ಲಿ ಕಾರ್ಮಿಕ ಮುಖಂಡರು ಒತ್ತಾಯಿಸಿದರು.

ಮೈಸೂರು,ಡಿ.10(ಎಸ್‌ಪಿಎನ್)– ಪೌರಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ವಿವಿಧ ಪೌರಕಾರ್ಮಿಕ ಸಂಘಟನೆಗಳ ಮುಖಂಡರು, ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ನೇತೃತ್ವದಲ್ಲಿ ಬುಧವಾರ ನಡೆದ ಸಭೆಯಲ್ಲಿ ಒತ್ತಾಯಿಸಿದ್ದಾರೆ.

ಮೈಸೂರು ನಗರ ಪಾಲಿಕೆ ಆವರಣದ ಹಳೆಯ ಕೌನ್ಸಿಲ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರು ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘ, ಪಾಲಿಕೆ ಸ್ವಚ್ಛತೆ ಘನತ್ಯಾಜ್ಯ ವಾಹನ ಚಾಲಕರ ಸಂಘ, ಪಾಲಿಕೆ ಒಳಚರಂಡಿ ಸಹಾಯಕರು ಹಾಗೂ ಪೌರಕಾರ್ಮಿಕರ ಸಂಘದ ಮುಖಂಡರು ಭಾಗವಹಿಸಿ ತಮ್ಮ ಬೇಡಿಕೆಗಳನ್ನು ಮಂಡಿಸಿದರು.

ಮೈಸೂರು ನಗರ ಪಾಲಿಕೆಯಲ್ಲಿ ಒಳಚರಂಡಿ ಸಹಾಯಕರು 231, ಸ್ವಚ್ಛತೆ ಘನತ್ಯಾಜ್ಯದ 565 ಮಂದಿ ವಾಹನ ಚಾಲಕರು, 40 ಕ್ಲೀನರ್, 1100 ಮಂದಿ ನೇರ ಪಾವತಿ ಪೌರಕಾರ್ಮಿಕರು ಹಾಗೂ ಅರೆಕಾಲಿಕ ವೇತನ ಪಡೆಯುವ 6 ಮಂದಿ ನೌಕರರು ಸೇರಿದಂತೆ ಒಟ್ಟು 1790 ಸಿಬ್ಬಂದಿಗಳಿದ್ದಾರೆ. ಇದರಲ್ಲಿ ಸ್ವಚ್ಛತೆ ಘನತ್ಯಾಜ್ಯ ವಾಹನ ಚಾಲಕರು, ಒಳಚರಂಡಿ ಸಹಾಯಕರು, ಕ್ಲೀನರ್‌ಗಳಿಗೆ ಈ ಹಿಂದೆ ತೀರ್ಮಾನವಾದಂತೆ ಮಾಸಿಕ 2 ಸಾವಿರ ಸಂಕಷ್ಟ ಭತ್ಯೆ ನೀಡಲು ಸರ್ಕಾರದಿಂದ ಅನುಮತಿ ಪಡೆಯುವಂತೆ ಒತ್ತಾಯಿಸಿದರು.

ಈಗಿರುವ ಪೌರಕಾರ್ಮಿಕರ ನೇಮಕಾತಿ ನಿಯಮದಲ್ಲಿ 700 ಜನಕ್ಕೊಬ್ಬರಂತೆ ಇದ್ದು, ಇದನ್ನು 500 ಜನಕ್ಕೊಬ್ಬರಂತೆ ನೇಮಕ ಮಾಡಿಕೊಳ್ಳಬೇಕು. ಎಲ್ಲಾ ವರ್ಗದ ಪೌರಕಾರ್ಮಿಕರನ್ನು ಗೃಹಭಾಗ್ಯ ಯೋಜನೆ ವ್ಯಾಪ್ತಿಗೆ ತರಬೇಕು. ಕರ್ತವ್ಯ ಸಂದರ್ಭದಲ್ಲಿ ನೇರ ಪಾವತಿ ಕಾರ್ಮಿಕರು ನಿಧನರಾದರೆ, ಮೃತರ ಕುಟುಂಬಕ್ಕೆ ಅನುಕಂಪ ಆಧಾರಿತ ಕೆಲಸ. 10 ಲಕ್ಷ ಪರಿಹಾರ ಧನ ನೀಡಬೇಕು. 60 ವರ್ಷ ಪೂರೈಸಿ ನಿವೃತ್ತರಾದವರಿಗೆ 10 ಲಕ್ಷ ಪರಿಹಾರ, ಮಾಸಿಕ 10 ಸಾವಿರ ನಿವೃತ್ತಿ ವೇತನ ಹಾಗೂ ಡೆತ್ ಫಂಡ್ ಪರಿಹಾರವನ್ನು 10 ಲಕ್ಷದಿಂದ 15 ಲಕ್ಷಕ್ಕೆ ಏರಿಸುವಂತೆ ಒತ್ತಾಯಿಸಿದರು.

ಪೌರಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ, ಶೌಚಗೃಹ ನಿರ್ಮಾಣ ಮತ್ತು ಪೌರಕಾರ್ಮಿಕರ ಕಾಲೋನಿಗಳಲ್ಲಿ ವ್ಯಾಯಾಮ ಶಾಲೆ ಮತ್ತು ಗ್ರಂಥಾಲಯ ಕೊಠಡಿ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೆ ಒತ್ತಾಯ ಹಾಗೂ ಪೌರಕಾರ್ಮಿಕರ ನೇಮಕಾತಿಯನ್ನು 55 ವರ್ಷಕ್ಕೆ ನಿಗದಿ ಮಾಡುವಂತೆ ಒತ್ತಾಯಿಸಿದರು. ಈ ವೇಳೆ ವಿವಿಧ ಪೌರಕಾರ್ಮಿಕರ ಸಂಘಟನೆಗಳ ಮುಖಂಡರಾದ ಸಿ.ಆರ್.ರಾಚಯ್ಯ, ಟಿ.ಶ್ರೀನಿವಾಸ್, ಎಸ್.ಗಣೇಶ್, ಎಂ.ರಾಜೀವ್ ಸೇರಿದಂತೆ ಇತರೆ ಮುಖಂಡರಿದ್ದರು.

ಇಂಡಿಗೋ ಬಿಕ್ಕಟ್ಟು: ಸ್ಪೈಸ್‌ಜೆಟ್‌ನಿಂದ ಪ್ರತಿದಿನ 100 ಹೆಚ್ಚುವರಿ ವಿಮಾನ ಹಾರಾಟ



ನವದೆಹಲಿ, ಡಿ.10– ಭಾರತದ ದೇಶೀಯ ವಿಮಾನಯಾನ ಸಂಸ್ಥೆಯಾದ ಸ್ಪೈಸ್ ಜೆಟ್ ಚಳಿಗಾಲದ ವೇಳಾಪಟ್ಟಿಯಲ್ಲಿ ಪ್ರತಿದಿನ 100 ಹೆಚ್ಚುವರಿ ವಿಮಾನಗಳನ್ನು ಸೇರಿಸಲು ಯೋಜಿಸಿದೆ. ಇಂಡಿಗೋ ವಿಮಾನ ಸೇವೆಯಲ್ಲಿನ ಅಡಚಣೆಯ ನಡುವೆ ತನ್ನ ಕಾರ್ಯಾಚರಣೆಯನ್ನು ಹೆಚ್ಚಿಸಲು ಮತ್ತು ವಾಯುಯಾನ ಮಾರುಕಟ್ಟೆಯಲ್ಲಿ ತನ್ನ ಸಾಮರ್ಥ್ಯವನ್ನು ಮತ್ತಷ್ಟು ವೃದ್ಧಿಸಿಕೊಳ್ಳುವ ಗುರಿಯನ್ನು ಹೊಂದಿದೆ.

ಈ ಚಳಿಗಾಲದಲ್ಲಿ ಪ್ರಮುಖ ಮಾರ್ಗಗಳಲ್ಲಿ ಭಾರತದ ವಾಯುಯಾನ ಮಾರುಕಟ್ಟೆಯಲ್ಲಿ ಸಾಕಷ್ಟು ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವ ಸಲುವಾಗಿ ನಮ್ಮ ವಿಮಾನಗಳ ಕಾರ್ಯಾಚರಣೆಗಳನ್ನು ಹೆಚ್ಚಿಸಲು ಎದುರು ನೋಡುತ್ತಿದ್ದೇವೆ. ಈ ಪ್ರಯತ್ನದ ಭಾಗವಾಗಿ ನಿಯಂತ್ರಕ ಅನುಮೋದನೆಗಳಿಗೆ ಒಳಪಟ್ಟು ಪ್ರತಿದಿನ 100 ಹೆಚ್ಚುವರಿ ವಿಮಾನಗಳ ಹಾರಾಟವನ್ನು ಪರಿಚಯಿಸಲು ನಾವು ಯೋಜಿಸಿದ್ದೇವೆ ಎಂದು ಸ್ಪೈಸ್‌ಜೆಟ್ ಹೇಳಿದೆ.

ವಿಮಾನಯಾನ ಸಂಸ್ಥೆಯು 17 ವಿಮಾನಗಳನ್ನು ಮತ್ತೆ ಸಕ್ರಿಯ ಸೇವೆಗೆ ತಂದಿದೆ. ಈ ಪೈಕಿ ಕೆಲವು ಭಾಗಶಃ ಸಿಬ್ಬಂದಿಯೊಂದಿಗೆ ಗುತ್ತಿಗೆ ಪಡೆದ ವಿಮಾನಗಳು ಸೇರಿವೆ. ಈ ಮೂಲಕ, ಅನೇಕ ಪ್ರಯಾಣಿಕರು ಪ್ರಯಾಣಿಸಲು ಬಯಸುವ ಮಾರ್ಗಗಳಲ್ಲಿ ವಿಮಾನಗಳ ಸಂಖ್ಯೆಯನ್ನು ಹೆಚ್ಚಿಸುವುದು ನಮ್ಮ ಗುರಿಯಾಗಿದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ಕಳೆದ ಎರಡು ತಿಂಗಳುಗಳಲ್ಲಿ ನಾವು ಗುತ್ತಿಗೆ ವಿಮಾನಗಳ ಮಿಶ್ರಣ ಮತ್ತು ನಮ್ಮ ಸ್ವಂತ ವಿಮಾನವನ್ನು ಸೇವೆಗೆ ಹಿಂದಿರುಗಿಸುವ ಮೂಲಕ 17 ವಿಮಾನಗಳನ್ನು ಸಕ್ರಿಯ ಕಾರ್ಯಾಚರಣೆಗಳಿಗೆ ಸೇರಿಸಿಕೊಂಡಿದ್ದೇವೆ. ಇದು ಬೇಡಿಕೆ ಇರುವ ಕಡೆಗಳಲ್ಲಿ ಸಾಮರ್ಥ್ಯವನ್ನು ಸರಿಪಡಿಸಲು ಮತ್ತು ಒಟ್ಟಾರೆ ನೆಟ್‌ವರ್ಕ್ ಸ್ಥಿತಿ ಸ್ಥಾಪಕತ್ವವನ್ನು ಸುಧಾರಿಸಲು ನಮಗೆ ನೆರವಾಗುತ್ತದೆ. ಸದ್ಯದ ವೇಳಾ ಪಟ್ಟಿಯಲ್ಲಿ ಇನ್ನೂ ಹಲವಾರು ವಿಮಾನಗಳನ್ನು ಕಾರ್ಯಾಚರಣೆಯ ಭಾಗವಾಗಿಸುವುದರ ಮೇಲೆ, ವಿಮಾನ ಬಳಕೆಯನ್ನು ಗರಿಷ್ಠಗೊಳಿಸುವುದು ಮತ್ತು ಉತ್ತಮ ಯೋಜನೆಯ ಮೂಲಕ ಸಂಪರ್ಕವನ್ನು ಬಲಪಡಿಸುವುದರ ಮೇಲೆ ನಮ್ಮ ಗಮನವಿದೆ ಎಂದು ಸ್ಪೈಸ್‌ಜೆಟ್ ಸೇರಿಸಿದೆ

ಬೆಂಗಳೂರಿನಿಂದ 60ಕ್ಕೂ ಹೆಚ್ಚು ಇಂಡಿಗೋ ವಿಮಾನ ರದ್ದು

ಬೆಂಗಳೂರು, ಡಿ.10– ವಿಮಾನಯಾನ ಕಾರ್ಯಾಚರಣೆಗಳು ಮತ್ತೆ ಮೊದಲಿನಂತೆ ಆಗಿದೆ ಎಂದು ಡಿ. 9 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪೀಟರ್ ಎಲ್ಬರ್ಸ್ ಹೇಳಿದ್ದರೂ, ಇಂಡಿಗೋ ಬುಧವಾರ 60ಕ್ಕೂ ಹೆಚ್ಚು ವಿಮಾನಗಳನ್ನು ರದ್ದುಗೊಳಿಸಿದೆ.

ಇಂಡಿಗೋ ಬುಧವಾರ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸುವ 35 ಮತ್ತು ನಿರ್ಗಮಿಸುವ 26 ಸೇರಿದಂತೆ ಒಟ್ಟು 61 ವಿಮಾನಗಳನ್ನು ರದ್ದುಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

ಮಂಗಳವಾರ ಕೇಂದ್ರ ಸರ್ಕಾರವು ಇಂಡಿಗೋದ ಚಳಿಗಾಲದ ವಿಮಾನ ವೇಳಾಪಟ್ಟಿಯಲ್ಲಿ ಶೇ 10ರಷ್ಟು ಅಥವಾ ದಿನಕ್ಕೆ ಅನುಮೋದಿಸಲಾದ ಸುಮಾರು 2,200 ವಿಮಾನಗಳಲ್ಲಿ ಸುಮಾರು 220 ವಿಮಾನಗಳನ್ನು ಕಡಿತಗೊಳಿಸಿದ ನಂತರ ಹೇಳಿಕೆ ಬಿಡುಗಡೆ ಮಾಡಿದ್ದ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಇಂಡಿಗೋ ಮತ್ತೆ ತನ್ನ ಕಾರ್ಯಾಚರಣೆ ಆರಂಭಿಸಿದೆ ಮತ್ತು ನಮ್ಮ ಕಾರ್ಯಾಚರಣೆಗಳು ಸ್ಥಿರವಾಗಿವೆ ಎಂದಿದ್ದರು.

ಡಿ.1 ರಿಂದ ಪ್ರಾರಂಭವಾದ ಪರಿಸ್ಥಿತಿ ಡಿ.5 ರವರೆಗೆ ಮುಂದುವರಿದ ನಂತರ ಸರ್ಕಾರವು ಅಂತಿಮವಾಗಿ ಮಧ್ಯಪ್ರವೇಶಿಸಿತು. ಡಿಜಿಸಿಎ ಎಲ್ಬರ್ಸ್ ಮತ್ತು ರಾಹುಲ್ ಭಾಟಿಯಾ ನಿಯಂತ್ರಿತ ವಿಮಾನಯಾನ ಸಂಸ್ಥೆಯ ಅಕೌಂಟೆಬಲ್ ಮ್ಯಾನೇಜರ್ ಆಗಿರುವ ಇಂಡಿಗೊ ಮುಖ್ಯ ಕಾರ್ಯಾಚರಣಾ ಅಧಿಕಾರಿ ಇಸಿಡ್ರೊ ಪೊರ್ಕ್ವೆರಾಸ್ ಅವರಿಗೆ ಶೋ–ಕಾಸ್ ನೋಟಿಸ್ ನೀಡಿತು ಮತ್ತು ವಿಮಾನ ದರಗಳಿಗೆ ಮಿತಿ ವಿಧಿಸಲು ಆದೇಶಿಸಿತು.

ನಕ್ಕರೆ ಅದೇ ಸ್ವರ್ಗ

ಹುಡ್ಗನ ತಂದೆ : ಹುಡ್ಗಿ ನಮಗೆ ಇಷ್ಟ ಆಗಿದ್ದಾಳೆ. ಮದ್ವೆಗೆ ಏನು ಹಾಕ್ತೀರಾ?

ಹುಡ್ಗಿ ತಂದೆ : ಕೈಗೆ ಸ್ಯಾನಿಟೈಸರ್, ಬಾಯಿಗೆ ಮಾಸ್ಕ್ ಹಾಕ್ತೀವಿ!

ಮೈಸೂರು ಮಿತ್ರ

ಗುರುವಾರ, 11 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಹುಡುಕುತ್ತಾ ಹೋದ ಧರ್ಮರಾಯನಿಗೆ ಕೆಟ್ಟವರು ಸಿಗಲಿಲ್ಲ!! ಎಷ್ಟು ಹುಡುಕಿದರೂ ದುರ್ಯೋಧನನಿಗೆ ಒಳ್ಳೆಯವರ ದರ್ಶನವಾಗಲಿಲ್ಲ. ನೋಡುವ ದೃಷ್ಟಿ, ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಂತೆ ಕಟ್ಟೋಕು ಮೊದಲೇ ಸೇರಿದರು ಗಂಟು ಕಳ್ಳರು

ನಿಮ್ಮ ಪತ್ರಗಳು

ಮೂರು ವರ್ಷದಿಂದ ಬೆಳಗದ ಮೈಸೂರು ದಸರಾ ವಸ್ತುಪ್ರದರ್ಶನ ಫಲಕ

ಮಾನ್ಯರೆ,

ಮೈಸೂರು ವಸ್ತುಪ್ರದರ್ಶನಕ್ಕೆ ಆಗಮಿಸುವ ಸ್ಥಳದಲ್ಲಿ ವಿದ್ಯುತ್ ದೀಪದಿಂದ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ 'ಮೈಸೂರು ದಸರಾ ವಸ್ತುಪ್ರದರ್ಶನ' ಎಂಬ ನಾಮಾಂಕಿತ ವಿದ್ದರೂ ಅದು ಕಳೆದ ಮೂರು ವರ್ಷಗಳಿಂದ ವಿದ್ಯುತ್ ದೀಪಗಳಿಂದ ಬೆಳಗದೆ ಕೇವಲ ನಾಮಾಕಾವಸ್ತೆಗೆ ಇದ್ದಂತೆ ಕಾಣುತ್ತದೆ. ಈ ಬಗ್ಗೆ ಬೆಂಗಳೂರು ದಕ್ಷಿಣ ತಾಲೂಕು ತಾವರೆಕೆರೆಯಿಂದ ನನ್ನ ಸ್ನೇಹಿತರು ಸಮಾಜದ ಬಗ್ಗೆ ಕಳಕಳಿಯುಳ್ಳ ವರು ಸ್ಥಳೀಯ ಕನ್ನಡ ಹೋರಾಟಗಾರರು ಆದ ಗಿರೀಶ್ ಮತ್ತು ತಂಡದವರು 3 ವರ್ಷದ ಹಿಂದೆ ವಸ್ತುಪ್ರದರ್ಶನಕ್ಕೆ ಭೇಟಿ ನೀಡಿದ ಸಮಯದಲ್ಲಿ ಈ ನಾಮಫಲಕದಲ್ಲಿ 'ಮೈ' ಎಂಬ ಅಕ್ಷರ ವಿದ್ಯುತ್ ಬೆಳಗದೆ ಕೇವಲ 'ಸೂರು ದಸರಾ' ಎಂದು ಬೆಳಗುತ್ತಿದ್ದುದನ್ನು ಗಮನಿಸಿ ಸಂಬಂಧಪಟ್ಟವರಿಗೆ ಇದನ್ನು ಸರಿಪಡಿಸಲು ತಿಳಿಸಲಾಗಿ ಅದನ್ನು ನಾಳೆ ಸರಿಪಡಿಸಲಾಗುವುದು ಎಂದು ತಿಳಿಸಿ ಕೂಡಲೇ ಅದನ್ನು ಬೆಳಗುತ್ತಿದ್ದ ವಿದ್ಯುತ್ ದೀಪಗಳನ್ನು ಆಫ್ ಮಾಡಿದ್ದರಂತೆ.

ಅವರು ಮೂರು ವರ್ಷ ಬಿಟ್ಟು ಡಿ.6 ರಂದು ವಸ್ತುಪ್ರದರ್ಶನಕ್ಕೆ ಭೇಟಿ ನೀಡಿದಾಗ ಅಂದು ಸ್ವಿಚ್ ಆಫ್ ಆದ ವಿದ್ಯುತ್ ದೀಪಗಳು ಹಾಗೆ ಇರುವುದನ್ನು ಗಮನಿಸಿ ನನಗೆ ಕರೆ ಮಾಡಿ ಈ ವಿಷಯ ತಿಳಿಸಿ ಇಲ್ಲಿ ಯಾರಿಗೆ ಹೇಳಿದರೂ ಸರಿಯಾಗಿ ಸ್ಪಂದಿಸುತ್ತಿಲ್ಲ ಯಾರಿಗೆ ದೂರು ಕೊಡಬೇಕು ಎಂದು ಕೇಳಿದರು. ವಸ್ತುಪ್ರದರ್ಶನ ಪ್ರಾಧಿಕಾರದ ಕಚೇರಿ ಅಲ್ಲಿಯೇ ಇದೆ. ಅಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳಿಗಾಗಲಿ ಅಥವಾ ಅಧ್ಯಕ್ಷರುಗಳಿಗಾಗಲೀ ಸಂಪರ್ಕಿಸಿ ವಿಷಯ ತಿಳಿಸಿ ಎಂದು ಹೇಳಿದ ಮೇರೆಗೆ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರನ್ನು ಸಂಪರ್ಕಿಸಿ ಈ ಬಗ್ಗೆ ತಿಳಿಸಿದಾಗ ಅವರು ಅದನ್ನು ಗಮನಿಸಿಲ್ಲದಿರುವುದನ್ನು ತಿಳಿದು ಆಶ್ಚರ್ಯಗೊಂಡಿದ್ದಾರೆ. ಹಾಗೂ ಸಂಬಂಧಿಸಿದ ವ್ಯಕ್ತಿಗೆ ಕರೆದು ಸ್ಥಳದಲ್ಲಿಯೇ ಅಧ್ಯಕ್ಷರು ಸೂಚನೆ ನೀಡಲಾಗಿ ಸಂಬಂಧಿಸಿದ ವ್ಯಕ್ತಿ ನಾಳೆಯೊಳಗೆ ಅದನ್ನು ಸರಿಪಡಿಸಲಾಗುವುದು ಎಂದು ತಿಳಿಸಿದ್ದಾರೆ. ಬಹುಶಃ ಆ ಸಣ್ಣ ಕೆಲಸದಿಂದ ಗುತ್ತಿಗೆದಾರನಿಗಾಗಲೀ, ಅಧಿಕಾರಿಗಳಿಗಾಗಲೀ, ರಾಜಕಾರಣಿಗಳಿಗಾಗಲೀ ಲಾಭವಿಲ್ಲದ ಕಾರಣ ಲಕ್ಷಾಂತರ ಹಣ ವ್ಯಯಿಸಿ ಅಲಂಕಾರ ಮಾಡಲಾಗಿದ್ದರೂ ಆ ಸಣ್ಣ ಕೆಲಸ ಮೂರು ವರ್ಷದಿಂದ ಮೂಲೆಗುಂಪಾಗಿದೆ. ಈಗಲಾದರೂ ಸಂಬಂಧಿಸಿದವರು ಇಂತಹ ಸಣ್ಣ ಕೆಲಸಗಳನ್ನು ಸಾರ್ವಜನಿಕರಿಂದ ಹೇಳಿಸಿ ಕೊಳ್ಳದೇ ಗಮನಕ್ಕೆ ಬಂದ ಕೂಡಲೇ ಕ್ರಮ ಕೈಗೊಳ್ಳುವಂತಾಗಲಿ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

ಉಪಯೋಗಕ್ಕೆ ಬಾರದ ಶೌಚಾಲಯ

ಮಾನ್ಯರೆ,



ಮೈಸೂರಿನ ಹಲವಾರು ಭಾಗಗಳಲ್ಲಿ ಸಾರ್ವಜನಿಕರಿಗೆ ಉಪಯೋಗವಾಗುವ ನಿಟ್ಟಿನಲ್ಲಿ ಮತ್ತು ನಗರದ ಸ್ವಚ್ಛತೆ ಕಾಪಾಡುವ ಸಲುವಾಗಿ ನಗರ ಪಾಲಿಕೆಯು ವಿಶೇಷ ಅನುದಾನಗಳಲ್ಲಿ ಮೈಸೂರು ನಗರ ಪಾಲಿಕೆ ವತಿಯಿಂದ ಮೆಟ್ರೋಪೋಲ್ ವೃತ್ತದ ಹತ್ತಿರ (ಮಹಾರಾಣಿ ಕಾಲೇಜು) ಬಳಿ, ಗಂಡು ಬೇರುಂಡ ಉದ್ಯಾನವನದ ಮುಂಭಾಗದಲ್ಲಿ ಕುವೆಂಪುನಗರದ ಉದಯರವಿ ರಸ್ತೆಯಲ್ಲಿ ನಿರ್ಮಾಣವಾಗಿರುವ ಸಾರ್ವಜನಿಕ ಶೌಚಾಲಯಗಳು ಸೇರಿದಂತೆ ಇನ್ನೂ ನಗರದ ಅನೇಕ ಭಾಗಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣಮಾಡಿದೆ. ಆದರೆ ಈ ಶೌಚಾಲಯಗಳು ಜನರಿಗೆ ಉಪಯೋಗಕ್ಕೆ ಬಾರದಂತಾಗಿವೆ. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಓಡಾಡುವ ಈ ಸ್ಥಳದಲ್ಲಿ ಶೌಚಾಲಯಗಳನ್ನು ತೆರೆದರೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಬಳಕೆಯಾಗದಿರುವ ಶೌಚಾಲಯಗಳನ್ನು ಸಾರ್ವಜನಿಕರಿಗೆ ಉಪಯೋಗವಾಗುವ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಇದ್ದೂ ಬೆಳಗದ ಬೀದಿ ದೀಪಗಳು: ರಾತ್ರಿ ವೇಳೆ ಕಾದಿದೆ ಅಪಾಯಗಳು

ಮಾನ್ಯರೆ,

ಮೈಸೂರು ಸಿದ್ಧಾರ್ಥನಗರದ ಟೆರೆಷಿಯನ್ ಕಾಲೇಜು ವೃತ್ತದಿಂದ ತಿ.ನರಸೀಪುರಕ್ಕೆ ಹೋಗುವ ಹೆದ್ದಾರಿ ನಿರ್ಮಾಣವಾದಾಗಿನಿಂದ ಇದರ ಇಕ್ಕೆಲಗಳಲ್ಲಿರುವ ವಿದ್ಯುತ್ ಕಂಬಗಳಲ್ಲಿ ಅಳವಡಿಸಿರುವ ದೀಪಗಳು ಒಂದು ದಿನವೂ ಬೆಳಗಿದ್ದೇ ಇಲ್ಲ. ಈ ಮಾರ್ಗದಲ್ಲಿ ಸ್ವಲ್ಪ ಮುಂದೆ ಸಾಗಿದರೆ, ಎಡಕ್ಕೆ ಆಲನಹಳ್ಳಿ ಬಡಾವಣೆ, ಬಲಕ್ಕೆ ಗಿರಿದರ್ಶಿನಿ ಬಡಾವಣೆಗಳಿದ್ದು, ತಿ.ನರಸೀಪುರ, ಕೊಳ್ಳೇಗಾಲ, ತಲಕಾಡು, ಬಿಳಿಗಿರಿರಂಗನಬೆಟ್ಟ ಮತ್ತು ಚಾಮರಾಜನಗರಕ್ಕೆ ಹಗಲು–ರಾತ್ರಿ ಅಸಂಖ್ಯಾತ ಬೈಕ್‌ಗಳು, ಕಾರುಗಳು, ಬಸ್‌ಗಳು ಹಾಗೂ ಲಾರಿಗಳು ನಿರಂತರವಾಗಿ ಸಂಚರಿಸುತ್ತವೆ.

ಅಲ್ಲದೇ ರಸ್ತೆ ಅಪಾಯಕಾರಿ ತಿರುವುಗಳಿಂದ ಕೂಡಿದ್ದು, ತುಂಬಾ ಕಿರಿದಾಗಿದೆ. ರಸ್ತೆ ಎರಡೂ ಕಡೆ ಕೊಂಬೆಗಳಿಂದ ಹರಡಿರುವ ದೊಡ್ಡ ದೊಡ್ಡ ಮರಗಳಿದ್ದು, ದಟ್ಟ ಕತ್ತಲು ಆವರಿಸಿದೆ. ಇದರಿಂದ ವಾಹನ ಚಾಲಕರಿಗೆ, ಅದರಲ್ಲೂ ಬೈಕ್, ಸ್ಕೂಟರ್ ಸವಾರರಿಗೆ ಮುಂದೆ ಅಪಘಾತ ಸಂಭವಿಸಿಬಿಡಬಹುದೇನೋ ಎಂಬ ಆತಂಕ, ಭಯದಿಂದ ಜೀವ ಕೈಯ್ಯಲ್ಲಿಡಿದುಕೊಂಡು ಬೈಕ್ ಅಥವಾ ಸ್ಕೂಟರ್‌ಗಳಲ್ಲಿ ಓಡಾಡಬೇಕಾಗಿದೆ.

ಇಷ್ಟೇ ಅಲ್ಲದೇ ರಾತ್ರಿ ವೇಳೆ ಈ ರಸ್ತೆಗಳೇ ಶ್ವಾನಮಿತ್ರರಿಗೆ ಆಶ್ರಯ ತಾಣ ವಾಗಿದ್ದು, ಯಾವಾಗ ಬೇಕಾದರೂ ಅವುಗಳು ಬೈಕ್ ಸವಾರರ ಮೇಲೆ ಆಕ್ರಮಣ ಮಾಡಬಹುದು. ಇಲ್ಲಾ ವಾಹನಗಳಿಗೆ ಅಡ್ಡ ಬಂದು ಸವಾರರು ಬಿದ್ದು ಅವರ ಪ್ರಾಣಕ್ಕೆ ಸಂಚಕಾರ ಬರಬಹುದು. ಮತ್ತೆ ಈ ಪ್ರದೇಶ ಕಳ್ಳರು ಹಾಗೂ ಸುಲಿಗೆ ಮಾಡುವವರಿಗೆ ಆಯಕಟ್ಟಿನ ಪ್ರದೇಶವಾಗಿದೆ.

ಆದ್ದರಿಂದ ಮುಂದೆ ಸಂಭವಿಸಬಹುದಾದ ಯಾವುದೇ ರೀತಿಯ ಅನಾಹುತ ಗಳನ್ನು ತಡೆಗಟ್ಟುವ ದೃಷ್ಟಿಯಿಂದ, ಈ ಮಾರ್ಗದಲ್ಲಿರುವ ವಿದ್ಯುತ್ ಕಂಬಗಳ ದೀಪಗಳನ್ನು ರಾತ್ರಿ ತಪ್ಪದೇ ಉರಿಯುವಂತೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಮಾಡಿ ಪುಣ್ಯ ಕಟ್ಟಿಕೊಳ್ಳಲಿ ಎಂದು ಪ್ರಾರ್ಥನೆ.


–ಬಸವರಾಜ್, ಪೊಲೀಸ್ ಬಡಾವಣೆ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಮಂಥನ

ಮುಗಿದ ವರ್ಷದಲ್ಲಿ ಮರೆಯಾದ ಮರೆಯದಂಥವರು...



ಎಸ್.ಎಲ್. ಭೈರಪ್ಪ



ಸರೋಜಾದೇವಿ



ಧರ್ಮೇಂದ್ರ



ಎಂ.ಎಸ್. ಉಮೇಶ್



ಬ್ಯಾಂಕ್ ಜನಾರ್ಧನ್



ಸರದೇಶಪಾಂಡೆ



ಸರಿಗಮ ವಿಜಿ

ವರುಷ ಮುಗಿಯುತ್ತಾ ಬಂದಂತೆ ಇಡೀ ವರ್ಷದ ಆಗು–ಹೋಗುಗಳು ಕಣ್ಣ ಮುಂದೆ ಬರುತ್ತವೆ. ನಮ್ಮಲ್ಲಿ ನವರಸಗಳು ಉಕ್ಕುವಂತೆ ಮಾಡಿದ ನೂರಾರು ಕ್ಷಣಗಳ ಮೆರವಣಿಗೆ ನಮ್ಮ ಕಣ್ಣಮುಂದೆ ಹಾದುಹೋಗುತ್ತದೆ. ಈಗ ನಾವೆಲ್ಲರೂ ಅದೇ ಘಟ್ಟದಲ್ಲಿ ಇದ್ದೇವೆ. ನಮ್ಮ ನಮ್ಮ ಜೀವನದ ವೈವಿಧ್ಯಮಯ ಘಟನೆಗಳ ಮೆಲುಕು ಹಾಕುತ್ತಾ, 2025 ಶುಭವೋ ಅಶುಭವೋ, ದುಃಖ ತಂದಿತೋ ಸಂತೋಷ ನೀಡಿತೋ, ಹೇಗೋ ಸಾಧಿಸಿದ್ದ ಸಮತೋಲನ ವನ್ನು ಬಿಗಡಾಯಿಸಿತೋ ಅಥವಾ ಯಥಾಸ್ಥಿತಿ ಕಾಯ್ದುಕೊಳ್ಳಲು ಅವಕಾಶ ನೀಡಿತೋ, ಸಾಧನೆಯ ಕನಸನ್ನು ನನಸಾಗಿಸಲು ಇಂಬು ನೀಡಿತೋ ಅಥವಾ ನುಚ್ಚು ನೂರಾಗಿಸಿತೋ? ಹೀಗೆ ನಮ್ಮ ಲೆಕ್ಕಚಾರ ಶುರುವಾಗುತ್ತದೆ.

2025ರಲ್ಲಿ ಅಂತಹ ಸಂತೋಷಕರ ಘಟನೆಗಳು ಹೆಚ್ಚು ಘಟಿಸಲಿಲ್ಲ ಎಂದು ಹೇಳುವುದೇ ಸೂಕ್ತ. ಯುದ್ಧದ ಕಾರ್ಮೋಡ ಸರಿಯಲಿಲ್ಲ, ಪ್ರಪಂಚದಾದ್ಯಂತ ವಿನಾಕಾರಣವಾಗಿ ಜೀವ ಹಾನಿಗಳಾದವು– ಕೆಲವು ಪ್ರಕೃತಿ ಕಲಿಸಿದ ಪಾಠಗಳಾದರೆ, ಹೆಚ್ಚಿನವು ಮನುಷ್ಯನ ವಿಕೃತಿಗೆ ಸಾಕ್ಷಿಗಳು. ಬಾಹ್ಯಾಕಾಶವನ್ನು ನೋಡಿ ಮಾತ್ರವಲ್ಲ ಅಲ್ಲಿ ದಿನಗಟ್ಟಲೆ ಜೀವಿಸಿ ಬಂದ ಸಾಧನೆ ಒಂದುಕಡೆಯಾದರೆ, ನಮ್ಮ ಮಹಿಳೆಯರು ಸಾಮಾನ್ಯ ಮತ್ತು ಅಂಧರ ಕ್ರಿಕೆಟ್ ಮತ್ತು ಕಬಡ್ಡಿಯಲ್ಲಿ ವಿಶ್ವಕಪ್ ಗಳಿಸಿಕೊಟ್ಟದ್ದು ಒಂದು ಕಡೆ. ಕೆಲವರಿಗೆ ವಿರಾಟ್ ಕೊಹ್ಲಿ ಮತ್ತೆ ಫಾರ್ಮ್‌ಗೆ ಬಂದದ್ದು ಹಿಡಿಸಲಾರದಷ್ಟು ಖುಷಿ ನೀಡಿದರೆ, ಮತ್ತೊಂದಷ್ಟು ಜನಕ್ಕೆ ಬಿಹಾರದಲ್ಲಿ ಪ್ರಧಾನಮಂತ್ರಿ ಮೋದಿಯವರ ನೇತೃತ್ವಕ್ಕೆ ಗೆಲುವಾದದ್ದು ಹಾಲು ಕುಡಿದ ಹಾಗಾಗಿರುತ್ತದೆ. ಇತ್ತೀಚೆಗೆ ದೆಹಲಿಯಲ್ಲಿನ ಭಯೋತ್ಪಾದಕ ಘಟನೆ ಕೆಲವರ ಮೈ ನಡುಗಿಸಿದರೆ, ಕೆಲವರು ಪಹಲ್ಗಾಮ್‌ನಲ್ಲಿ ಉಗ್ರರು ಮೆರೆದ ಕ್ರೌರ್ಯವನ್ನು ಇಂದಿಗೂ ನೆನಪಿಸಿಕೊಂಡು ಮರುಗುತ್ತಿದ್ದಾರೆ.

ಎಸ್.ಎಲ್. ಭೈರಪ್ಪ : ಎಸ್.ಎಲ್.ಭೈರಪ್ಪ ಅವರ ನಿಧನವನ್ನು ಇನ್ನೂ ಅರಗಿಸಿಕೊಳ್ಳಲಾಗದ ಮನಸುಗಳೇ ಹೆಚ್ಚಿವೆ. ಎಚ್.ಎಸ್.ವೆಂಕಟೇಶ ಮೂರ್ತಿ ಸಾವಿರ ಚಿಂತೆಗಳನ್ನು ತೊರೆದು ನಡೆದು ಬಿಟ್ಟರು. ಮೊಗಳ್ಳಿ ಗಣೇಶ್ ತಮ್ಮ ಹೋರಾಟದ ಬದುಕನ್ನು ಮುಗಿಸಿ ಚಿರನಿದ್ರೆಗೆ ಜಾರಿದರು. ಮರಗಳನ್ನು ಮಕ್ಕಳಂತೆ ಸಲಹಿದ ಸಾಲುಮರದ ತಿಮ್ಮಕ್ಕ ಪಂಚಭೂತಗಳಲ್ಲಿ ಲೀನರಾದರು.

ಜೊತೆಗೇ 2026ಕ್ಕೆ ಹೊಸಕನಸುಗಳನ್ನು ಅದಾಗಲೇ ಹೆಣೆಯುತ್ತಿರುವ ಹಲವು ಮನಸುಗಳಿವೆ.

ಹಾಗೆ ನೋಡಿದರೆ, ಈ ವರ್ಷ ನಮ್ಮ ಚಲನಚಿತ್ರ ರಂಗಕ್ಕೆ ತುಂಬಲಾರದ ನಷ್ಟ ಉಂಟು ಮಾಡಿದೆ. ಬಾಲಿ ವುಡ್‌ನಲ್ಲಿ ಇತ್ತೀಚೆಗೆ ನಿಧನರಾದ ಧರ್ಮೇಂದ್ರ ಅವರನ್ನು ಒಳಗೊಂಡಂತೆ ಹಲವು ಪ್ರಮುಖ ನಟ–ನಟಿಯರು ಇಹಲೋಕ ತ್ಯಜಿಸಿದರು.

ಕನ್ನಡ ಚಿತ್ರರಂಗಕ್ಕೆ ಭರಿಸಲಾರದ ನಷ್ಟ ಉಂಟಾಗಿದೆ ಎಂಬುದು ಖಂಡಿತಾ ಉತ್ಪ್ರೇಕ್ಷೆಯ ಮಾತಲ್ಲ.

ಈ ವರ್ಷ ಮುಗಿಯುವ ಈ ಹೊತ್ತಿಗೆ, ಬಿ. ಸರೋಜಾದೇವಿ, ಎಂ.ಎಸ್.ಉಮೇಶ್, ಸರಿಗಮ ವಿಜಿ, ಬ್ಯಾಂಕ್ ಜನಾರ್ಧನ್, ಯಶವಂತ ಸರದೇಶ ಪಾಂಡೆ, ರಾಕೇಶ್ ಪೂಜಾರಿ ನಿಧನರಾಗಿದ್ದಾರೆ.

ಬಿ.ಸರೋಜಾದೇವಿ : ಬಿ.ಸರೋಜಾದೇವಿ ಅವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಕನ್ನಡದ ಮೊದಲ ಬಣ್ಣದ ಚಿತ್ರದಲ್ಲಿ ನಟಿಸಿದ, ಪಂಚಭಾಷಾ ತಾರೆಯಾಗಿದ್ದ ಪರಮಸುಂದರಿ ಸರೋಜಾದೇವಿ ಸೂಪರ್ ಸ್ಟಾರ್ ಪಟ್ಟದಲ್ಲಿ ವರ್ಷಗಟ್ಟಲೆ ಮೆರೆದವರು. ಆದರೂ ಸರಳಸುಂದರ ಸ್ವಭಾವದ ಸರೋಜಾದೇವಿ ಸಮಾಜಸೇವೆಗೆ ಕೈಹಾಕಿ, 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ಬಾಳಿದ ಸಹೃದಯಿ. ಕಿತ್ತೂರು ಚೆನ್ನಮ್ಮ ಹೀಗೆಯೇ ಇದ್ದಳೇನೋ ಎಂಬಂತಹ ತಾದಾತ್ಮ್ಯದಿಂದ ನಟಿಸಿದ ಸರೋಜಾದೇವಿ, ಕನ್ನಡಿಗರಿಗೆ ಚೆನ್ನಮ್ಮನೇ. ಅಥವಾ ಚೆನ್ನಮ್ಮನೆಂದರೆ ಸರೋಜಾದೇವಿ ಅವರೇ. ಜೀವನದುದ್ದಕ್ಕೂ ಘನತೆ ಗಾಂಭೀರ್ಯ ಸಹೃದಯತೆ ಮೆರೆದ ಬಿ ಸರೋಜಾದೇವಿ ಅವರು ಕನ್ನಡ ಚಿತ್ರರಂಗದ ಸುವರ್ಣ ಇತಿಹಾಸ ಕಾಲದ ನಿಜ ನಾಯಕಿ.

ಒಂದು ಗಮನಿಸಬೇಕಾದ ವಿಷಯವೆಂದರೆ, ಬಿ ಸರೋಜಾ ದೇವಿ ಅವರನ್ನು ಬಿಟ್ಟು ಉಳಿದವರು ಹಾಸ್ಯನಟರು!

ಹೌದು! ಸರಿಗಮ ವಿಜಿ, ಬ್ಯಾಂಕ್ ಜನಾರ್ಧನ್, ಸರದೇಶಪಾಂಡೆ, ರಾಕೇಶ್ ಪೂಜಾರಿ ಮತ್ತು ಮೊನ್ನೆ ಮೊನ್ನೆ ಉಮೇಶ್ ಅವರೆಲ್ಲರೂ ಹಾಸ್ಯ ನಟರು.

ರಾಕೇಶ್ ಪೂಜಾರಿ ಅವರು ಉಜ್ವಲ ಭವಿಷ್ಯದ ಭರವಸೆ ಇಟ್ಟುಕೊಂಡಿದ್ದವರು ಮತ್ತು ಮೂಡಿಸಿದ್ದವರು. ಅವರ ಅಕಾಲಿಕ ಮರಣ ವಿಷಾದಕರ.

ನೀವು 90ರ ದಶಕದಲ್ಲಿ ಬಂದ ಚಿತ್ರಗಳನ್ನು ನೋಡಿದ್ದರೆ ಗಮನಿಸಿರುತ್ತೀರಿ, ಸರಿಗಮ ವಿಜಿ ಮತ್ತು ಬ್ಯಾಂಕ್ ಜನಾರ್ಧನ್, ಇವರಿಬ್ಬರಲ್ಲಿ ಯಾರಾದರೂ ಒಬ್ಬರು ಅಂದು ಬರುತ್ತಿದ್ದ ಚಿತ್ರಗಳಲ್ಲಿ ಇದ್ದೇ ಇರುತ್ತಿದ್ದರು. ಇಬ್ಬರೂ ಇದ್ದ ಚಿತ್ರಗಳು ಪ್ರೇಕ್ಷಕರಿಗೆ ರಸದೌತಣವನ್ನೇ ನೀಡುತ್ತಿದ್ದವು. ಇಂದೂ ಇಬ್ಬರೂ ನಿರ್ಗಮಿಸಿದ್ದಾರೆ ತಮ್ಮ ಹೆಸರುಗಳನ್ನು ಅಮರವಾಗಿಸಿ.

ಯಶವಂತ ಸರದೇಶಪಾಂಡೆ : ಯಶವಂತ ಸರದೇಶ ಪಾಂಡೆ ಅವರದು ಅತ್ಯಂತ ಕ್ರಿಯಾಶೀಲ ಮನಸು. ನಾಟಕಗಳ ಮೂಲಕ ನಟನೆಗೆ ಬಂದ ಅವರು ನಿರ್ದೇಶಿಸಿದ ನಾಟಕಗಳು ಸೂಪರ್ ಹಿಟ್. ಧಾರಾವಾಹಿ ಮತ್ತು ಚಲನಚಿತ್ರಗಳಲ್ಲಿಯೂ ಅವರ ಪಾತ್ರಗಳು ಎಲ್ಲರನ್ನೂ ತಲುಪಿದ್ದವು. ಕಮಲಹಾಸನ್‌ಗೆ ರಾಮಾ ಭಾಮಾ ಶ್ಯಾಮ ಚಿತ್ರದಲ್ಲಿ ಉತ್ತರ ಕರ್ನಾಟಕ ಶೈಲಿಯ ಕನ್ನಡದಲ್ಲಿ ರಸವತ್ತಾದ ಸಂಭಾಷಣೆ ಬರೆದುಕೊಟ್ಟವರು ಇವರೇ; ಇಂದಿಗೂ ಟಿವಿ ಚಾನೆಲ್‌ಗಳಲ್ಲಿ ಆ ಚಿತ್ರವೋ ಅದರ ದೃಶ್ಯವೋ ಬಂದರೆ, ನೋಡದೇ ಇರುವವರು ಇಲ್ಲ. ಮುಂದೆಯೂ ಜನ ನೋಡುತ್ತಲೇ ಇರುತ್ತಾರೆ ಯಶವಂತ ಸರದೇಶಪಾಂಡೆ ಅವರನ್ನು ನೆನೆಯುತ್ತಲೇ ಇರುತ್ತಾರೆ.

ಉಮೇಶ್ : ಇನ್ನು ಎಂ ಎಸ್ ಉಮೇಶ್ ಅವರು, ಇದೇ ನವೆಂಬರ್ 30ರಂದು ತಮ್ಮ 80ನೇ ವಯಸ್ಸಿನಲ್ಲಿ ಇಲ್ಲವಾದರು. ಉಮೇಶ್ ಅವರು ಪುಟ್ಟ ಹುಡುಗನಾಗಿದ್ದಾಗಲೇ ನಟನೆಗೆ ಇಳಿದವರು. ಅವರ ಮನೆಯಲ್ಲಿ ಎಲ್ಲರೂ ಕಲಾವಿದರೇ. ಅವರ ತಂದೆ ಮತ್ತು ತಾಯಿ ಶ್ರೀಕಂಠಯ್ಯ ಮತ್ತು ನಂಜಮ್ಮನವರೂ ಕಲಾವಿದರೆ. ಅವರ ತಂದೆ ಕೆ.ಹಿರಣ್ಣಯ್ಯ, ಗುಬ್ಬಿ ವೀರಣ್ಣ, ವರದಾಚಾರ್ಯರ ಜೊತೆ ಕೆಲಸ ಮಾಡಿದವರು. ಕುಟುಂಬದ ಆರ್ಥಿಕ ಸಂಕಷ್ಟಗಳಿಂದಾಗಿ ಮಕ್ಕಳನ್ನೂ ನಟನೆಯಲ್ಲಿ ತೊಡಗಿಸಿದ್ದರಿಂದ ಉಮೇಶ್ ಅವರ ರಂಗಪ್ರವೇಶ ಚಿಕ್ಕವಯಸ್ಸಿನಲ್ಲಿಯೇ ಆಯಿತು. ಇವರ ನಟನೆ ನೋಡಿ ಮಾಸ್ತಿ ಅವರು 10 ರೂಪಾಯಿಗಳ ಬಹುಮಾನ ಕೊಟ್ಟಿದ್ದನ್ನು ಕೊನೆಯವರೆಗೂ ಹೆಮ್ಮೆಯಿಂದ ನೆನೆಯುತ್ತಿದ್ದರು. ಉಮೇಶ್ ಅವರ ಅಮ್ಮ ಕೂಡಾ ಚಲಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸುತ್ತಿದ್ದರು. ರಾಜ್‌ಕುಮಾರ್‌ರ 'ಭಲೇ ರಾಜ ಚಿತ್ರದಲ್ಲಿ, ರಾಜ್‌ರಿಂದ ಭಳಿಗಾಗಿ ಕೋಟ್ ಪಡೆಯುವ ಹಣ್ಣು ಮಾರುವ ಹೆಂಗಸು ಉಮೇಶ್ ಅವರ ಅಮ್ಮ! ಅವರ ಅಣ್ಣ ಎಂ.ಎಸ್. ಸತ್ಯ ಅವರೂ ಪ್ರಸಿದ್ಧ ಕಲಾವಿದರೇ. ಅಕಾಲಮೃತ್ಯುವಿಗೀಡಾದ ಸತ್ಯ, ರಾಜ್‌ಕುಮಾರ್ ಅವರ ಜೊತೆ 'ಬಭ್ರುವಾಹನ' ಚಿತ್ರ ಮತ್ತು 'ನಾ ನಿನ್ನ ಬಿಡಲಾರೆ' ಚಿತ್ರದ ಅಡುಗೆಯವನ ಪಾತ್ರಗಳ ಮೂಲಕ ಈಗಲೂ ಎಲ್ಲರ ಮನದಲ್ಲಿದ್ದಾರೆ. ಅವರ ಮಗ ಶಿವಸತ್ಯ ಸಂಗೀತ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದಾರೆ.

ಮತ್ತೆ ಉಮೇಶ್ ಅವರ ವಿಷಯಕ್ಕೆ ಬರೋಣ. ಬಾಲನಟನಾಗಿ ನಾಟಕಗಳಲ್ಲಿ ನಟಿಸುತ್ತಿದ್ದ ಉಮೇಶ್ ಅವರು ಬಿ.ಆರ್. ಪಂತುಲು ಅವರ 'ಮಕ್ಕಳ ರಾಜ್ಯ' ಚಿತ್ರದ ಮೂಲಕ ಬೆಳ್ಳಿತೆರೆ ಪ್ರವೇಶಿಸಿದರು. ಕನ್ನಡದ ಮೊದಲ ಮಕ್ಕಳ ಚಿತ್ರವೆನಿಸಿ ಐತಿಹಾಸಿಕವೆನಿಸಿದ ಆ ಚಿತ್ರದಲ್ಲಿ ಉಮೇಶ್ ಅವರ ನಟನೆ ಅತ್ಯದ್ಭುತ. ವೀರ ರಾಜಕುಮಾರನ ಪಾತ್ರದಲ್ಲಿ ಅಬ್ಬರಿಸಿರುವ ಉಮೇಶ್ ಅವರನ್ನು ಅಲ್ಲಿ ನೋಡಿದರೆ, ಇವರೇನಾ ನಮ್ಮ ಹಾಸ್ಯನಟ ಉಮೇಶ್ ಎಂದು ಪ್ರಶ್ನಿಸಿಕೊಳ್ಳುವಂತಾಗುತ್ತದೆ. ಮಳೆಯೇ ಸುರಿದು ಬಾ.. ಎಂದು ಎಲ್ಲ ಭಾವಗಳನ್ನು ಸಮರ್ಥವಾಗಿ ಅಭಿನಯಿಸುತ್ತಾ ಹಾಡುವ ಬಾಲನಟ ಉಮೇಶ್ ಮೈನವಿರೇಳಿಸುತ್ತಾರೆ. ಬಹಳ ಯಶಸ್ವಿಯಾದ ಆ ಚಿತ್ರದ ನಂತರ ಆಶ್ಚರ್ಯವೆಂಬಂತೆ ಉಮೇಶ್ ಚಿತ್ರರಂಗದಿಂದ ದೂರವಿದ್ದರು. ಮತ್ತೆ ಮರಳಿದ್ದು 1974ಲ್ಲಿ ಪುಟ್ಟಣ್ಣ ಕಣಗಾಲರ ಕಥಾ ಸಂಗಮ ಚಿತ್ರದ, ಮುನಿತಾಯಿ ಕತೆಯಲ್ಲಿ ನಟಿಸುವ ಮೂಲಕ. ಆ ಚಿತ್ರದ ದೃಶ್ಯವೊಂದರಲ್ಲಿ ಆರತಿ ಅವರಿಂದ ಕೆನ್ನೆಗೆ ಪೆಟ್ಟು ತಿನ್ನುವ ದೃಶ್ಯದಲ್ಲಿ ನಿಜವಾಗಿಯೂ ಕೆನ್ನೆಯ ಮೇಲೆ ಬರೆ ಬೀಳುವಷ್ಟು ಜೋರಾಗಿ ಪೆಟ್ಟು ಬಿದ್ದಿದ್ದು, ಬಹಳ ಸುದ್ದಿಯಾಗಿತ್ತು. ಅವರಿಗೆ ಬಹಳ ಯಶಸ್ಸು ತಂದುಕೊಟ್ಟ ಆ ಚಿತ್ರದ ನಂತರ ಉಮೇಶ್ ಕನ್ನಡದ ಬೇಡಿಕೆಯ ಹಾಸ್ಯ ನಟರಾದರು. ಇದು ಬೊಂಬೆಯಾಟವಯ್ಯ ಹಾಡು ಅವರ ಖ್ಯಾತಿಯನ್ನು ಉತ್ತುಂಗಕ್ಕೇರಿಸಿದರೆ, 'ಗೋಲ್ ಮಾಲ್ ರಾಧಾಕೃಷ್ಣ' ಚಿತ್ರದ ಸೀತಾಪತಿಯ ಅಪಾರ್ಥದ ಉಪದ್ವಾಪ್ಯ ಅವರನ್ನು ಅಮರರನ್ನಾಗಿಸಿಬಿಟ್ಟಿತು. 'ವೆಂಕಟ ಇನ್ ಸಂಕಟ' ಚಿತ್ರದಲ್ಲಿ ಅಜ್ಜಿಯಾಗಿಯೂ ನಟಿಸಿ ಸೈ ಎನಿಸಿಕೊಂಡ ಉಮೇಶ್ ಅವರ ಅಭಿನಯ ಚಾತುರ್ಯ ಅದ್ಭುತ. ಹಲವು ಧಾರಾವಾಹಿಗಳಲ್ಲಿಯೂ ನಟಿಸಿದ ಉಮೇಶ್ ಅವರ ವೈಯಕ್ತಿಕ ಜೀವದಲ್ಲಿ ಉಂಡ ಪೆಟ್ಟು ಹಲವು. ಅವರ ಮಗನ ಅಕಾಲಿಕ ದುರ್ಮರಣ ಅವರನ್ನು ಜೀವನದಾದ್ಯಂತ ಕಾಡಿತು. ಅವೆಲ್ಲವನ್ನೂ ಮೆಟ್ಟಿನಿಂತು ಜನರನ್ನು ತನ್ನ ಹಾಸ್ಯದ ಮೂಲಕ ಕೊನೆಯವರೆಗೂ ನಗಿಸಿದ ಉಮೇಶ್ ಅವರ ಮನೆಯ ಹೆಸರು, 'ಬಣ್ಣದ ಲೋಕ'.

ಉಮೇಶ್ ಅವರ ಬಗ್ಗೆಯೇ ಹೆಚ್ಚು ಪ್ರಸ್ತಾಪವೇಕೆ ಎಂಬ ಅನುಮಾನವೇನಾದರೂ ನಿಮಗೆ ಕಾಡಿದಲ್ಲಿ ಇಲ್ಲಿದೆ ಉತ್ತರ.

ನಮಗೆಲ್ಲಾ, ಉಮೇಶ್ ಹಾಸ್ಯನಟರಾಗಿ ಮಾತ್ರ ಪರಿಚಿತರು. ಆದರೆ ಉಮೇಶ್ ಅವರ ಮತ್ತೂ ಹಲವು ಸಾಮರ್ಥ್ಯಗಳು, ಪ್ರತಿಭೆ ಹಲವರಿಗೆ ತಿಳಿದಿಲ್ಲ. ಉಮೇಶ್ ಅವರು ಸಂಗೀತಾಭ್ಯಾಸ ಮಾಡಿದ್ದವರು. ಹಾರ್ಮೋನಿಯಂ ಅನ್ನು ಸೊಗಸಾಗಿ ನುಡಿಸಿಕೊಂಡು ಸುಶ್ರಾವ್ಯವಾಗಿ ರಂಗಗೀತೆಗಳನ್ನು ಹಾಡುತ್ತಿದ್ದ ಉಮೇಶ್ ಅವರು ಉತ್ತಮ ಗಾಯಕರೂ ಹೌದು. ರಾಗಗಳನ್ನು ಗುರುತಿಸುವ ಮಟ್ಟಕ್ಕೆ ಅವರ ಪಾಂಡಿತ್ಯವಿತ್ತು! ಅದಕ್ಕೇ 'ಗೊಂಬೆಯಾಟವಯ್ಯ' ಹಾಡಿನಲ್ಲಿ ಅವರ ಅಭಿನಯ ಅಷ್ಟು ಸುಲಲಿತವಾಗಿ ಕಂಡಿದ್ದು?! ಹಾಸ್ಯ ಮತ್ತು ಪಾಂಡಿತ್ಯದ ಅಭಿನಯ ಎರಡೂ ಸೇರಿದ್ದ ಆ ಅಮೋಘ ಅಭಿನಯವೇ ಸಾಕು ಅವರೆಂತಹಾ ಉತ್ಕೃಷ್ಟ ಮಟ್ಟದ ಕಲಾವಿದರೆಂದು ಹೇಳಲು.

ಇನ್ನೂ ಅಚ್ಚರಿ ಮೂಡಿಸುವುದು ಅವರಲ್ಲಿ ಅಡಗಿದ್ದ ಸಾಹಿತಿ! ಹೌದು ಉಮೇಶ್ ಅವರಿಗೆ ಓದುವ ಹವ್ಯಾಸವಿದ್ದುದು ಮಾತ್ರವಲ್ಲ ಬರೆಯುವ ಹವ್ಯಾಸವೂ ಇತ್ತು! 'ಗೊಂಬೆಯಾಟವಯ್ಯ' ಎಂಬ ಕಾದಂಬರಿ ಮಲ್ಲಿಗೆ ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ನಂತರ ಪುಸ್ತಕ ರೂಪದಲ್ಲಿಯೂ ಹೊರಬಂದಿತ್ತು. ಪತ್ರಿಕೆಗಳಿಗೆ ಸಿನಿಮಾ ಕುರಿತಾದ ಲೇಖನ ಬೇಕೆಂದರೆ, ಸಂಪಾದಕರು ಉಮೇಶ್ ಅವರನ್ನು ಸಂಪರ್ಕಿಸುತ್ತಿದ್ದರಂತೆ ಮತ್ತು ಉಮೇಶ್ ಅವರು ಸ್ಪಂದಿಸಿ ಅತ್ಯಂತ ಸಮರ್ಥವಾಗಿ ಲೇಖನ ಸಿದ್ಧಪಡಿಸುತ್ತಿದ್ದರಂತೆ.

ಇಂತಹ ಸೃಜನಶೀಲ ನಟನನ್ನು ಕನ್ನಡ ಚಿತ್ರರಂಗ ಸರಿಯಾಗಿ ಬಳಸಿಕೊಳ್ಳಲಿಲ್ಲ ಎಂಬುದು ವಿಷಾದಕರ. ಚಿತ್ರರಂಗದವರಿಗೆ ಉಮೇಶಣ್ಣ. ಆತ್ಮೀಯರಿಗೆ ಉಮಿಯಾಗಿದ್ದ ಉಮೇಶ್ ಅವರ ನೆನಪು ಕನ್ನಡ ಚಿತ್ರಪ್ರೇಮಿಗಳಿಗೆ ಸದಾ ಹಸಿರು.

ಧರ್ಮೇಂದ್ರ : ಹಿಂದಿ ಚಿತ್ರರಂಗದ ಧರ್ಮೇಂದ್ರ ಅತ್ಯಂತ ಸ್ಪುರದ್ರೂಪಿ ನಟ. ಹೀಮ್ಯಾನ್, ಗರಮ್ ಧರಮ್ ಎಂದೆಲ್ಲಾ ಹೆಸರಾಗಿದ್ದ ಧರ್ಮೇಂದ್ರರ ಚಿತ್ರಜೀವನದ ಬಗ್ಗೆ ಹೆಚ್ಚು ಹೇಳುವ ಅಗತ್ಯವಿಲ್ಲ.

ಹೊಡಿಬಡಿ ಎನ್ನುವ ಚಿತ್ರಗಳಲ್ಲದೆ, ಹಾಸ್ಯಮಯ ಮತ್ತು ನವಿರು ಪ್ರೇಮಕತೆಗಳಲ್ಲಿ ನಟಿಸಿದ್ದಾರೆ ಎಂಬುದು ಅಷ್ಟೇ ನಿಜ. ಅವುಗಳಲ್ಲಿ, 'ದಿಲ್ಲಗಿ ಕಿನಾರಾ' ಚಿತ್ರಗಳು ಅವರ ಸಹಜ ಅಭಿನಯಕ್ಕೆ ಹೆಸರಾದವು. ಹಾಗೆಯೇ, ಧರ್ಮೇಂದ್ರ, ಜಯಬಾಧುರಿಯ ಜೊತೆ ನಟಿಸಿದ ಗುಡ್ಡಿ ಚಿತ್ರ ಆ ಕಾಲದ ಸೆನ್ಸೇಷನಲ್ ಹಿಟ್ ಆಗಿತ್ತು. ಧರ್ಮೇಂದ್ರ ಈ ಚಿತ್ರದಲ್ಲಿ ಚಿತ್ರನಟ ಧರ್ಮೇಂದ್ರರೇ ಆಗಿ ನಟಿಸಿದ್ದರು. ಶಾಲಾ ವಿದ್ಯಾರ್ಥಿನಿಯಾದ ಜಯಬಾಧುರಿ ಗುಡ್ಡಿ, ಚಿತ್ರನಟ ಧರ್ಮೇಂದ್ರರ ಮೇಲೆ ಹುಚ್ಚು ಪ್ರೇಮ ಬೆಳೆಸಿಕೊಂಡು ಅವರನ್ನು ಮದುವೆಯಾಗುವ ಆಸೆ ಹೊತ್ತ ಹುಡುಗಿಯಾಗಿರುತ್ತಾರೆ. ತೆರೆಯ ಮೇಲಿನ ನಟರಿಗೂ ಅವರ ನಿಜಜೀವನಕ್ಕೂ ಅಜಗಜಾಂತರ ವ್ಯತ್ಯಾಸವಿರುತ್ತದೆ ಎಂದು ಗುಡ್ಡಿಯ ಚಿಕ್ಕಪ್ಪ ಧರ್ಮೇಂದ್ರರ ಸಹಾಯದಿಂದಲೇ ಸಾಬೀತು ಮಾಡುತ್ತಾರೆ. ಧರ್ಮೇಂದ್ರರ ನಟನೆ ಈ ಚಿತ್ರದಲ್ಲಿ ಸಹಜವಾಗಿದ್ದು ಪ್ರಶಂಸೆಗೆ ಪಾತ್ರವಾಗಿತ್ತು. ಚಿತ್ರ ಪರಿಣಾಮಕಾರಿ ಎನಿಸಿದ್ದು, ಹೀಗೆ ಚಿತ್ರನಟರ ಮೇಲೆ ಮೋಹ ಬೆಳೆಸಿಕೊಂಡು ಕೇಡಿಗರ ಕೈಗೆ ಸಿಕ್ಕು ಮೋಸ ಹೋಗುತ್ತಿದ್ದ ಅಂದಿನ ಮುಗ್ಧ ಹುಡುಗಿಯರನ್ನು ಎಚ್ಚರಿಸಿದ್ದಕ್ಕಾಗಿ. ಚಲನಚಿತ್ರ ಅಂದಿನ ಯುವಜನರನ್ನು ಮರುಳು ಮಾಡಿದ್ದ ಪರಿ ಹಾಗಿತ್ತು. ಹೃಷಿಕೇಶ ಮುಖರ್ಜಿ ಅವರಂತಹ ಐಕಾನಿಕ್ ಸೂಕ್ಷ್ಮ ಸಹೃದಯೀ ನಿರ್ದೇಶಕರು ವಾಸ್ತವವನ್ನು ಜನರಿಗೆ ಹೀಗೆ ಅರ್ಥ ಮಾಡಿಸಲು ಯತ್ನಿಸಿದ್ದರು. ಅದಕ್ಕೆ ಜೊತೆಗೂಡಿದ್ದು ಧರ್ಮೇಂದ್ರ. ಹೃಷಿಕೇಶರ ಹಲವಾರು ನವಿರು ಪ್ರೇಮಕತೆಗಳಲ್ಲಿ ಧರ್ಮೇಂದ್ರ ಸುಂದರ ಅಭಿನಯ ನೀಡಿದ್ದಾರೆ.

ಪ್ರಾರಂಭವಾಗಿದ್ದು ಮುಗಿಯಲೇಬೇಕು ಎನ್ನುವ ಹಾಗೆ ಇವರೆಲ್ಲರೂ ತಮ್ಮ ತಮ್ಮ ಪಾತ್ರಗಳನ್ನು ನಿರ್ವಹಿಸಿ ಮರೆಯಾಗಿಬಿಟ್ಟಿದ್ದಾರೆ. ಆದರೆ ತಮ್ಮ ತಮ್ಮ ಪಾತ್ರಗಳ ಮೂಲಕ ಅಮರರಾಗಿದ್ದಾರೆ.

ಹೊಸ ವರ್ಷದ ಹೊಸ್ತಿಲಲ್ಲಿ ಹೊಸಲೋಕಕ್ಕೆ ತೆರಳಿರುವ ಈ ಎಲ್ಲ ಕಲಾವಿದರು ತಮ್ಮ ತಮ್ಮ ಪ್ರತಿಭೆಗಳಿಂದ ನಮ್ಮ ಹೃನ್ಮನಗಳನ್ನು ತಣಿಸಿದವರು. ಅವರಿಗೆ ಅಂತಿಮ ನಮನ.

ಇ-ಖಾತೆ ವಿಳಂಬದ ಬಗ್ಗೆ ದೂರು

45 ದಿನಗಳಲ್ಲಿ ಇ–ಖಾತೆ ವಿತರಣೆಗೆ ಲೋಕಾಯುಕ್ತ ಡಿವೈಎಸ್ಪಿ ಶೈಲೇಂದ್ರ ಸೂಚನೆ

ಮೈಸೂರು, ಡಿ.10(ಎಂಕೆ)– ಇ–ಖಾತೆ ವಿಳಂಬದ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿದ್ದು, ಅಧಿಕಾರಿಗಳು ಜನರ ಸಮಸ್ಯೆಗೆ ಸ್ಪಂದಿಸುವ ಮೂಲಕ 45 ದಿನದೊಳಗೆ ಇ–ಖಾತೆ ಮಾಡಿಕೊಡುವ ಮೂಲಕ ಸಾರ್ವಜನಿಕರ ಅಲೆದಾಟ ತಪ್ಪಿಸುವಂತೆ ಅಧಿಕಾರಿಗಳಿಗೆ ಲೋಕಾಯುಕ್ತ ಡಿವೈಎಸ್‌ಪಿ ಹೆಚ್.ಎಂ.ಶೈಲೇಂದ್ರ ಸೂಚನೆ ನೀಡಿದರು.



ಮೈಸೂರು ನಜರ್‌ಬಾದ್‌ನಲ್ಲಿರುವ ಮೈಸೂರು ತಾಲೂಕು ಕಚೇರಿ ಸಭಾಂಗಣದಲ್ಲಿ ಲೋಕಾಯುಕ್ತ ಡಿವೈಎಸ್‌ಪಿ ಎಚ್.ಎಂ.ಶೈಲೇಂದ್ರ ಬುಧವಾರ ಸಾರ್ವಜನಿಕರಿಂದ ದೂರು ಸ್ವೀಕರಿಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ತಾಲೂಕು ಕಚೇರಿ ಸಭಾಂಗಣದಲ್ಲಿ ಬುಧವಾರ ಸಾರ್ವಜನಿಕರಿಂದ ದೂರು ಸ್ವೀಕಾರ ಕಾರ್ಯಕ್ರಮದ ಬಳಿಕ ಮಾತನಾಡಿದ ಅವರು, ಅಧಿಕಾರಿಗಳು ಕಾನೂನಾತ್ಮಕವಾಗಿ ಇ–ಖಾತೆ ನೀಡಲು ಪೂರಕ ದಾಖಲೆ ಕೇಳಿ ಪಡೆಯಿರಿ, ದಾಖಲೆ ಇಲ್ಲದಿದ್ದರೆ ಅರ್ಜಿ ಸ್ವೀಕರಿಸಿದ ರಶೀದಿ ನೀಡಿ ಅರ್ಜಿದಾರರಿಗೆ ಪೂರಕ ದಾಖಲೆ ನೀಡಲು ಸಲಹೆ ನೀಡಿ. ಯಾವುದೇ ಕಾರಣಕ್ಕೂ ಅಲೆದಾಡಿಸಬೇಡಿ ಎಂದು ಹೇಳಿದರು.

ಬಂದಿರುವ 15ಕ್ಕೂ ಹೆಚ್ಚು ಅರ್ಜಿಗಳಲ್ಲಿ ಬಹುತೇಕ ಅರ್ಜಿಗಳು ಇ–ಖಾತೆಗೆ ಸಂಬಂಧಿಸಿದ್ದಾಗಿವೆ. ಉಳಿದಂತೆ ಜಮೀನಿನ ವ್ಯಾಜ್ಯ, ನೀರಿನ ಕಂದಾಯ ಸಮಸ್ಯೆ, ಅಕ್ರಮ ವಿದ್ಯುತ್ ಸಂಪರ್ಕ ದೂರು ಕೇಳಿ ಬಂದಿತು. ಕಾಮಗಾರಿ ಬಿಲ್ ಸಂಬಂಧ ಪಿಡಿಒ ಒಬ್ಬರು ಸತಾಯಿಸುತ್ತಿರುವ ಬಗ್ಗೆಯೂ ಗುತ್ತಿಗೆದಾರರೊಬ್ಬರೂ ದೂರು ನೀಡಿದರು. ಎಲ್ಲಕ್ಕೂ ಕಾನೂನಿನ ಚೌಕಟ್ಟಿನಡಿ ಬಗೆಹರಿಸುವಂತೆ ಹೇಳಿದರು.

ತಹಸೀಲ್ದಾರ್ ಮಹೇಶ್ ಕುಮಾರ್ ಮಾತನಾಡಿ, ಸರಕಾರಿ ಅಧಿಕಾರಿಗಳಾಗಿ ನಾವೆಲ್ಲರೂ ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಿದಾಗ ಇಲ್ಲಿಯವರೆಗೆ ದೂರು ಕೊಡುವ ಪ್ರಮೇಯವೇ ಬರುವುದಿಲ್ಲ. ಕಾನೂನು ಚೌಕಟ್ಟಿನಲ್ಲಿ ಜನರ ಸಮಸ್ಯೆಗಳಿಗೆ ಶೀಘ್ರವಾಗಿ ಸ್ಪಂದಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ತಾಪಂ ಇಒ ಕೃಷ್ಣ ಮತ್ತಿತರರಿದ್ದರು.

ರೇಣುಕಾಸ್ವಾಮಿ ಸಮಾಧಿ ನಾಮಫಲಕ ಧ್ವಂಸಗೊಳಿಸಿದ ಕಿಡಿಗೇಡಿಗಳು

ಚಿತ್ರದುರ್ಗ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಅಂಡ್ ಗ್ಯಾಂಗ್ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದು ವಿಚಾರಣೆ ಎದುರಿಸುತ್ತಿವೆ. ದರ್ಶನ್ ಅಭಿನಯದ 'ಡೆವಿಲ್' ಚಿತ್ರ ನಾಳೆ (ಗುರುವಾರ) ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಆದರೆ ಇದಕ್ಕೂ ಮುನ್ನ ದಿನ ರೇಣುಕಾಸ್ವಾಮಿ ಸಮಾಧಿ ನಾಮಫಲಕವನ್ನು ಕಿಡಿಗೇಡಿಗಳು ಧ್ವಂಸಗೊಳಿಸಿದ್ದಾರೆ. ರುದ್ರಭೂಮಿ ಬಳಿ ಲೇಔಟ್ ನಿರ್ಮಾಣ ಮಾಡುವ ವೇಳೆ ಸಮಾಧಿಗೆ ಧಕ್ಕೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಈ ಸಂಬಂಧ ಕೆಲವು ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ. ಈ ಬಗ್ಗೆ ತಮಗೇನು ಗೊತ್ತಿಲ್ಲ ಎಂದು ರೇಣುಕಾಸ್ವಾಮಿ ಪೋಷಕರು ತಿಳಿಸಿದ್ದಾರೆ.

ಬೀದಿನಾಯಿಗಳ ದತ್ತು ಪಡೆಯಲು; ಆಹಾರ ಪೂರೈಸಲು ಅರ್ಜಿ ಆಹ್ವಾನ

ಮೈಸೂರು,ಡಿ.10– ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ NGO's, ಪ್ರಾಣಿ ಪ್ರಿಯರು, ಪ್ರಾಣಿಗಳ ಸಂರಕ್ಷಣೆ ಸಂಕಲ್ಪ ಹೊಂದಿರುವವರು, ಪ್ರಾಣಿಗಳ ಮೇಲೆ ದಯೆ ಇರುವವರು ಬೀದಿನಾಯಿಗಳನ್ನು ದತ್ತು ಪಡೆಯಲು ಅಥವಾ ಆಶ್ರಯ ತಾಣದಲ್ಲಿರುವ ಬೀದಿ ನಾಯಿಗಳಿಗೆ ಆಹಾರ ಪೂರೈಸಲು ಇಚ್ಛಿಸುವವರು ಮೈಸೂರು ಮಹಾನಗರ ಪಾಲಿಕೆಯ ಪಾಲಿಕೆ ಆರೋಗ್ಯಾಧಿಕಾರಿ, ದೂ.ಸಂ: 9620449505/9986303236 ಅನ್ನು ಸಂಪರ್ಕಿಸಬಹುದು ಎಂದು ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಬೆಳಗಾವಿ ವಿಧಾನಮಂಡಲ ಅಧಿವೇಶನ



ಹೊಸ ಕೈಗಾರಿಕಾ ನೀತಿಯಿಂದ 93,925 ಉದ್ಯೋಗ ಸೃಷ್ಟಿ

ಪರಿಷತ್‌ನಲ್ಲಿ ದಿನೇಶ್ ಗೂಳಿಗೌಡರಿಗೆ ಸಚಿವ ಎಂ.ಬಿ. ಪಾಟೀಲ್ ಉತ್ತರ

ಬೆಳಗಾವಿ, ಡಿ.10– ಹೊಸ ಕೈಗಾರಿಕಾ ನೀತಿಯಿಂದ ರಾಜ್ಯದಲ್ಲಿ 93,925 ಉದ್ಯೋಗ ಸೃಷ್ಟಿಯಾಗಿವೆ. ಕಳೆದ ಎರಡೂವರೆ ವರ್ಷಗಳಲ್ಲಿ 1,91,454 ಕೋಟಿ ರೂ. ವಿದೇಶಿ ಬಂಡವಾಳ ಹೂಡಿಕೆಯಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.



ದಿನೇಶ್ ಗೂಳಿಗೌಡ



ಎಂ.ಬಿ.ಪಾಟೀಲ್

ವಿಧಾನಪರಿಷತ್‌ನಲ್ಲಿ ದಿನೇಶ್ ಗೂಳಿ ಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಳೆದ ಮೂರು ವರ್ಷಗಳಲ್ಲಿ 1886 ಯೋಜನೆಗಳಿಂದ 6,92,545 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ. ಇವುಗಳಲ್ಲಿ 67 ಯೋಜನೆಗಳು ಅನುಷ್ಠಾನಗೊಂಡಿದ್ದು, 93,925 ಉದ್ಯೋಗ ಸೃಜನೆಯಾಗಿದೆ.

ಹೊಸ ಕೈಗಾರಿಕಾ ನೀತಿ (2025–2030) ಜಾರಿಗೆ ತಂದನಂತರ 93 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇದರಲ್ಲಿ 5,50,805 ಕೋಟಿ ಬಂಡವಾಳ ಹೂಡಿಕೆ ಮತ್ತು 8,76,233 ಉದ್ಯೋಗಾವಕಾಶಗಳ ನಿರೀಕ್ಷೆ ಇದೆ. ಸದರಿ ಕೈಗಾರಿಕಾ ನೀತಿಯು, ರಾಜ್ಯದ ಸಮಗ್ರ ಅಭಿವೃದ್ಧಿಯೊಂದಿಗೆ ಕೈಗಾರಿಕಾ ವಿಕಾಸದ ಯೋಜನೆಗಳನ್ನು ರೂಪಿಸಲಾಗಿದೆ. ಬೆಂಗಳೂರಿನಿಂದ ಹೊರಗಡೆ, ಕೈಗಾರಿಕಾ ಹಿಂದುಳಿದ ಪ್ರದೇಶವನ್ನು ಉತ್ತೇಜಿಸುವ ಗುರಿ ಹೊಂದಿದೆ.

ರಾಜ್ಯದ ಎಲ್ಲಾ ಜಿಲ್ಲಾ ಪ್ರದೇಶಗಳಿಗೂ ಗಣನೀಯ ಪ್ರಮಾಣದಲ್ಲಿ ಕೈಗಾರಿಕೆಗಳ ವಿಸ್ತರಣೆ ಮಾಡುವ ಗುರಿ ಹೊಂದಲಾಗಿದೆ. ಹಿಂದುಳಿದ ತಾಲೂಕುಗಳಲ್ಲಿ ಹೂಡಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಮೂರು ವಲಯಗಳನ್ನಾಗಿ ವರ್ಗೀಕರಿಸಿದೆ. ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆ ಅಥವಾ ತಾಲೂಕುಗಳನ್ನು ವಲಯ–1 ಮತ್ತು ವಲಯ–2ರಲ್ಲಿ ಹಾಗೂ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ವಲಯ–3ರಲ್ಲಿ ವರ್ಗೀಕರಿಸಲಾಗಿದೆ.

ಕೈಗಾರಿಕಾ ನೀತಿ 2025–30ರ ಅಡಿಯಲ್ಲಿ ಪ್ರೋತ್ಸಾಹ ಮತ್ತು ರಿಯಾಯಿತಿ ಪಡೆಯುವ ಕೈಗಾರಿಕೆಗಳು ಒಟ್ಟು ಕನಿಷ್ಠ ಶೇ. 70ರಷ್ಟು ಉದ್ಯೋಗಾವಕಾಶ ಹಾಗೂ ಗ್ರೂಪ್ ಡಿ ಉದ್ಯೋಗಗಳನ್ನು ಶೇ. 100ರಷ್ಟು ಕನ್ನಡಿಗರಿಗೆ ನೀಡಬೇಕೆಂದು ಷರತ್ತು ವಿಧಿಸಲಾಗುತ್ತಿದೆ. 2018–19ರಿಂದ 2022–23ರವರೆಗೆ 1878 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದ 4,56,841.90 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆ ಮತ್ತು 800482 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ. ಇವುಗಳ ಪೈಕಿ 260 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ 98662.7 ಕೋಟಿ ಮೊತ್ತದ ಬಂಡವಾಳ ಹೂಡಿಕೆಯಾಗಿದೆ. 1,97,208 ಉದ್ಯೋಗ ಸೃಜನೆಯಾಗಿದೆ.

ಕಳೆದ ಎರಡೂವರೆ ವರ್ಷಗಳಲ್ಲಿ 1,91,454 ಕೋಟಿ ರೂ. ವಿದೇಶಿ ಬಂಡವಾಳ ಹೂಡಿಕೆಯಾಗಿದೆ. 2023–24ರಲ್ಲಿ 54,427 ಕೋಟಿ ರೂ., 2024–25ರಲ್ಲಿ 56,030 ಕೋಟಿ ರೂ., 2025–26 (ಏಪ್ರಿಲ್–ಸೆಪ್ಟೆಂಬರ್) 80,997 ಕೋಟಿ ರೂ. ವಿದೇಶಿ ಹೂಡಿಕೆಯಾಗಿದೆ ಎಂದು ಸಚಿವರು ಉತ್ತರಿಸಿದ್ದಾರೆ.

ನಾನು ಸದಾ ಜೈನ ಸಮುದಾಯದೊಂದಿಗಿದ್ದೇನೆ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲ

ಬೆಳಗಾವಿ, ಡಿ.10(ಕೆಎಂಶಿ)– ಶಾಂತಿ, ಸಹನೆ, ಅಹಿಂಸೆ, ತ್ಯಾಗದ ಸಂಕೇತ ಜೈನ ಸಮುದಾಯಕ್ಕೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಿದ್ದೇ ಕಾಂಗ್ರೆಸ್ ಸರ್ಕಾರ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಯಾವಾಗಲೂ ಜೈನ ಸಮುದಾಯದ ಜೊತೆ ಇದ್ದೇನೆ, ಜೈನರ ಪದ್ಧತಿ, ಸಂಸ್ಕೃತಿ ಉಳಿಸಿ, ಬೆಳೆಸಿಕೊಂಡು ಬರುತ್ತಿದ್ದೀರಿ. ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎನ್ನುವ ಮಾತಿನ ಮೇಲೆ ನಂಬಿಕೆ ಇಡೋಣ.

ಧರ್ಮ ಯಾವುದಾದರೂ ತತ್ವ ಒಂದೇ, ನಾಮ ನೂರಾದರೂ ದೈವ ಒಂದೇ, ಪೂಜೆ ಯಾವುದಾದರೂ ಭಕ್ತಿ ಒಂದೇ, ಕರ್ಮ ಹಲವಾದರೂ ನಿಷ್ಠೆ ಒಂದೇ, ದೇವನೊಬ್ಬ ನಾಮ ಹಲವು ಎಂಬುದರಲ್ಲಿ ನಂಬಿಕೆ ಇಟ್ಟು ಕೊಂಡಿದ್ದೇವೆ ಎಂದರು.

ಆಚಾರ್ಯರತ್ನ ಮುನಿಮಹಾರಾಜರ 94ನೇ ಜನ್ಮ ಮಹೋತ್ಸವದಲ್ಲಿ ಮಾತನಾಡಿದ ಅವರು, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಕಷ್ಟಕಾಲದಲ್ಲಿದ್ದಾಗ ತೆಗೆದುಕೊಂಡ ಒಂದು ನಿರ್ಧಾರದಿಂದ ಇಡೀ ದೇಶದ ಜೈನ ಸಮುದಾಯ ಒಳ್ಳೆ ಕೆಲಸ ಮಾಡಿದ್ದೀರಿ ಎಂಬ ಮೆಚ್ಚುಗೆ ವ್ಯಕ್ತಪಡಿಸಿತು ಎಂದು ಸ್ಮರಿಸಿದರು.

ವೀರೇಂದ್ರ ಹೆಗಡೆ ವಿರುದ್ಧ ಷಡ್ಯಂತ್ರ ವೇಳೆ ತಾವು ತೆಗೆದುಕೊಂಡ ನಿರ್ಧಾರವನ್ನು ರಾಷ್ಟ್ರೀಯ, ರಾಜ್ಯ ಮಾಧ್ಯಮಗಳು ಹಾಗೂ ಅನೇಕ ನಾಯಕರು ಪ್ರಶ್ನಿಸಿದವು. ಆದರೆ, ಯಾವ ಒತ್ತಡಕ್ಕೂ ಮಣಿಯಲಿಲ್ಲ, ನಾನು ಏನು ಹೇಳಬೇಕೋ ಅದನ್ನು ಮಾಧ್ಯಮಗಳೇ ವ್ಯಾಖ್ಯಾನಿಸಲಿ ಎಂದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳಿಗೆ ಅನುಮತಿ ಸಂಬಂಧ ಸಂಪುಟ ಸಭೆಯಲ್ಲಿ ನಿರ್ಧಾರ

• ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯೆ • ಐಪಿಎಲ್ ಸೇರಿ ಯಾವ ಪಂದ್ಯವೂ ರಾಜ್ಯದಿಂದ ಹೊರ ಹೋಗಲು ಬಿಡಲ್ಲ

ಬೆಳಗಾವಿ, ಸುವರ್ಣವಿಧಾನಸೌಧ, ಡಿ.10(ಕೆಎಂಶಿ)–ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳಿಗೆ ಅನುಮತಿ ನೀಡುವ ಕುರಿತು ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.



ಕೆಎಸ್‌ಸಿಎ ನೂತನ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳು ನಡೆಯುವುದನ್ನು ನಿಲ್ಲಿಸಬೇಕೆಂಬ ಯಾವುದೇ ಉದ್ದೇಶ ಇಲ್ಲ. ಜನಜಂಗುಳಿ ನಿಯಂತ್ರಣ ಕ್ರಮಗಳ ಬಗ್ಗೆ ಆಲೋಚಿಸಬೇಕು. ಜೊತೆಗೆ ನ್ಯಾಯಮೂರ್ತಿ ಮೈಕಲ್ ಡಿ. ಕುನ್ಹಾ ಸಮಿತಿ ಸಲಹೆಗಳನ್ನು ಹಂತ, ಹಂತವಾಗಿ ಪಾಲನೆ ಮಾಡುವ ಬಗ್ಗೆ ವೆಂಕಟೇಶ್ ಪ್ರಸಾದ್ ಸಹ ಒಪ್ಪಿದ್ದಾರೆ ಎಂದರು.

ಕರ್ನಾಟಕದ ಗೌರವ, ಸ್ವಾಭಿಮಾನಕ್ಕೆ ಯಾವುದೇ ಧಕ್ಕೆ ಆಗದಂತೆ ಕ್ರಿಕೆಟ್ ಅಭಿಮಾನಿಗಳ ಭಾವನೆಗಳಿಗೆ ಸ್ಪಂದಿಸಲು ಸರ್ಕಾರ ಬದ್ಧವಾಗಿದೆ.

ಐಪಿಎಲ್ ಸೇರಿದಂತೆ ಯಾವುದೇ ಪಂದ್ಯಗಳು ಬೆಂಗಳೂರಿನಿಂದ ಹೊರಗೆ ಹೋಗಲು ಬಿಡುವುದಿಲ್ಲ. ಒಗ್ಗೂಡಿ ಕೆಲಸ ಮಾಡೋಣ ಎಂದಿದ್ದೇನೆ. ನೂತನ ಕ್ರೀಡಾಂಗಣಗಳ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದೆ. ಈ ಬಗ್ಗೆಯೂ ಚರ್ಚೆ ನಡೆಯಲಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳಿಗೆ ಅನುಮತಿ ನೀಡಬೇಕು ಎಂಬುದಾಗಿ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಮತ್ತು ತಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನನ್ನನ್ನು ಭೇಟಿ ಮಾಡಿ ಸಹಕಾರ ಕೋರಿದ್ದಾರೆ.

ಬಿಜೆಪಿ ಹೋರಾಟ ವಿಫಲ: ರೈತರ ವಿಚಾರಗಳನ್ನು ಸರ್ಕಾರ ಸರಿಯಾಗಿ ನಿಭಾಯಿಸಿಲ್ಲ ಎಂಬ ವಿರೋಧ ಪಕ್ಷಗಳ ಆರೋಪ ರಾಜಕೀಯ, ಸರ್ಕಾರ ರೈತರ ಸಮಸ್ಯೆಗಳನ್ನು ಬಗೆಹರಿಸಿದೆ. ಕಬ್ಬು, ಮೆಕ್ಕೆ ಜೋಳ ಖರೀದಿ ವಿಚಾರದಲ್ಲಿ ದೊಡ್ಡ ತೀರ್ಮಾನ ತೆಗೆದುಕೊಂಡಿದ್ದೇವೆ, ಬಿಜೆಪಿ ಹೋರಾಟ ವಿಫಲವಾಗಿದೆ ಎಂದರು.

ದ್ವೇಷ ಭಾಷಣ ನಿಯಂತ್ರಣ ವಿಧೇಯಕ ಸರ್ಕಾರದ ಅಜೆಂಡಾ, ರಾಜ್ಯದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆ ಕಾಪಾಡಬೇಕಿದೆ, ದ್ವೇಷ ಭಾಷಣ ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಚಿಕ್ಕಮಗಳೂರು ಜಿಲ್ಲೆ ಕಡೂರಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಹತ್ಯೆಯಾಗಿರುವುದು ನನಗೆ ತಿಳಿದಿದೆ. ಬಿ.ಕೆ.ಹರಿಪ್ರಸಾದ್ ಹೇಳಿಕೆ ಗಮನಿಸಿಲ್ಲ. ಇದರ ಬಗ್ಗೆ ತಿಳಿದು ನಂತರ ಮಾತನಾಡುತ್ತೇನೆ. ಸಿಎಲ್‌ಪಿ ಸಭೆಯಲ್ಲಿ ಅಧಿಕಾರಿಗಳ ಭ್ರಷ್ಟಾಚಾರ ಕುರಿತು ಪತ್ರಿಕೆ, ಟಿವಿ ಮಾಧ್ಯಮಗಳಲ್ಲಿ ಬಂದಿರುವ ಯಾವುದೇ ವಿಚಾರ ಚರ್ಚೆಯಾಗಿಲ್ಲ ಎಂದರು.

ಧರ್ಮಸ್ಥಳದ ವಿರುದ್ಧ ಷಡ್ಯಂತ್ರ; ಸತ್ಯ ಮೇಲುಗೈ ಸಾಧಿಸಿದೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ

ಬೆಳಗಾವಿ, ಡಿ.10– ಧರ್ಮಸ್ಥಳದ ವಿರುದ್ಧ ಪಿತೂರಿ ನಡೆಯುತ್ತಿದೆ. ಇಂತಹ ವಿವಾದಗಳು ಹಲವು ತಲೆಮಾರುಗಳಿಂದ ಉಳಿದುಕೊಂಡಿರುವ ಸಂಸ್ಥೆಗಳಿಗೆ ಹಾನಿ ಮಾಡಬಹುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬುಧವಾರ ಹೇಳಿದ್ದಾರೆ

ಬೆಳಗಾವಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಧರ್ಮಸ್ಥಳದ ವಿರುದ್ಧ ಪಿತೂರಿ ನಡೆಯುತ್ತಿದೆ ಎಂದು ನಾನು ವಿಧಾನಸಭೆಯಲ್ಲಿ ಬಹಿರಂಗವಾಗಿ ಹೇಳಿದ್ದೆ. ಈಗ ಸತ್ಯ ಮೇಲುಗೈ ಸಾಧಿಸಿದೆ. ಕಾನೂನು ತನ್ನದೇ ಆದ ಹಾದಿಯನ್ನು ಹಿಡಿಯಬೇಕು. ಇಂತಹ ವಿವಾದಗಳು ಹಲವು ತಲೆಮಾರುಗಳಿಂದ ಜಾರಿಯಲ್ಲಿರುವ ಸಂಸ್ಥೆಗಳಿಗೆ ಹಾನಿ ಮಾಡಬಹುದು. ಆರ್‌ಎಸ್‌ಎಸ್ ಮತ್ತು ಬಿಜೆಪಿ ನಡುವೆ ದೊಡ್ಡ ವ್ಯತ್ಯಾಸವಿದೆ ಮತ್ತು ಅದು ಕೂಡ ಈ ವಿವಾದದಲ್ಲಿ ಆಳವಾಗಿ ಬೇರೂರಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣ ಕೊನೆಗೂ ತಾರ್ಕಿಕ ಅಂತ್ಯ ಕಾಣುತ್ತಿದ್ದು, ವಿಶೇಷ ತನಿಖಾ ತಂಡ (ಎಸ್‌ಐಟಿ) ಬೆಳ್ತಂಗಡಿ ನ್ಯಾಯಾಲಯಕ್ಕೆ ಪ್ರಾಥಮಿಕ ವರದಿಯನ್ನು ಸಲ್ಲಿಸಿದೆ.

ಪ್ರಾಥಮಿಕ ವರದಿಯಲ್ಲಿ ಧರ್ಮಸ್ಥಳದ ವ್ಯವಸ್ಥಾಪಕರಿಗೆ ಮತ್ತು ಮೇಲ್ವಿಚಾರಕರಿಗೆ



ಕ್ಲೀನ್‌ಚಿಟ್ ನೀಡಲಾಗಿದ್ದು, ಧರ್ಮಸ್ಥಳದಲ್ಲಿ ಅಂತಹ ಯಾವುದೇ ಕೃತ್ಯಗಳು ನಡೆದಿಲ್ಲ ಎಂದು ಸ್ಪಷ್ಟಪಡಿಸಿದೆ. ಆರೋಪಿಗಳಾದ ಚಿನ್ನಯ್ಯ, ಮಹೇಶ್ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ವಿಠ್ಠಲ ಗೌಡ, ಟಿ.ಜಯಂತ್ ಮತ್ತು ಸುಜಾತಾ ಭಟ್ ಅವರು ಅಪರಾಧ ಕೃತ್ಯದಲ್ಲಿ ನೇರವಾಗಿ ಶಾಮೀಲಾಗಿದ್ದಾರೆ. ಈ ಗ್ಯಾಂಗ್ ಎ1ಆರೋಪಿ ಚಿನ್ನಯ್ಯನಿಗೆ ಹಣದ ಆಮಿಷ ತೋರಿಸಿ, ಆತನಿಂದ 'ಅಪರಿಚಿತ ಶವಗಳನ್ನು ಹೂತಿದ್ದೇನೆ' ಎಂದು ಸುಳ್ಳು ಹೇಳಿಸಿ, ಅದನ್ನು ವಿಡಿಯೋ ರೆಕಾರ್ಡ್ ಮಾಡಿಕೊಂಡಿರುವುದು ಬಯಲಾಗಿದೆ. ಹಣದ ಆಸೆಗೆ ಬಲಿಯಾದ ಚಿನ್ನಯ್ಯ ಬುರುಡೆ ಕಥೆ ಕಟ್ಟಿ, ಈ ಷಡ್ಯಂತ್ರಕ್ಕೆ ಸಹಕರಿಸಿದ್ದಾನೆ ಎಂದು ತಿಳಿಸಿದೆ.

ಕೋರ್ಟ್‌ಗೆ ಸಲ್ಲಿಸಿರುವುದು ಕೇವಲ ಪ್ರಾಥಮಿಕ ವರದಿಯಾಗಿದ್ದು, ತನಿಖೆ ಇನ್ನೂ ಪೂರ್ಣಗೊಂಡಿಲ್ಲ. ಹೀಗಾಗಿ ಮತ್ತಷ್ಟು ಸಮಯ ನೀಡುವಂತೆ ಎಸ್‌ಐಟಿ ನ್ಯಾಯಾಲಯವನ್ನು ಕೋರಿದೆ. ಕೆಲವು ಪ್ರಮುಖ ತಾಂತ್ರಿಕ ಸಾಕ್ಷಿಗಳ ವರದಿಗಳು ಇನ್ನೂ ಬರಬೇಕಿದೆ ಈ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಅಂತಿಮ ಮತ್ತು ಸಮಗ್ರ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ವಿಶೇಷ ತನಿಖಾ ತಂಡ, ನ್ಯಾಯಾಧೀಶರಲ್ಲಿ ಮನವಿ ಮಾಡಿದೆ.

ವಿಧಾನಸಭೆಯಲ್ಲಿ ಸಿಎಂ ಕುರ್ಚಿ ಗುದ್ದಾಟದ ಸದ್ದು

ಆರ್.ಅಶೋಕ್ ಮಾತಿಗೆ ಕೆರಳಿದ ಬೈರತಿ; ತೀವ್ರ ಮಾತಿನ ಚಕಮಕಿ

ಬೆಳಗಾವಿ, ಡಿ.10– ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ನಾಯಕತ್ವ ಬಿಕ್ಕಟ್ಟಿನ ಸಮಸ್ಯೆಯನ್ನು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಬುಧವಾರ ವಿಧಾನಸಭೆಯಲ್ಲಿ ಪ್ರಸ್ತಾಪಿಸಿದರು. ರಾಜಕೀಯ ಅಸ್ಥಿರತೆ ಹಾಗೂ ಸಿಎಂ ಕುರ್ಚಿ ಬಗ್ಗೆ ಸಾರ್ವಜನಿಕರ ಚರ್ಚೆಯಿಂದ ರಾಜ್ಯದ ಅಭಿವೃದ್ಧಿ ಮೇಲೆ ಪರಿಣಾಮ ಬೀರಿದೆ ಎಂದರು.



ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಚರ್ಚೆ ವೇಳೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ನಡುವಿನ ಸಿಎಂ ಕುರ್ಚಿ ಬದಲಾವಣೆ ವಿಚಾರ ಪ್ರಸ್ತಾಪಿಸಿದ ಆರ್.ಅಶೋಕ್, ನನ್ನ ಕಣ್ಣೆದುರೇ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಳಿತಿದ್ದಾರೆ. ಆದರೆ ಪದೇ ಪದೇ ಕಾಂಗ್ರೆಸ್‌ನಲ್ಲಿ ನಾಯಕತ್ವದ ಬಗ್ಗೆಯೇ ಗಲಾಟೆ ನಡೆಯುತ್ತಿದೆ ಎಂದು ದೂರಿದರು.

ಇತ್ತೀಚೆಗೆ ಪರಿಷತ್ ಸದಸ್ಯ ಚನ್ನರಾಜ್ ಹಟ್ಟಿಹೊಳಿಯವರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಉದ್ದೇಶಿಸಿ 'ಮುಖ್ಯಮಂತ್ರಿ' ಎಂದು ಸ್ವಾಗತಿಸಿ ಹಾಕಿದ್ದ ಮೆಸೇಜ್ ಅನ್ನು ಉಲ್ಲೇಖಿಸಿ ಆರ್.ಅಶೋಕ್ ಕಾಲೆಳೆದರು. ಕಣ್ತಪ್ಪಿನಿಂದ ಆಗಿದೆ ಎಂದು ಸಮರ್ಥನೆ ಕೊಡಲಾಗುತ್ತಿದೆ. ಆದರೆ ಈ ಬಗ್ಗೆ ಮುಖ್ಯಮಂತ್ರಿಗಳು ಸ್ಪಷ್ಟನೆ ಕೊಡಬೇಕು ಎಂದು ಆರ್. ಅಶೋಕ್ ಆಗ್ರಹಿಸಿದರು.

ಬೈರತಿ ಸುರೇಶ್ ಕೂಡ 'ಕಿಂಗ್ ಅಲೈವ್' ಅಂತಾರೆ. ರಾಜ್ಯದಲ್ಲಿ ಈ ವಿಚಾರದಲ್ಲಿ ಡೌಟ್ ಬಂದಿದೆ. ಇದರಿಂದ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಆಡಳಿತ ಯಂತ್ರ ಕುಸಿದು ಹೋಗಿದೆ ಎಂದು ಆರೋಪಿಸಿದರು.

ಪ್ರಮುಖ ವಿಷಯದಿಂದ ಬೇರೆಡೆಗೆ ಚರ್ಚೆ ಹೋಗದಂತೆ ಸ್ಪೀಕರ್ ಯು.ಟಿ.ಖಾದರ್ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಆರ್.ಅಶೋಕ್, ನಾನು ಯಾಕೆ ನಾಯಕತ್ವ ವಿಚಾರವಾಗಿ ಮಾತನಾಡಬಾರದು. ಸಿದ್ದರಾಮಯ್ಯ ನಾಯಕತ್ವ ಬಗ್ಗೆ ಮಾತನಾಡುತ್ತಿಲ್ಲ. ನಾಯಕತ್ವದ ಸಮಸ್ಯೆ ಇದ್ದರೆ ಉತ್ತರ ಕರ್ನಾಟಕದ ಅಭಿವೃದ್ಧಿ ಆಗುವುದಿಲ್ಲ ಎಂದರು.

ಕೆರಳಿದ ಬೈರತಿ ಸುರೇಶ್: ತಮ್ಮ ಹೆಸರನ್ನು ಪ್ರಸ್ತಾಪಿಸುತ್ತಿದ್ದಂತೆ ಮಧ್ಯಪ್ರವೇಶಿಸಿದ ಸಚಿವ ಬೈರತಿ ಸುರೇಶ್ ಅವರು ಆರ್ ಅಶೋಕ್‌ಗೆ ತಿರುಗೇಟು ನೀಡಿದರು. ಹೌದು, ನಾನು ಕಿಂಗ್ ಈಸ್ ಅಲೈವ್ ಅಂತ ಹೇಳಿದ್ದೆ. ಮುಖ್ಯಮಂತ್ರಿ ಇದ್ದಾರೆ, ಹೈಕಮಾಂಡ್ ಇದೆ. ನಾನು ಕಾಂಗ್ರೆಸ್ ಪಕ್ಷಕ್ಕೆ ನಿಯತ್ತಾಗಿದ್ದೇನೆ. ನಾನು ಸಿದ್ದರಾಮಯ್ಯ ಸಾಹೇಬರಿಗೆ ನಿಯತ್ತು. ಮೊದಲು ನಿಮ್ಮ ತಟ್ಟೆಯ ಹೆಗ್ಗಣ ನೋಡಿಕೊಳ್ಳಿ. ಸುಮ್ಮನೆ ಏನೇನೋ ಮಾತಾಡಬೇಡಿ. ನಿಮ್ಮ ಅಧ್ಯಕ್ಷರನ್ನೇ ಚೇಂಜ್ ಮಾಡ್ತೇವೆ ಅಂತಿದ್ದೀರಲ್ಲ, ಮೊದಲು ನಿಮ್ಮದನ್ನ ಸರಿಮಾಡಿ ಎಂದು ಗುಡುಗಿದರು.

ಈ ಹಂತದಲ್ಲಿ ಆಡಳಿತ ಹಾಗೂ ವಿಪಕ್ಷ ಸದಸ್ಯರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. ನಿಮ್ಮ ಅವಧಿಯಲ್ಲಿ ಐವರನ್ನು ಚೇಂಜ್ ಮಾಡಿದ್ರಿ. ಯಡಿಯೂರಪ್ಪನವರನ್ನು ಕೆಳಗಿಳಿಸಿದ್ರಿ ಎಂದು ನೆನಪಿಸಿ, ಆರ್.ಅಶೋಕ್ ಮಾತಿಗೆ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು. ಹೆಚ್.ಸಿ.ಬಾಲಕೃಷ್ಣ, ಬೇಳೂರು ಗೋಪಾಲಕೃಷ್ಣ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಬಿಜೆಪಿ ವಿರುದ್ಧ ಮುಗಿಬಿದ್ದರು.

ಗ್ಯಾರಂಟಿ ಮಾತ್ರ ನಂಬ್ಕೊಂಡಿದ್ರೆ ಆಗಲ್ಲ, ಅಭಿವೃದ್ಧಿನೂ ಆಗ್ಬೇಕು ಅನ್ನೋದು ಕಾಂಗ್ರೆಸ್ ಶಾಸಕರ ಅಭಿಪ್ರಾಯ

ಮಾಜಿ ಸಚಿವ ಕೆ.ಎನ್ ರಾಜಣ್ಣ ಹೇಳಿಕೆ

ಬೆಳಗಾವಿ, ಡಿ.10– ಗ್ಯಾರಂಟಿ ಯೋಜನೆಗಳಿಂದಲೇ ರಾಜ್ಯದ ಜನತೆಯ ಮನಸ್ಸನ್ನು ಗೆಲ್ಲಲು ಸಾಧ್ಯವಿಲ್ಲ. ಗ್ಯಾರಂಟಿ ಯೋಜನೆಗಳ ಜೊತೆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸಗಳು ಕೂಡ ಆಗಬೇಕು ಎಂಬ ಅಭಿಪ್ರಾಯವನ್ನು ನಿನ್ನೆ (ಮಂಗಳವಾರ) ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷ ಸಭೆಯಲ್ಲಿ ಹಲವು ಶಾಸಕರು ವ್ಯಕ್ತಪಡಿಸಿದ್ದಾರೆ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ.

ಇಂದು (ಬುಧವಾರ)ಬೆಳಗಾವಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳ ಜೊತೆ ಜೊತೆಗೆ ಅಭಿವೃದ್ಧಿ ಕೆಲಸಗಳು ಕೂಡ ಆದರೆ ನಮಗೆ ಒಳ್ಳೆಯ ಹೆಸರು ಬರುತ್ತದೆ ಎಂಬ ಸಲಹೆ ನೀಡಲಾಗಿದೆ ಎಂದರು.

ಎಐಸಿಸಿ ಅಧ್ಯಕ್ಷರ ಸೂಚನೆಯಂತೆ ಯಾವ ಮಂತ್ರಿಗಳೂ, ಶಾಸಕರು ಸಿಎಂ ಬದಲಾವಣೆ ಬಗ್ಗೆ ಚರ್ಚೆಯೂ ಮಾಡಬಾರದು, ಪ್ರಸ್ತಾಪ ಕೂಡ ಮಾಡಬಾರದು. ಹಾಗಾಗಿ ನಾಯಕತ್ವ ಬದಲಾವಣೆ ವಿಚಾರವಾಗಿ ಯಾವ ಪ್ರಸ್ತಾಪವೂ ಇಲ್ಲ, ಚರ್ಚೆಯೂ ಶಾಸಕಾಂಗ ಸಭೆಯಲ್ಲಿ ಆಗಿಲ್ಲ, ಅದರ ಪುನರುಚ್ಚಾರದ ಅಗತ್ಯವೂ ಇಲ್ಲ ಎಂದರು.

ಶಾಸಕಾಂಗ ಪಕ್ಷ ಸಭೆಯಲ್ಲಿ ಗ್ಯಾರಂಟಿ ಪ್ರಸ್ತಾಪವೇ ಆಗಿಲ್ಲ

ಬೆಳಗಾವಿ: ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಕುರಿತು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆಯೇ ನಡೆದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಧರ್ಮಸ್ಥಳ ಪ್ರದೇಶದಲ್ಲಿನ ಅಸಹಜ ಸಾವುಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿರುವ ವಿಶೇಷ ತನಿಖಾ ದಳ (ಎಸ್‌ಐಟಿ)ದ ಆರೋಪಪಟ್ಟಿಯನ್ನು ತಾವು ನೋಡಿಯೇ ಇಲ್ಲ ಎಂದರು.

ತೊಗರಿಗೆ ಕನಿಷ್ಠ ಬೆಂಬಲ ಬೆಲೆ ನೀಡುವಂತೆ ಒತ್ತಾಯಿಸಿ ಪ್ರಧಾನಿ ಅವರಿಗೆ ಪತ್ರ ಬರೆಯಲಾಗಿದೆ. ಮುಖ್ಯಮಂತ್ರಿಯಾಗಿ ಹುದ್ದೆಯಲ್ಲಿ ಮುಂದುವರಿಕೆ ಕುರಿತು ಪಕ್ಷದ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದರು.

ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಸ್ವಂತ ಕಟ್ಟಡ

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ತಂಗಡಗಿ ಭರವಸೆ

ಬೆಳಗಾವಿ, ಸುವರ್ಣವಿಧಾನಸೌಧ, ಡಿ.10(ಕೆಎಂಶಿ)– ಗ್ರಾಮೀಣ ವಿದ್ಯಾರ್ಥಿಗಳ ಉತ್ತಮ ವ್ಯಾಸಂಗದ ದೃಷ್ಟಿಯಿಂದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ಎಸ್. ತಂಗಡಗಿ ವಿಧಾನ ಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಹೆಚ್.ಡಿ ರೇವಣ್ಣ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, 2024–25ನೇ ಸಾಲಿನಲ್ಲಿ ಮಂಜೂರಾಗಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡ ನಿರ್ಮಾಣ ಹಾಸನದ ಲೋಕೋಪಯೋಗಿ ಇಲಾಖೆ ಮೂಲಕ ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ 2.50 ಕೋಟಿ ರೂ. ಜಿಲ್ಲಾಧಿಕಾರಿಗಳ ಖಾತೆಗೆ ಬಿಡುಗಡೆ ಮಾಡಲಾಗಿದೆ. ಕಟ್ಟಡ ಕಾಮಗಾರಿ ಪ್ರಗತಿ ಯಲ್ಲಿದ್ದು ಆದಷ್ಟು ಶೀಘ್ರ ಪೂರ್ಣಗೊಳಿಸಲಾಗುವುದು ಎಂದರು.



ಕೆಆರ್‌ಎಸ್ ಸೇರಿದಂತೆ ಪ್ರಮುಖ ಜಲಾಶಯಗಳಲ್ಲಿ ಹೂಳು ಸಂಗ್ರಹ

65 ಟಿಎಂಸಿ ನೀರು ವ್ಯರ್ಥ; ಇದಕ್ಕೆ ಪರಿಹಾರವೇ ಇಲ್ಲ ಎಂದ ಸರ್ಕಾರ

ಬೆಳಗಾವಿ, ಡಿ.10– ಕೆಆರ್‌ಎಸ್ ಸೇರಿದಂತೆ ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ಹೂಳು ತುಂಬಿದ್ದು, ಪ್ರತಿ ವರ್ಷ ಸಂಗ್ರಹಿಸಬಹುದಾದ 65 ಟಿಎಂಸಿ ಅಡಿ ನೀರು ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶಗಳ ಜಲಾಶಯಗಳಲ್ಲಿ ವ್ಯರ್ಥವಾಗುತ್ತಿದೆ. ಈ ನೀರಿನ ಪ್ರಮಾಣವು ಬೆಂಗಳೂರಿನ ವಾರ್ಷಿಕ ನೀರಿನ ಅಗತ್ಯವಾದ 22 ಟಿಎಂಸಿ ಅಡಿಗಿಂತ ಮೂರು ಪಟ್ಟು ಹೆಚ್ಚಾಗಿದೆ. ಕರ್ನಾಟಕವು ಕೆಆರ್ ಸಾಗರ, ಮಲಪ್ರಭಾ, ಭದ್ರಾ, ಹಾರಂಗಿ, ಕಬಿನಿ, ಆಲಮಟ್ಟಿ, ತುಂಗಭದ್ರಾ, ಹೇಮಾವತಿ ಸೇರಿದಂತೆ 14 ಪ್ರಮುಖ ಜಲಾಶಯಗಳನ್ನು ಹೊಂದಿದೆ.

ಕಾಂಗ್ರೆಸ್ ಶಾಸಕ ಡಾ. ಅಜಯ್ ಧರಂಸಿಂಗ್ ಅವರ ಪ್ರಶ್ನೆಗೆ ಉತ್ತರಿಸಿದ ಉಪ ಮುಖ್ಯಮಂತ್ರಿ ಮತ್ತು ಜಲ ಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರು ಜಲಾಶಯಗಳಿಂದ ಹೂಳು ತೆಗೆಯಲು ಯಾವುದೇ ನಿರ್ದಿಷ್ಟ ಮಾರ್ಗಸೂಚಿಗಳಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯ ಕಾರ್ಯಕ್ರಮವೂ ಇಲ್ಲ ಎಂದು ಅವರು ಹೇಳಿದರು. ತುಂಗಭದ್ರಾದಲ್ಲಿ 31.6 ಟಿಎಂಸಿ ಅಡಿ, ನಾರಾಯಣಪುರದಲ್ಲಿ 10.55 ಟಿಎಂಸಿ ಅಡಿ, ಆಲಮಟ್ಟಿಯಲ್ಲಿ 7.5 ಟಿಎಂಸಿ ಅಡಿ ಮತ್ತು ಘಟಪ್ರಭಾದಲ್ಲಿ 4.9 ಟಿಎಂಸಿ ಅಡಿ ಹೂಳು ಇದೆ.

ಕಾಲಕ್ರಮೇಣ ಹೂಳು ಸಂಗ್ರಹವಾಗಲು ಪ್ರಾರಂಭಿಸಿದಾಗ ನೀರಿನ ಶೇಖರಣಾ ಸಾಮರ್ಥ್ಯ ಕಡಿಮೆಯಾಗುತ್ತದೆ. ಹೂಳು ಸಂಗ್ರಹವು ಏಕರೂಪವಾಗಿರುವುದಿಲ್ಲ ಮತ್ತು ಅದನ್ನು ತೆಗೆದು ಹಾಕುವುದರಿಂದ ಆರ್ಥಿಕವಾಗಿ ಲಾಭದಾಯಕವಲ್ಲ ಎಂದರು.

ಶ್ರೀಮಂತರಿಗೂ ಉಚಿತ ವಿದ್ಯುತ್ ಕೊಡಬೇಕಾ, ಲಕ್ಷಾಂತರ ರೂ. ದುಡಿಯುವ ಮಹಿಳೆಯರಿಗೂ ಉಚಿತ ಬಸ್ ಪ್ರಯಾಣ ನೀಡಬೇಕಾ

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರ ಅಸಮಾಧಾನ

ಬೆಳಗಾವಿ, ಡಿ.10– ಗ್ಯಾರಂಟಿ ಯೋಜನೆಗಳಿಂದ ಸರ್ಕಾರದ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ ಎಂದು ವಿರೋಧ ಪಕ್ಷದವರು ಮತ್ತು ಜನಸಾಮಾನ್ಯರು ಆರೋಪಿಸುತ್ತಿರುವ ಬೆನ್ನಲ್ಲೇ ಆಡಳಿತ ಪಕ್ಷ ಕಾಂಗ್ರೆಸ್ ಶಾಸಕರೇ ಗ್ಯಾರಂಟಿಗಳ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ.



ಬೆಳಗಾವಿಯಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ.

ಮುಂದಿನ ಚುನಾವಣೆಗಳನ್ನು ಕೇವಲ ಗ್ಯಾರಂಟಿಗಳನ್ನು ನೆಚ್ಚಿಕೊಂಡು ಎದುರಿಸಲು ಸಾಧ್ಯವಿಲ್ಲ. ಬದಲಿಗೆ ಅಭಿವೃದ್ಧಿ ಯೋಜನೆಗಳತ್ತ ಗಮನ ಹರಿಸುವ ಅಗತ್ಯ ಇದೆ ಎಂದು ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮುಂದೆಯೇ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.


ಜನಸಾಮಾನ್ಯರಿಗೆ ಗ್ಯಾರಂಟಿ ಯೋಜನೆಗಳ ಬಗ್ಗೆ ಅಷ್ಟೊಂದು ಉತ್ತಮ ಅಭಿಪ್ರಾಯವಿಲ್ಲ. ರಾಜ್ಯದ ಜನತೆ ತಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಬಯಸುತ್ತಿದ್ದಾರೆ. ದೇವಸ್ಥಾನಗಳ ಅಭಿವೃದ್ಧಿ, ಸಭಾ ಭವನಗಳ ನಿರ್ಮಾಣ, ರಸ್ತೆಗಳ ಸುಧಾರಣೆ, ಶಿಕ್ಷಣ, ಆರೋಗ್ಯ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾರ್ಯಗಳಿಗೆ ನೆರವು ಬಯಸುತ್ತಿದ್ದಾರೆ. ಕೇವಲ ಗ್ಯಾರಂಟಿ ಯೋಜನೆಗಳ ಮೇಲೆ ಅವಲಂಬಿತವಾಗಿದ್ದರೆ ಜನರಿಗೆ ಬೇಕಾದ ಇತರ ಮೂಲಭೂತ ಸೌಕರ್ಯಗಳು ಮತ್ತು ಅಭಿವೃದ್ಧಿ ಕಾರ್ಯಗಳು ಹಿನ್ನಡೆ ಅನುಭವಿಸುತ್ತವೆ. ಗ್ಯಾರಂಟಿ ಯೋಜನೆಗಳಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ಮೀಸಲಿಡಬೇಕಾದ ಅನುದಾನದ ಕೊರತೆ ಎದುರಾಗಿದೆ ಎಂದು ಸಭೆಯಲ್ಲಿ ಕಾಂಗ್ರೆಸ್ ಶಾಸಕರು ಕಳವಳ ವ್ಯಕ್ತಪಡಿಸಿದ್ದಾರೆ.

ಶ್ರೀಮಂತರಿಗೇಕೆ ಉಚಿತ ಭಾಗ್ಯಗಳು?: ಎಂಎಲ್‌ಸಿ ಸುಧಾಮ್ ದಾಸ್ ಅವರು ಸಿಎಲ್‌ಪಿ ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಮರುಪರಿಶೀಲನೆಗೆ ಆಗ್ರಹಿಸಿದ್ದಾರೆ. ಬೆಂಗಳೂರಿನ ಸದಾಶಿವ ನಗರದಂತಹ ಶ್ರೀಮಂತ ಪ್ರದೇಶದಲ್ಲಿರುವ ಮನೆಗಳಿಗೂ 200 ಯೂನಿಟ್ ವಿದ್ಯುತ್ ಉಚಿತ, ಲಕ್ಷಾಂತರ ರೂಪಾಯಿ ದುಡಿಯುವ ಮಹಿಳೆಯರಿಗೂ ಬಸ್ ಪ್ರಯಾಣ ಉಚಿತ ನೀಡಬೇಕಾ? ಎಂದು ಪ್ರಶ್ನಿಸಿದ್ದಾರೆ. ಉಳ್ಳವರಿಗೂ ಉಚಿತ ಸೌಲಭ್ಯಗಳನ್ನು ನೀಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುವುದಲ್ಲದೆ. ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಅವರ ಈ ಹೇಳಿಕೆಗೆ ಹಲವು ಶಾಸಕರು ಸಹಮತ ವ್ಯಕ್ತಪಡಿಸಿದ್ದು, ಗ್ಯಾರಂಟಿ ಯೋಜನೆಗಳಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಯೋಜನೆಯನ್ನು ಪರಿಷ್ಕರಿಸುವಂತೆ ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ 37.48 ಲಕ್ಷ ಕುಟುಂಬಗಳಿಗೆ ಸೂರೇ ಇಲ್ಲ

ವಿಧಾನ ಪರಿಷತ್‌ಗೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಮಾಹಿತಿ

ಬೆಳಗಾವಿ, ಸುವರ್ಣವಿಧಾನಸೌಧ, ಡಿ.10(ಕೆಎಂಶಿ)– ರಾಜ್ಯದಲ್ಲಿ 37.48 ಲಕ್ಷ ಕುಟುಂಬಗಳಿಗೆ ಸೂರೆ ಇಲ್ಲ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ವಿಧಾನ ಪರಿಷತ್‌ನಲ್ಲಿ ಇಂದು ತಿಳಿಸಿದ್ದಾರೆ.



ಪ್ರಶ್ನೋತ್ತರ ವೇಳೆ ಕೆ.ಶಿವಕುಮಾರ್, ಪ್ರದೀಪ್ ಶೆಟ್ಟರ್ ಮತ್ತಿತರರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕೇಂದ್ರದ ಮಾರ್ಗಸೂಚಿಯಂತೆ 2018ರಲ್ಲಿ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ವಸತಿ ನಿವೇಶನ ರಹಿತರ ಸಮೀಕ್ಷೆ ಹಾಗೂ 2017ರಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ನಗರ ಪ್ರದೇಶದಲ್ಲಿ ನಡೆಸಿರುವ ಸಮೀಕ್ಷೆಗಳ ಆಧಾರದಿಂದ ವಸತಿರಹಿತ ಕುಟುಂಬಗಳ ಮಾಹಿತಿ ಲಭ್ಯವಾಗಿದೆ ಎಂದರು.

ಈ ಸಮೀಕ್ಷೆ ಆಧಾರವಾಗಿ ಇಟ್ಟುಕೊಂಡು ಸೂರಿಲ್ಲದವರಿಗೆ ಸೂರು ನೀಡಲು ವಿವಿಧ ಯೋಜನೆಗಳಡಿ ರಿಯಾಯಿತಿ ದರದಲ್ಲಿ ನಿವೇಶನ ಇಲ್ಲವೇ, ಮನೆಗಳನ್ನು ಹಂಚಲಾಗುತ್ತಿದೆ.

ಕಳೆದ ಸಾಲಿನಲ್ಲಿ 7.38 ಲಕ್ಷ ಮನೆಗಳ ನಿರ್ಮಾಣ ಗುರಿ ಇದ್ದು, ಇವುಗಳಲ್ಲಿ 3.27 ಲಕ್ಷ ಅನುಮೋದನೆಗೊಂಡಿವೆ. ಉಳಿದ 4 ಲಕ್ಷಕ್ಕೂ ಹೆಚ್ಚು ಮನೆಗಳು ಅನುಮೋದನೆಗೆ ಬಾಕಿ ಇವೆ ಎಂದರು.

ರಾಜ್ಯದಲ್ಲಿ ಮನೆ ನಿರ್ಮಾಣಕ್ಕೆ ನೀಡುತ್ತಿರುವ ಅನುದಾನ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 4 ಲಕ್ಷ ರೂ. ಮತ್ತು ಸಾಮಾನ್ಯ ವರ್ಗದವರಿಗೆ 3.5 ಲಕ್ಷ ರೂ.ಗೆ ಹೆಚ್ಚಳ ಮಾಡುವ ಚಿಂತನೆ ಸರ್ಕಾರದ ಮುಂದಿದೆ.

ಬಸವ ವಸತಿ ಯೋಜನೆಗೆ ನೀಡುತ್ತಿರುವ ಸಹಾಯಧನ ಸಾಲುತ್ತಿಲ್ಲ ಎಂಬ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕನಿಷ್ಠ 3 ರಿಂದ 4 ಲಕ್ಷ ರೂ.ವರೆಗೆ ಸಹಾಯಧನ ನೀಡಲು ಸರ್ಕಾರ ಸಿದ್ಧತೆ ಮಾಡಿಕೊಂಡಿದೆ.

ಗ್ರಾಮೀಣ ಭಾಗದಲ್ಲಿ ಮನೆ ನಿರ್ಮಾಣಕ್ಕೆ ಬೇಕಾಗುವ ಕಚ್ಚಾಸಾಮಗ್ರಿಗಳ ಬೆಲೆ ದುಬಾರಿ ಆಗಿದ್ದು, ಅದರಿಂದ ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಸಹಾಯಧನ ಹೆಚ್ಚಿಸುವ ಪ್ರಸ್ತಾವನೆಯೂ ಪರಿಶೀಲನೆಯಲ್ಲಿದೆ ಎಂದರು.

ಬಹುತೇಕ ಮುಂದಿನ ಮುಂಗಡ ಪತ್ರದಲ್ಲಿ ಈ ಯೋಜನೆಗಳಿಗೆ ಅನುಮೋದನೆ ದೊರೆಯುವ ನಿರೀಕ್ಷೆಯಲ್ಲಿದ್ದೇವೆ ಎಂದ ಸಚಿವರು, ಪ್ರಸ್ತುತ ಕೇಂದ್ರದ ವಸತಿ ಯೋಜನೆಗಳನ್ನು ಹೊರತುಪಡಿಸಿ, ಉಳಿದ ಯಾವುದೇ ವಸತಿ ಯೋಜನೆಗಳಡಿ ಅನುದಾನ ಬಿಡುಗಡೆ ಮಾಡಲು ಬಾಕಿ ಇರುವುದಿಲ್ಲ ಎಂದರು.

ರೈತರ ಭೂಮಿಯಲ್ಲಿ 50:50 ಅನುಪಾತದಡಿ ಮುಡಾ ಬಡಾವಣೆ ನಿರ್ಮಾಣ

ಮಂಡ್ಯ ನಗರಾಭಿವೃದ್ಧಿಗೆ ಕ್ರಮ: ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್

ಮಂಡ್ಯ, ಡಿ.10– ನಗರ ವ್ಯಾಪ್ತಿಯ ಉತ್ತರ ಮತ್ತು ದಕ್ಷಿಣದ ಎರಡೂ ಭಾಗಗಳಲ್ಲಿಯೂ ರೈತರ ಸಹಭಾಗಿತ್ವದಲ್ಲಿ 50:50ರ ಅನುಪಾತದಲ್ಲಿ ಜಂಟಿ ಉದ್ಯಮದೊಂದಿಗೆ ಬಡಾವಣೆಗಳ ಅಭಿವೃದ್ಧಿ ಪಡಿಸುವ ಮೂಲಕ ನಿವೇಶನರಹಿತರಿಗೆ ನಿವೇಶನ ಹಾಗೂ ನಗರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಪಿ.ಪ್ರಕಾಶ್ ತಿಳಿಸಿದರು.

ಮುಡಾ ಕಚೇರಿ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹೊಸ ಚೈತನ್ಯ ತುಂಬುವ ನಿಟ್ಟಿನಲ್ಲಿ ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ ಅವರ ಮಾರ್ಗದರ್ಶನದಂತೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಸಹಕಾರದಲ್ಲಿ ಮಂಡ್ಯ ನಗರಾಭಿವೃದ್ಧಿಗೆ ಒತ್ತುವ ನೀಡುವ ಮೂಲಕ ಮಹತ್ವಾಕಾಂಕ್ಷೆ ಯೋಜನೆ ಆರಂಭಿಸಲು ಚಿಂತಿಸಲಾಗಿದೆ ಎಂದರು.

ಈಗಾಗಲೇ ರೈತರೊಂದಿಗೆ ಮಾತುಕತೆ ಆರಂಭಿಸಿದ್ದು, ಶೀಘ್ರ ಮಾಹಿತಿ ನೀಡಲಾಗುವುದು. ನಗರಾಭಿವೃದ್ಧಿ ಪ್ರಾಧಿಕಾರ ಸ್ವಾಯತ್ತ ಸಂಸ್ಥೆಯಾಗಿದ್ದು, ನಾಗರಿಕರಿಗೆ ಅಗತ್ಯ ಮೂಲ ಸೌಕರ್ಯಗಳ ಕಲ್ಪಿಸಿ ಸಂಪನ್ಮೂಲಗಳನ್ನು ಕ್ರೂಢೀಕರಿಸಿ ಪ್ರಾಧಿಕಾರಕ್ಕೆ ಆರ್ಥಿಕ ಬಲ ತುಂಬುವುದೇ ನಮ್ಮ ಉದ್ದೇಶ ಎಂದರು.

ಅಭಿವೃದ್ಧಿಯಲ್ಲಿ ಮಂಡ್ಯ ನಗರ ಸಂಪೂರ್ಣ ಹಿಂದೆ ಉಳಿದಿದೆ. ನಗರ ವಿಸ್ತರಣೆಯಾಗದೆ ಸಂಕುಚಿತಗೊಂಡಿದ್ದು, ಇದರಿಂದ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ದೊಡ್ಡಹಳ್ಳಿಯಂತಿರುವ ನಗರ ವಿಸ್ತರಿಸಿ ಅಭಿವೃದ್ಧಿಪಡಿಸಬೇಕಾಗಿದೆ. ಈಗಾಗಲೇ ಸಾಹುಕಾರ್ ಚನ್ನಯ್ಯ ಬಡಾವಣೆಯನ್ನು ನಗರಸಭೆಗೆ ಹಸ್ತಾಂತರ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಸಾತನೂರು ಫಾರಂ ಬಡಾವಣೆಯನ್ನು ಗ್ರಾಪಂಗೆ ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಹಲವು ಕಾರಣಗಳಿಂದ ವಿವೇಕಾನಂದನಗರ ಬಡಾವಣೆ ಅಭಿವೃದ್ಧಿಗೆ ಹಿನ್ನಡೆಯಾಗಿತ್ತು. ಇದೀಗ ಒಳಚರಂಡಿ ವ್ಯವಸ್ಥೆ ಕಾಮಗಾರಿ ಅಂತಿಮ ಹಂತ ತಲುಪಿದ್ದು, ಈಗಿರುವ ಕಾನೂನು ಅಡೆತಡೆಗಳನ್ನು ನಿವಾರಿಸಿ ಬಡಾವಣೆ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಮುಡಾ ಆಯುಕ್ತ ಎಂ.ಪಿ.ಕೃಷ್ಣಕುಮಾರ್ ಮಾತನಾಡಿ, ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಗರಸಭೆ ಸೇರಿದಂತೆ 13 ಗ್ರಾಪಂಗಳ 19 ಗ್ರಾಮಗಳು ಒಳಪಡಲಿವೆ. ನಗರಸಭೆ ವ್ಯಾಪ್ತಿಗೆ ಮಂಡ್ಯ, ಹಾಲಹಳ್ಳಿ, ಕ್ಯಾತುಂಗೆರೆ, ಕಿರಗಂದೂರು, ಗುತ್ತಲು, ಬೇಲೂರು ಗ್ರಾಪಂನ ಗುತ್ತಲು, ಹಳುವಾಡಿ ಗ್ರಾಪಂನ ಹಾಲಹಳ್ಳಿ, ಸಂತೆಕಸಲಗೆರೆ ಗ್ರಾಪಂನ ಕಾರಸವಾಡಿ, ಸಂತೆಕಸಲಗೆರೆ, ಬೇವಿನಹಳ್ಳಿ ಗ್ರಾಪಂನ ಕ್ಯಾತುಂಗೆರೆ, ಮನುಗನಹಳ್ಳಿ ಮತ್ತು ಬೇವಿನಹಳ್ಳಿ, ಇಂಡುವಾಳು ಗ್ರಾಪಂನ ಕಿರಗಂದೂರು, ಇಂಡುವಾಳು, ಹೊಳಲು ಗ್ರಾಮ, ಎಚ್.ಮಲ್ಲಿಗೆರೆ ಗ್ರಾಪಂ ವ್ಯಾಪ್ತಿಗೆ ಬಿ.ಹೊಸಹಳ್ಳಿ, ಬೀರಗೌಡನಹಳ್ಳಿ, ಮಂಡ್ಯ ಗ್ರಾಪಂನ ಪಣಕನಹಳ್ಳಿ, ಕೋಣನಹಳ್ಳಿ, ಚಿಕ್ಕಮಂಡ್ಯ, ಗೋಪಾಲಪುರ ಗ್ರಾಪಂನ ಎಚ್.ಕೋಡಿಹಳ್ಳಿ, ಗೋಪಾಲಪುರ, ಸಾತನೂರು ಗ್ರಾಪಂನ ಕೊಮ್ಮೇರಹಳ್ಳಿ ಮತ್ತು ಸಾತನೂರು, ಉಮ್ಮಡಹಳ್ಳಿ ಗ್ರಾಪಂನ ಉಮ್ಮಡಹಳ್ಳಿ ಹಾಗೂ ಸೂನಗನಹಳ್ಳಿ ಗ್ರಾಪಂನ ಭೂತನಹೊಸೂರು ಗ್ರಾಮಗಳು ಒಳಪಡಲಿವೆ.



ಸುದ್ದಿಗೋಷ್ಠಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಪಿ.ಪ್ರಕಾಶ್ ಮಾತನಾಡಿದರು.

ಈ ಎಲ್ಲಾ ಗ್ರಾಮಗಳ ರೈತರು ಮುಂದೆ ಬಂದು ಜಮೀನು ನೀಡಿದರೆ ರೈತರ ಸಹಭಾಗಿತ್ವದಲ್ಲೇ 50:50ರ ಅನುಪಾತದಲ್ಲಿ ನಿವೇಶನ ಅಭಿವೃದ್ಧಿಪಡಿಸಿ ನಿವೇಶನ ಇಲ್ಲದವರಿಗೆ ನಿವೇಶನ ಒದಗಿಸಲಾಗುವುದು. ಇದರಿಂದ ಮಂಡ್ಯ ನಗರ ವಿಸ್ತರಣೆಯಾಗುವುದಲ್ಲದೆ, ಅಭಿವೃದ್ಧಿಗೂ ಸಹಕಾರಿಯಾಗಲಿದೆ ಎಂದರು.

7 ಮಾಲೀಕರಿಗೆ ನೋಟಿಸ್: ನಗರ ವ್ಯಾಪ್ತಿಯಲ್ಲಿ ಅಕ್ರಮವಾಗಿ ಲೇಔಟ್ ನಿರ್ಮಿಸಿರುವ 7 ಮಾಲೀಕರಿಗೆ ನೋಟಿಸ್ ನೀಡಲು ಕ್ರಮ ವಹಿಸಲಾಗಿದೆ. ಮುಡಾ ಅನುಮತಿ ಪಡೆಯದೆ ಕಂದಾಯ ಜಮೀನಿನಲ್ಲಿ ಯಾವುದೇ ರಸ್ತೆ, ಪಾರ್ಕ್, ವಿದ್ಯುತ್, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸದೆ ಅಕ್ರಮವಾಗಿ ಲೇಔಟ್‌ಗಳ ನಿರ್ಮಾಣ ಮಾಡುತ್ತಿರುವುದು ಕಂಡು ಬಂದಿದ್ದು, ಅವರ ವಿರುದ್ಧ ಕ್ರಮ ವಹಿಸಲಾಗುವುದು ಎಂದರು.

ರಿಂಗ್ ರಸ್ತೆ ನಿರ್ಮಾಣಕ್ಕೆ ಸಭೆ: ಮಂಡ್ಯ ಹೊರವಲಯದ ಉಮ್ಮಡಹಳ್ಳಿಯಿಂದ ಇಂಡುವಾಳು ವರೆಗೂ ಒಟ್ಟು 11 ಕಿಮೀ ದೂರ ರಿಂಗ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮೊದಲು ನಗರ ಒಳಗೆ ನಕ್ಷೆ ಸಿದ್ಧಪಡಿಸಲಾಗಿತ್ತು. ಇದೀಗ ನಗರ ಹೊರತುಪಡಿಸಿ ಹೊರಗೆ ರಸ್ತೆ ಮಾಡಲು ತೀರ್ಮಾನಿಸಲಾಗಿದ್ದು, ಅದರಂತೆ ಮಂಡ್ಯ, ಶ್ರೀರಂಗಪಟ್ಟಣ ಶಾಸಕರು, ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಅಧಿಕಾರಿಗಳು, ಮುಡಾ ಅಧ್ಯಕ್ಷರ ಒಳಗೊಂಡಂತೆ ಸಭೆ ನಡೆಸಿ ಡಿಪಿಆರ್ ಸಿದ್ಧಪಡಿಸಲಾಗುವುದು ಎಂದರು.

ಗೋಷ್ಠಿಯಲ್ಲಿ ನಿರ್ದೇಶಕರಾದ ಕಾರ್ತಿಕ್, ಮಹೇಶ್, ಕಮಲಮ್ಮ, ಇದ್ರೀಶ್ ಖಾನ್ ಇದ್ದರು.

ನಿವೇಶನ ಹಂಚಿಕೆ ಪ್ರಕರಣ ಮರು ತನಿಖೆ

ಮಂಡ್ಯ: ವಿವೇಕಾನಂದ ಬಡಾವಣೆ ನಿವೇಶನ ಹಂಚಿಕೆ ಪ್ರಕರಣ ಮರು ತನಿಖೆ ನಡೆಯುತ್ತಿದ್ದು, ಎಲ್ಲಾ ನಿವೇಶನಗಳ ಸಂಪೂರ್ಣ ಮೂಲ ದಾಖಲಾತಿಗಳು ಸಿಬಿಐ ವಶಪಡಿಸಿಕೊಂಡಿದೆ ಎಂದು ಆಯುಕ್ತ ಎಂ.ಪಿ.ಕೃಷ್ಣಕುಮಾರ್ ತಿಳಿಸಿದರು.

1998ರಲ್ಲಿ ವಿವೇಕಾನಂದ ಬಡಾವಣೆ ಸರ್ವೇ ನಂ.507ರಲ್ಲಿನ 230 ಎಕರೆ 11 ಗುಂಟೆ ಜಮೀನಿನಲ್ಲಿ 2790 ನಿವೇಶನಗಳನ್ನು 25 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿತ್ತು. ಅಷ್ಟರೊಳಗೆ 2002ರಲ್ಲಿ ಲಾಟರಿ ಮೂಲಕ ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು. ಇದು ಮುಡಾ ನಿಯಮಗಳ ಉಲ್ಲಂಘನೆಯಾಗಿದ್ದರಿಂದ ಅಂದಿನ ಆಯುಕ್ತರಾಗಿ ಕೆ.ಮಥಾಯಿ ಅವರು ಸರ್ಕಾರಕ್ಕೆ ನಿಯಮ ಉಲ್ಲಂಘನೆ ಬಗ್ಗೆ ವರದಿ ನೀಡಿದ್ದರು. ಅದರಂತೆ 2016ರಲ್ಲಿ ಪ್ರಕರಣ ಸಿಬಿಐ ತನಿಖೆ ನಡೆದು 'ಬಿ' ರಿಪೋರ್ಟ್ ಸಲ್ಲಿಸಲಾಗಿತ್ತು. ಆದರೆ ಮತ್ತೆ ಕೆ.ಮಥಾಯಿ ಅವರು 'ಬಿ' ರಿಪೋರ್ಟ್ ವಿರುದ್ಧ ನ್ಯಾಯಾಲಯದಲ್ಲಿ ವಿಚಾರಣೆ ಸರಿಯಾಗಿ ನಡೆದಿಲ್ಲ ಎಂದಿದ್ದರಿಂದ ಮತ್ತೆ ಮರು ತನಿಖೆ ನಡೆಯುತ್ತಿದೆ. ಇದರಲ್ಲಿ 107 ನಿವೇಶನ ಹಂಚಿಕೆ ಹಾಗೂ 5 ಕೋಟಿ ದುರುಪಯೋಗ ಬಗ್ಗೆಯೂ ತನಿಖೆ ನಡೆಯುತ್ತಿದೆ ಎಂದರು.

ಅಣ್ಣೂರಲ್ಲಿ ಉಚಿತ ಆರೋಗ್ಯ, ರಕ್ತದಾನ ಶಿಬಿರ



ಅಣ್ಣೂರಲ್ಲಿ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ನಡೆಯಿತು.

ಭಾರತೀನಗರ, ಡಿ.10– ಹಳ್ಳಿಗಾಡಿನಲ್ಲಿ ಈ ಹಿಂದೆ ಇದ್ದ ಆರೋಗ್ಯ ಇಂದು ಇಲ್ಲದಂತಾಗಿದೆ. ಆಹಾರ ಪದ್ಧತಿ ಬದಲಾವಣೆಯಿಂದಾಗಿ ಗ್ರಾಮೀಣ ಜನರ ಆರೋಗ್ಯ ಸ್ಥಿತಿ ಕುಸಿಯುತ್ತಿದೆ ಎಂದು ಸಂಜೀವಿನಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆಡಳಿತಾಧಿಕಾರಿ ಮನೋಜ್ ತಿಳಿಸಿದರು.

ಅಣ್ಣೂರಿನ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾ ಬಳಗ ಹಾಗೂ ಸಂಜೀವಿನಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಸ್ವಯಂ ಸೇವಾ ಸಂಘಟನೆಗಳು ಆರೋಗ್ಯ ಶಿಬಿರಗಳನ್ನು ಆಯೋಜಿಸುವ ಮೂಲಕ ಜನರ ಆರೋಗ್ಯ ಕಾಪಾಡಲು ಮುಂದಾಗಬೇಕು. ಹಾಗಾದಲ್ಲಿ ದೇಶದ ಸಂಪತ್ತು ಎಲ್ಲಾ ರೀತಿಯಲ್ಲೂ ಹೆಚ್ಚಲಿದೆ ಎಂದರು.

ವಿಶ್ವೇಶ್ವರಯ್ಯ ಕ್ರೀಡಾ ಬಳಗದ ಅಧ್ಯಕ್ಷ ಸಚಿನ್ ಮಾತನಾಡಿದರು. ಉಚಿತ ಆರೋಗ್ಯ ಶಿಬಿರದಲ್ಲಿ ನೂರಾರು ಸಾರ್ವಜನಿಕರು ತಪಾಸಣೆಗೆ ಒಳಪಟ್ಟರು. ಎಲ್ಲರಿಗೂ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು. 40 ಯೂನಿಟ್ ರಕ್ತ ಸಂಗ್ರಹಿಸಿ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಬಳಗದ ಸದಸ್ಯರು ಸಂಜೀವಿನಿ ಆಸ್ಪತ್ರೆಗೆ ಹಸ್ತಾಂತರಿಸಿದರು.

ಈ ವೇಳೆ ಬಳಗದ ಸದಸ್ಯರಾದ ಸಂಜಯ್, ವರ, ಮಲ್ಲೇಶ್, ಪ್ರಜ್ವಲ್, ಪವನ್, ಕಿಶನ್, ದೀಕ್ಷಿತ್, ಗಿರೀಶ್ ಸೇರಿದಂತೆ ಹಲವರಿದ್ದರು.

ಜನವರಿಯಿಂದ ಇಂದಿರಾ ಕಿಟ್ ವಿತರಣೆ

ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್

ಕೆ.ಆರ್.ಪೇಟೆ, ಡಿ.10– ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿ ಜನವರಿಯಿಂದ ಅಕ್ಕಿ, ಬೇಳೆ, ಅಡಿಗೆ ಎಣ್ಣೆ ಸೇರಿದಂತೆ ಅಗತ್ಯ ವಸ್ತುಗಳನ್ನೊಳಗೊಂಡ ಇಂದಿರಾ ಕಿಟ್ ಅನ್ನು ಅರ್ಹ ಬಿಪಿಎಲ್ ಹಾಗೂ ಅಂತ್ಯೋದಯ ಕಾರ್ಡ್ ಹೊಂದಿರುವ ಎಲ್ಲಾ ಫಲಾನುಭವಿಗಳಿಗೆ ವಿತರಿಸಲಾಗುವುದು ಎಂದು ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್ ತಿಳಿಸಿದರು.



ಸಭೆಯಲ್ಲಿ ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್ ಮಾತನಾಡಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳು ಜನರಿಗೆ ಆರ್ಥಿಕ, ಸಾಮಾಜಿಕ ಭದ್ರತೆ ಒದಗಿಸುವುದರ ಜೊತೆಗೆ ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಿವೆ. ಇವುಗಳ ಮಹತ್ವ ಹೆಚ್ಚಿಸುವಲ್ಲಿ ಆಹಾರ ಭದ್ರತೆ, ಆರೋಗ್ಯ ಸೇವೆಗಳಿಗೆ ಪ್ರವೇಶ, ಉದ್ಯೋಗಾವಕಾಶ, ಆರ್ಥಿಕ ಸುಧಾರಣೆ ಮತ್ತು ಸಮಾನತೆ ಹೆಚ್ಚಿಸಿವೆ. ಅನ್ನಭಾಗ್ಯ ಯೋಜನೆ ಬಡ ಕುಟುಂಬಗಳಿಗೆ ಆಹಾರ ಧಾನ್ಯಗಳ ವೆಚ್ಚ ಕಡಿಮೆ ಮಾಡಿದೆ. ಶಕ್ತಿ ಯೋಜನೆಯಡಿ ಮಹಿಳೆಯರು ಉಚಿತವಾಗಿ ಸಾರಿಗೆ ಬಸ್‌ಗಳಲ್ಲಿ ಸಂಚರಿಸುತ್ತಿದ್ದು, ಅವರ ಆರ್ಥಿಕ ಸ್ಥಿತಿ ಸುಧಾರಿಸಿದೆ. ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳು ಕುಟುಂಬಗಳ ಆರ್ಥಿಕ ಹೊರೆ ಕಡಿಮೆ ಮಾಡಿದೆ. ಅದೇ ಹಣವನ್ನು ಜನರು ಉಳಿತಾಯ ಮಾಡಿ ಆರೋಗ್ಯ ಸೇವೆಗಳಂತಹ ಇತರ ಅಗತ್ಯತೆಗಳಿಗೆ ಹಣ ಬಳಸಲು ಸಾಧ್ಯವಾಗಿದೆ. ಯುವನಿಧಿ ಯೋಜನೆ ನಿರುದ್ಯೋಗಿ ಯುವಕರಿಗೆ ಭತ್ಯೆ ನೀಡುತ್ತದೆ. ಇದು ಅವರ ನಿರುದ್ಯೋಗದ ಒತ್ತಡ ಕಡಿಮೆ ಮಾಡಿದೆ ಎಂದರು.

5 ಗ್ಯಾರಂಟಿ ಯೋಜನೆಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳ ಜನರ ನಡುವಿನ ಆರ್ಥಿಕ ಅಂತರ ಕಡಿಮೆ ಮಾಡಲು ಸಹಾಯಕವಾಗಿವೆ. ಈ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ತಾಲೂಕು, ಜಿಲ್ಲಾ, ರಾಜ್ಯ ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಚಿಸಲಾಗಿದೆ. ಇದುವರೆಗೂ ಗ್ಯಾರಂಟಿ ಯೋಜನೆಗಳಿಗಾಗಿ ಸರ್ಕಾರ ಲಕ್ಷ ಕೋಟಿಗೂ ಹೆಚ್ಚು ಅನುದಾನ ನೀಡಿದ್ದು, ಯೋಜನೆಗಳು ಬಡವರು ಹಾಗೂ ಮಧ್ಯಮ ವರ್ಗದ ಜನರ ಜೀವನಕ್ಕೆ ಆಸರೆಯಾಗಿವೆ ಎಂದರು.

ಸಭೆಯಲ್ಲಿ ತಾಲೂಕು ಆಹಾರ ಇಲಾಖೆ ಶಿರಸ್ತೇದಾರ್ ನಟರಾಜ್, ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪುಟ್ಟಸ್ವಾಮಿಗೌಡ, ತಾಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಡಿಪಿಓ ವಿದ್ಯಾವತಿ, ಜಿಲ್ಲಾ ಉದ್ಯೋಗಾಧಿಕಾರಿ ವಿ.ನವೀನ್‌ಕುಮಾರ್, ಡಿಪೋ ಟ್ರಾಫಿಕ್ ಇನ್ಸ್‌ಪೆಕ್ಟರ್ ಗವಿಸಿದ್ದಪ್ಪ ತಮ್ಮ ಇಲಾಖೆಯ ಪ್ರಗತಿ ವರದಿ ಮಂಡಿಸಿದರು. ತಾಪಂ ಸಹಾಯಕ ಲೆಕ್ಕಾಧಿಕಾರಿ ಶಂಕರ್, ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ಲತಾ, ಶಿವಮ್ಮ, ಶಿವಣ್ಣ ಗೋಪಾಲ್, ಸಿ.ಆರ್.ಪಿ.ಕುಮಾರ್, ರೂಪಾ, ಯೋಗೇಶ್, ಹಾಫೀಜ್ ಉಲ್ಲಾ, ಶ್ಯಾಮಣ್ಣ, ಬಿ.ಸಿ.ಮಾಧು, ಸೋಮಶೇಖರ್, ಶಿವಲಿಂಗಪ್ಪ, ಸಮಿತಿಯ ವಿಷಯ ನಿರ್ವಾಹಕಿ ನಂದಿನಿ ಇತರರಿದ್ದರು.

ಕುಂದು ಕೊರತೆ ಸಭೆಯಲ್ಲಿ ದೂರುಗಳ ಸರಮಾಲೆ



ನಾಗಮಂಗಲದಲ್ಲಿ ಕುಂದುಕೊರತೆ ಸಭೆ ನಡೆಯಿತು.

ನಾಗಮಂಗಲ, ಡಿ.10– ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಲೋಕಾಯುಕ್ತ ಅಧಿಕಾರಿ ಸುರೇಶ್ ಬಾಬು ನೇತೃತ್ವದಲ್ಲಿ ಸಾರ್ವಜನಿಕರ ಕುಂದು ಕೊರತೆ ಸಭೆ ನಡೆಯಿತು.

ಈ ವೇಳೆ ಸಾರ್ವಜನಿಕರಿಂದ ದೂರು ಸ್ವೀಕರಿಸಿ ಮಾತನಾಡಿದ ಸುರೇಶ್ ಬಾಬು, ಕಂದಾಯ ಇಲಾಖೆಗೆ 12, ಚೆಸ್ಕಾಂ ಇಲಾಖೆಗೆ 2, ಪೊಲೀಸ್ ಇಲಾಖೆಗೆ 4 ಹಾಗೂ ಇತರೆ ಇಲಾಖೆಗಳಿಗೆ ಸಂಬಂಧಿಸಿದಂತೆ 5 ದೂರುಗಳು ಬಂದಿದ್ದು, ಈ ಪೈಕಿ 4 ದೂರುಗಳನ್ನು ರಿಜೆಕ್ಟ್ ಮಾಡಲಾಗಿದೆ. ಫಾರಂ 1 ಮತ್ತು 2ರ ಅಡಿ 8 ಪ್ರಕರಣ ದಾಖಲಿಸಿದ್ದೇವೆ. ಸ್ಥಳದಲ್ಲೇ ಸಾಕಷ್ಟು ಪ್ರಕರಣಗಳನ್ನು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲೇ ಬಗೆಹರಿಸಿದ್ದೇವೆ. ಉಳಿದ ಪ್ರಕರಣಗಳನ್ನು ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇವೆ. ಅಲ್ಲದೇ ಫಾರಂ 1 ಮತ್ತು 2ರ ಅಡಿ ದಾಖಲಾಗಿರುವ ಪ್ರಕರಣಗಳನ್ನು ಸಂಬಂಧಿಸಿದ ಅಧಿಕಾರಿಗಳು ತನಿಖೆ ನಡೆಸಿ ಅವುಗಳಿಗೆ ಪರಿಹಾರ ಕಲ್ಪಿಸಬೇಕು. ಇಲ್ಲದಿದ್ದರೇ ಅಂತಹ ಅಧಿಕಾರಿಗಳಿಗೆ ನೋಟಿಸ್ ನೀಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ಮಂಡ್ಯ ಜಿಲ್ಲಾ ಲೋಕಾಯುಕ್ತ ಇನ್ಸ್‌ಪೆಕ್ಟರ್ ಬ್ಯಾಟರಾಯಗೌಡ, ಪೊಲೀಸ್ ಅಧಿಕಾರಿ ರಾಜೇಂದ್ರ ಅಶೋಕ ಕುಮಾರ್, ಇತರೆ ಇಲಾಖೆ ಅಧಿಕಾರಿ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಭೂ ಪರಿವರ್ತನೆ ದಂಧೆಗೆ ಬ್ರೇಕ್

ಅವಕಾಶ ನೀಡಲಾಗುತ್ತಿದೆ. ಆನ್‌ಲೈನ್ ಅರ್ಜಿಗೂ ಅವಕಾಶ ನೀಡಲಾಗಿದೆ. ಸಂಬಂಧಪಟ್ಟ ಜಿಲ್ಲಾಧಿಕಾರಿ 30 ದಿನದೊಳಗೆ ಸಂಬಂಧಿತ ಇಲಾಖೆ ಜೊತೆ ಚರ್ಚಿಸಿ ಪರಿವರ್ತನೆಗೆ ಅವಕಾಶ ನೀಡಬಹುದು ಅಥವಾ ತಿರಸ್ಕರಿಸಬಹುದಾಗಿದೆ. 30 ದಿನದೊಳಗೆ ಜಿಲ್ಲಾಧಿಕಾರಿ ನಿರ್ಧಾರ ತೆಗೆದುಕೊಳ್ಳದಿದ್ದರೆ, ಸ್ವಯಂ ಚಾಲಿತ ಭೂಪರಿವರ್ತನೆಗೆ ಅವಕಾಶ ಲಭ್ಯವಾಗುತ್ತದೆ ಎಂದರು.

ಇಂಧನ ಪ್ಲಾಂಟ್‌ಗೆ ಭೂ ಪರಿವರ್ತನೆ ಬೇಕಿಲ್ಲ: ಸಣ್ಣ ಕೈಗಾರಿಕೆಗಳಿಗೆ ಎರಡು ಎಕರೆವರೆಗೆ ಕೈಗಾರಿಕಾ ಉದ್ದೇಶಕ್ಕೆ ಭೂ ಪರಿವರ್ತನೆ ಅಗತ್ಯವಿಲ್ಲ. ಭಾರತ ನವೀಕರಿಸಬಹುದಾದ ಇಂಧನದ ಕಡೆ ಹೆಜ್ಜೆ ಇಡುತ್ತಿರುವುದರಿಂದ ಭೂಪರಿವರ್ತನೆ ಬೇಕಿಲ್ಲ. ಇಂಧನ ಇಲಾಖೆ ಅನುಮತಿ ಪಡೆದಿದ್ದರೆ, ನವೀಕರಿಸಬಹುದಾದ ಇಂಧನದ ಪ್ಲಾಂಟ್ ನಿರ್ಮಿಸಲು ಭೂ ಪರಿವರ್ತನೆ ಅಗತ್ಯವಿಲ್ಲ.

ಉಪ ವಿಭಾಗಾಧಿಕಾರಿಗಳ ಕಂದಾಯ ನ್ಯಾಯಾಲಯ ಕಾರ್ಯಕ್ಕೆ ಸ್ಪಷ್ಟ ನಿಯಮ (ರೂಲ್ಸ್) ಇರಲಿಲ್ಲ. ಪರಿಣಾಮವಾಗಿ ನ್ಯಾಯಾಲಯಗಳಿಂದ ಅಧಿಕಾರ ವ್ಯಾಪ್ತಿ ಮೀರಿ ಆದೇಶಗಳನ್ನು ಹೊರಡಿಸಿರುವ ಉದಾಹರಣೆಗಳು ಸಾಕಷ್ಟಿವೆ. ಆದ್ದರಿಂದ, ಇದಕ್ಕೂ ನಿಯಮ ರೂಪಿಸಿ ಸರಿಪಡಿಸಲಾಗಿದೆ ಎಂದರು.

ನಾಲ್ಕು ಹುಲಿ ಮರಿಗಳು ಸಾವು

ಅರ್ಜುನನ ವಿಷಯದಲ್ಲೂ ನಿರ್ಲಕ್ಷ್ಯವಾಯಿತೆ?: ಸಂರಕ್ಷಣೆ ಹೆಸರಿನಲ್ಲಿ ನಾಲ್ಕು ಹುಲಿ ಮರಿಗಳನ್ನು ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಚಾಮುಂಡಿ ವನ್ಯಜೀವಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಿದ್ದರೂ ಅವುಗಳು ಸಾವನ್ನಪ್ಪಿವೆ. ಅತ್ತ, ಅರಣ್ಯ ಇಲಾಖೆಯ ಅಧಿಕಾರಿಗಳ ಬೇಜವಾಬ್ದಾರಿಯಿಂದ ಅಂಬಾರಿ ಆನೆ ಅರ್ಜುನನ ಸಾವು ಕೂಡ ಆಗಿರಬಹುದು ಎಂಬ ಮಾತು ಬಲವಾಗುತ್ತಿದೆ. ಇದಕ್ಕೆ ಪುಷ್ಟಿ ನೀಡುವಂತೆ ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಬರೆದಿರುವ 'ಸಾವಿನ ಸತ್ಯ–ಅರ್ಜುನಾ ನಿನ್ನ ಕೊಂದದ್ದು ಮದಗಜವಲ್ಲ ಪಾಪಿ ಮನುಷ್ಯ...!' ಕೃತಿ ಹೊರ ಬಂದಿದೆ. ಈಗ ಮುದ್ದಾದ ನಾಲ್ಕು ಹುಲಿ ಮರಿಗಳು ಸಾವನ್ನಪ್ಪಿರುವುದು ವನ್ಯಜೀವಿ ಪ್ರಿಯರಲ್ಲಿ ಆಘಾತ ಉಂಟು ಮಾಡಿದೆ.

ತನಿಖೆಯಾಗಬೇಕು: ನಾಲ್ಕು ಹುಲಿ ಮರಿಗಳ ಸಾವು ವನ್ಯಜೀವಿ ಸಂಪತ್ತಿಗಾಗಿರುವ ಬಹುದೊಡ್ಡ ನಷ್ಟ, ರಾಷ್ಟ್ರ ಪ್ರಾಣಿ ಹುಲಿಯ ಸಂತತಿಯನ್ನು ಉಳಿಸುವತ್ತ ಅರಣ್ಯ ಇಲಾಖೆ ಕೆಲಸ ಮಾಡುತ್ತಿದೆಯೇ ಎಂದು ಪ್ರಶ್ನಿಸುವಂತಾಗಿದೆ. ವಿದೇಶಗಳಲ್ಲಿ ಸಾವಿನ ದವಡೆಯಲ್ಲಿರುವ ಪ್ರಾಣಿ–ಪಕ್ಷಿಗಳ ರಕ್ಷಣೆ ಮಾಡುವುದು ಕಣ್ಣಿಗೆ ಕಟ್ಟುತ್ತಿದೆ. ಆದರೆ ನಮ್ಮಲ್ಲಿ ಅಂತಹ ಒಂದು ಕಾಳಜಿ, ಮುತುವರ್ಜಿ ಇಲ್ಲವಾಯಿತೆ ಎಂಬುದು ಅತ್ಯಂತ ದುಃಖದ ಸಂಗತಿ. ನಾಲ್ಕು ಹುಲಿ ಮರಿಗಳ ಸಾವಿನ ತನಿಖೆಯಾಗಬೇಕು ಎಂದು 'ಮೈಸೂರು ಮಿತ್ರ'ನಲ್ಲಿ ಪ್ರಾಣಿ ಪ್ರಿಯರು ಒತ್ತಾಯಿಸಿದ್ದಾರೆ.

ಭಾಷಣ ಪ್ರತಿಬಂಧಕ ಮಸೂದೆ ಮಂಡನೆ

ಧ್ವನಿ ಮತಕ್ಕೆ ಹಾಕಿದಾಗ, ಬಿಜೆಪಿ ಸದಸ್ಯರು 'ಬೇಡ' ಎಂದು ಕೂಗುವ ಮೂಲಕ ಅದನ್ನು ವಿರೋಧಿಸಿದರು.

ದ್ವೇಷ ಭಾಷಣ ಪ್ರಸರಣೆ, ಪ್ರಕಟಣೆ, ಪ್ರಚಾರ ತಡೆಯುವ ವಿಧೇಯಕ ಇದಾಗಿದ್ದು, ಯಾವುದೇ ಪೂರ್ವಾಗ್ರಹ ಪೀಡಿತ ಹಿತಾಸಕ್ತಿಯನ್ನು ಪೂರೈಸಲು, ಜೀವಂತ ಅಥವಾ ಸತ್ತ ವ್ಯಕ್ತಿ, ಅಥವಾ ವ್ಯಕ್ತಿಗಳ ಗುಂಪಿನ ವಿರುದ್ಧ ದ್ವೇಷ ಅಥವಾ ದ್ವೇಷದ ಭಾವನೆಗಳನ್ನು ಉಂಟು ಮಾಡುವ ಉದ್ದೇಶದಿಂದ ಮಾಡಿದ ಭಾಷಣ, ಪ್ರಕಟಿಸಿದ ಅಥವಾ ಪ್ರಸಾರ ಮಾಡಿದ ಯಾವುದೇ ಅಭಿವ್ಯಕ್ತಿಯನ್ನು ದ್ವೇಷ ಭಾಷಣ ಎಂದು ವರ್ಗೀಕರಿಸಲಾಗಿದೆ. ಧರ್ಮ, ಜನಾಂಗ, ಜಾತಿ ಅಥವಾ ಸಮುದಾಯ, ಲಿಂಗ, ಲೈಂಗಿಕ ದೃಷ್ಟಿಕೋನ, ಜನ್ಮಸ್ಥಳ, ವಾಸಸ್ಥಳ, ಭಾಷೆ, ಅಂಗವೈಕಲ್ಯ ಅಥವಾ ಬುಡಕಟ್ಟು ಆಧಾರದ ಮೇಲೆ ಯಾವುದೇ ಪಕ್ಷಪಾತವನ್ನು ದ್ವೇಷ ಭಾಷಣ ಎಂದು ವರ್ಗೀಕರಿಸಲಾಗಿದೆ

ಮೊದಲ ಬಾರಿಗೆ ದ್ವೇಷ ಭಾಷಣ, ದ್ವೇಷ ಅಪರಾಧಗಳಿಗೆ ಕನಿಷ್ಠ 1 ವರ್ಷ ಮತ್ತು ಗರಿಷ್ಠ 7 ವರ್ಷದವರೆಗೆ ಜೈಲು ಹಾಗೂ 50 ಸಾವಿರ ರೂ ದಂಡ ವಿಧಿಸಲು ಅವಕಾಶ ನೀಡಲಾಗಿದೆ. ಅಪರಾಧ ಪುನರಾವರ್ತನೆಯಾದರೆ ಕನಿಷ್ಠ 2 ವರ್ಷದಿಂದ ಗರಿಷ್ಠ 10 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ 1 ಲಕ್ಷ ರೂ ದಂಡ ವಿಧಿಸಬಹುದಾಗಿದೆ.

ದ್ವೇಷ ಭಾಷಣ ಮಾಡಿ ಕೇಸ್ ಬಿದ್ದರೆ ಅದು ಜಾಮೀನು ರಹಿತ ಪ್ರಕರಣವಾಗಿದ್ದು, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ್ ಮೂಲಕ ದ್ವೇಷ ಭಾಷಣಗಳ ವಿಚಾರಣೆ ಮಾಡಬೇಕು. ದ್ವೇಷ ಭಾಷಣಗಳ ಪ್ರಕರಣಗಳನ್ನು ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಉಪ ಪೊಲೀಸ್ ವರಿಷ್ಠಾಧಿಕಾರಿ ದರ್ಜೆಗಿಂತ ಕಡಿಮೆ ಇಲ್ಲದ ಯಾರೇ ಪೊಲೀಸ್ ಅಧಿಕಾರಿಯು ವಿಚಾರಣೆ ಮಾಡಿ ಕಾಯ್ದೆಯಡಿ ಕ್ರಮ ಕೈಗೊಳ್ಳಲು ಅವಕಾಶ ನೀಡಲಾಗಿದೆ.

ಕೋರ್ಟ್‌ನಿಂದ ತಡೆಯಾಜ್ಞೆ ತಂದ ತಾಯಿ!

ಚಾಮರಾಜ ಒಡೆಯರ್ ಗುದ್ದಲಿ ಪೂಜೆ ಸಹ ನೆರವೇರಿಸಿದ್ದರು. ಇದರ ವಿರುದ್ಧ ಇದೀಗ ಇವರ ತಾಯಿ, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಕೋರ್ಟ್ ಮೆಟ್ಟಿಲೇರಿದ್ದು, ಸದರಿ ಸರ್ವೆ ಜಾಗದಲ್ಲಿ ಯಾವುದೇ ನಿರ್ಮಾಣ ಕಾರ್ಯ ಮಾಡದೆ ಯಥಾಸ್ಥಿತಿ ಮುಂದುವರೆಸಬೇಕೆಂದು ಕೋರಿದ್ದರು. ರಾಜ್ಯ ಹೈಕೋರ್ಟ್ ಯಥಾಸ್ಥಿತಿ ಕಾಪಾಡಲು ಆದೇಶ ನೀಡಿದೆ.

ಕೇಂದ್ರ ಸರ್ಕಾರದ ಮೇಕ್–ಇನ್–ಇಂಡಿಯಾ ಬಲಪಡಿಸಲು ಉತ್ತಮ ವೇದಿಕೆಯಾಗಿದ್ದ ಯೂನಿಟಿ ಮಾಲ್ ಅನ್ನು ಪಿಪಿಪಿ ಮಾದರಿಯಲ್ಲಿ ಒಟ್ಟು 193 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಕಾರ್ಯಕ್ಕೆ ಯೋಜನೆ ರೂಪಿಸಲಾಗಿತ್ತು. ದೇಶದ ವಿವಿಧ ರಾಜ್ಯಗಳ ಒಟ್ಟು 36 ವಾಣಿಜ್ಯ ಮಳಿಗೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿತ್ತು.

ಜೊತೆಗೆ ಅತಿಥೇಯ ರಾಜ್ಯ ಕರ್ನಾಟಕದ ಪ್ರತಿ ಜಿಲ್ಲೆಗೂ ಒಂದು ಮಳಿಗೆಯನ್ನು ಪ್ರಾರಂಭಿಸಲು ಅವಕಾಶ ಕಲ್ಪಿಸಲಾಗಿತ್ತು. ಆ ಮೂಲಕ ಆಯಾ ರಾಜ್ಯಗಳ ದೇಸಿಯ ಕರಕುಶಲ ಉತ್ಪನ್ನಗಳ ಮಾರಾಟ ಹಾಗೂ ಕುಶಲಕರ್ಮಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವುದು ಯೋಜನೆಯ ಉದ್ದೇಶವಾಗಿತ್ತು. ಇದೀಗ ಹೈಕೋರ್ಟ್ ಮೆಟ್ಟಿಲೇರಿರುವ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಈ ಮಹತ್ವದ ಯೋಜನೆಗೆ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ.

ಹಾಡುವುದನ್ನು ಕಡ್ಡಾಯಗೊಳಿಸಿ

ಎಂದು ಸುಧಾ ಮೂರ್ತಿ ಅವರು ವರ್ಣಿಸಿದರು. ಎಲ್ಲಾ ರಾಜ್ಯದ ಶಾಲಾ ಮಕ್ಕಳಿಗೆ ರಾಷ್ಟ್ರಗೀತೆ ಜನಗಣ ಮನವನ್ನು ಕಲಿಸುತ್ತೇವೆ. ಆದರೆ, ವಂದೇ ಮಾತರಂ ಹಾಡಿಸದಿರಲು ಕಾರಣ ಏನು? ಎಂದು ಪ್ರಶ್ನಿಸಿದ ಅವರು, ಮಕ್ಕಳಿಗೆ ವಂದೇ ಮಾತರಂ ಗೀತೆ ಕಲಿಸೋಕೆ ಮೂರು ನಿಮಿಷ ಹಿಡಿಯಬಹುದು ಅಷ್ಟೇ. ಆದರೆ, ಹಾಡನ್ನು ಕಲಿಸಲು ನಾವು ಮುಂದಾಗುತ್ತಲೇ ಇಲ್ಲ ಯಾಕೆ? ಹೀಗೆ ಈ ನಡವಳಿಕೆ ಮುಂದುವರೆದರೆ, ಮುಂದೊಂದು ದಿನ ನಮ್ಮ ಮಕ್ಕಳು ವಂದೇ ಮಾತರಂ ಹಾಡನ್ನು, ಹಾಡುವುದನ್ನೇ ಮರೆತು ಬಿಡುತ್ತಾರೆ. ಸಾಹಿತ್ಯ ಮರೆಯುತ್ತಾರೆ. ಸಂಪೂರ್ಣ ಪಠ್ಯವನ್ನೇ ಕಳೆದುಕೊಳ್ಳುತ್ತಾರೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಹತ್ಯೆ: ಅಪರಾಧಿಗೆ ಗಲ್ಲು ಶಿಕ್ಷೆ



ನಾಗಿ ಮೇಲೆ ಹಲ್ಲೆ ನಡೆಸಿದ್ದಾನೆ. ಈ ವೇಳೆ ಆಕೆಯ ಕಂಕುಳದಲ್ಲಿದ್ದ ಮಗು ಕಾವೇರಿಯ ತಲೆಯ ಭಾಗಕ್ಕೆ ಕತ್ತಿ ಏಟು ತಗುಲಿದ್ದು, ಇಬ್ಬರೂ ಸಾವನ್ನಪ್ಪಿದ್ದಾರೆ.

ಜಗಳವನ್ನು ಬಿಡಿಸಲು ಬಂದ ನಾಗಿಯ ಅಜ್ಜ ಕರಿಯ ಮತ್ತು ಅಜ್ಜಿ ಗೌರಿ ಅವರನ್ನೂ ಹತ್ಯೆ ಮಾಡಿದ ಗಿರೀಶ್, ಪಕ್ಕದ ತೋಟದಲ್ಲಿ ರಾತ್ರಿ ಅವಿತುಕೊಂಡಿದ್ದು, ಬೆಳಗ್ಗೆ ಆಟೋ ಹತ್ತಿ ವಿರಾಜಪೇಟೆಗೆ ಬಂದು ಅಲ್ಲಿಂದ ಕೇರಳದ ಇರಟ್ಟಿಗೆ ತೆರಳಿ ಅಲ್ಲಿನ ಬಸ್ ನಿಲ್ದಾಣದ ಬಳಿ ಇರುವ ಕ್ಷೌರದ ಅಂಗಡಿಗೆ ಹೋಗಿ ಕೂದಲು ಕತ್ತರಿಸಿ ಗುರುತು ಸಿಗದಂತೆ ಮಾಡಿಕೊಂಡು ಮೊದಲ ಹೆಂಡತಿ ಮನೆಯಲ್ಲಿ ಅವಿತುಕೊಂಡಿದ್ದನೆನ್ನಲಾಗಿದೆ.

ನಾಗಿಯ ಅಜ್ಜ ಕರಿಯ ಪೊನ್ನಂಪೇಟೆಗೆ ಕಾಫಿ ತೆಗೆದುಕೊಂಡು ಹೋಗಲು ಪಿಕಪ್ ವಾಹನವನ್ನು ಕೊಡುವಂತೆ ವಿಕ್ರಂ ಕೇಳಿದ್ದರಂತೆ. ಮಾ.28ರಂದು ಮಧ್ಯಾಹ್ನವಾದರೂ ಕರಿಯ ಬಾರದ ಕಾರಣ ವಿಕ್ರಂ ಅವರು ಖುದ್ದು ಅತನ ಮನೆಗೆ ಹೋದಾಗ ನಾಲ್ವರೂ ಹತ್ಯೆಯಾಗಿರುವುದು ಗೊತ್ತಾಗಿದೆ.


ಅವರು ನೀಡಿದ ದೂರಿನ ಮೇರೆಗೆ ದಕ್ಷಿಣ ವಲಯ ಡಿಐಜಿ ಡಾ.ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಅಂದಿನ ಅಡಿಷನಲ್ ಎಸ್‌ಪಿ ಸುಂದರರಾಜ್, ಪೊನ್ನಂಪೇಟೆ ಠಾಣಾಧಿಕಾರಿ ಮತ್ತು ಸಿಬ್ಬಂದಿ, ವಿಧಿ ವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಕೊಡಗು ಮತ್ತು ಕೇರಳ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಮೊದಲ ಪತ್ನಿ ಮನೆಯಲ್ಲಿದ್ದ ಗಿರೀಶ್‌ನನ್ನು ಬಂಧಿಸಿ, ತನಿಖೆ ಬಳಿಕ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ವಿರಾಜಪೇಟೆ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಸ್.ನಟರಾಜ ಅವರು ಆರೋಪಿ ಗಿರೀಶ್‌ಗೆ ಗಲ್ಲು ಶಿಕ್ಷೆ ವಿಧಿಸಿ ತೀರ್ಮ ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಯಾಸೀನ್ ಅಹ್ಮದ್ ಅವರು ವಾದ ಮಂಡಿಸಿದ್ದರು.

ಆರ್‌ಟಿಓ ಕಚೇರಿಗಳಲ್ಲಿ ಮಧ್ಯವರ್ತಿಗಳಿಂದ ಸಾರ್ವಜನಿಕರಿಗೆ ತೊಂದರೆಯಾದರೆ ಅಧಿಕಾರಿಗಳೇ ಹೊಣೆ

ಪರಿಷತ್‌ನಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶಿಸ್ತು ಕ್ರಮದ ಎಚ್ಚರಿಕೆ

ಬೆಳಗಾವಿ, ಸುವರ್ಣವಿಧಾನಸೌಧ, ಡಿ.10(ಕೆಎಂಶಿ)–ಆರ್‌ಟಿಓ ಕಚೇರಿಗಳಲ್ಲಿ ಸಾರ್ವಜನಿಕರಿಗೆ ಮಧ್ಯವರ್ತಿಗಳಿಂದ ತೊಂದರೆಯಾದರೆ ಕಚೇರಿಗಳ ಅಧಿಕಾರಿಗಳನ್ನೇ ಹೊಣೆಯಾಗಿಸಿ, ಶಿಸ್ತುಕ್ರಮಕ್ಕೆ ಗುರಿಪಡಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಎಚ್ಚರಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಡಾ.ಉಮಾಶ್ರೀ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಆರ್‌ಟಿಓ ಕಚೇರಿಗಳಲ್ಲಿ ಶಿಸ್ತು ತರಲು ಅನೇಕ ಕ್ರಮ ವಹಿಸಲಾಗಿದೆ. ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಕಡ್ಡಾಯವಾಗಿ ವಿಷಯ ನಿರ್ವಾಹಕರು ನಿರ್ವಹಿಸಬೇಕು. ಅಧೀಕ್ಷಕರು ವಾರಕ್ಕೊಮ್ಮೆ ಪರಿಶೀಲಿಸುವ ಹಾಗೂ ತಿಂಗಳಿಗೊಮ್ಮೆ ಮೇಜು ತಪಾಸಣೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ಸಾರಿಗೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ ಎಂದರು.



ಆರ್‌ಟಿಓ ಕಚೇರಿಗಳಲ್ಲಿ ಮಧ್ಯವರ್ತಿಗಳು ಕಂಡು ಬಂದರೆ, ಆಯಾ ಕಚೇರಿ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಸಾರ್ವಜನಿಕರು ಮಧ್ಯವರ್ತಿಗಳನ್ನು ಸಂಪರ್ಕಿಸದೇ ನೇರವಾಗಿ ಕಚೇರಿಯ ಅಧಿಕಾರಿ ಅಥವಾ ಸಂಬಂಧಪಟ್ಟ ಸಿಬ್ಬಂದಿ ಭೇಟಿ ಮಾಡಿ ಕೆಲಸ ಮಾಡಿಸಿಕೊಳ್ಳುವಂತೆ ಆರ್‌ಟಿಓ ಕಚೇರಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಅಲ್ಲದೆ, ಲೋಕಾಯುಕ್ತ ಕಚೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳ ವಿವರಗಳ ಮಾಹಿತಿ ಯನ್ನೂ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಲಾಗಿದ್ದು, ಸಾರಿಗೆ ಇಲಾಖೆಯ 52 ಸೇವೆಗಳನ್ನು ಆನ್‌ಲೈನ್ ಮುಖಾಂತರ ಒದಗಿಸುವ ಮೂಲಕ ಮಧ್ಯವರ್ತಿಗಳ ಹಾವಳಿ ನಿಯಂತ್ರಣಕ್ಕೆ ಕ್ರಮವಹಿಸ ಲಾಗುತ್ತಿದೆ ಎಂದರು.

ದೀಪಾವಳಿ ಸೇರ್ಪಡೆ

ಡಿ.8ರಿಂದ 13ರವರೆಗೆ ಕೆಂಪು ಕೋಟೆಯಲ್ಲಿ ಸಮಿತಿಯ 20ನೇ ಅಧಿವೇಶನ ನಡೆಯುತ್ತಿದೆ. ದೀಪಾವಳಿ ಹಬ್ಬವನ್ನು ಮಾನವೀಯತೆಯ ಅಮೂರ್ತ ಸಾಂಸ್ಕೃತಿಕ ಪರಂಪರೆಯ ಯುನೆಸ್ಕೋದ ಪ್ರತಿನಿಧಿ ಪಟ್ಟಿಗೆ ಸೇರಿಸಲಾಗಿದೆ ಎಂದು ಯುನೆಸ್ಕೋ ಘೋಷಿಸುತ್ತಿದ್ದಂತೆ 'ವಂದೇ ಮಾತರಂ' ಮತ್ತು 'ಭಾರತ್ ಮಾತಾ ಕಿ ಜೈ' ಮಂತ್ರಗಳು ದೆಹಲಿಯ ಕೆಂಪುಕೋಟೆ ಸುತ್ತ ಮೊಳಗಿದವು.

ಭಾರತವು ಪ್ರಸ್ತುತ ಯುನೆಸ್ಕೋದ ಮಾನವೀಯತೆಯ ಅಮೂರ್ತ ಸಾಂಸ್ಕೃತಿಕ ಪರಂಪರೆಯ ಪ್ರತಿನಿಧಿ ಪಟ್ಟಿಯಲ್ಲಿ 15 ಅಂಶಗಳನ್ನು ಸೇರಿಸಿಕೊಂಡಿದೆ. ಇವುಗಳಲ್ಲಿ ಕುಂಭಮೇಳ, ಕೋಲ್ಕತ್ತಾದ ದುರ್ಗಾ ಪೂಜೆ, ಗುಜರಾತ್‌ನ ಗರ್ಭಾ ನೃತ್ಯ, ಯೋಗ, ವೇದ ಪಠಣದ ಸಂಪ್ರದಾಯ ಮತ್ತು ರಾಮಾಯಣ ಮಹಾಕಾವ್ಯದ ಸಾಂಪ್ರದಾಯಿಕ ಪ್ರದರ್ಶನವಾದ ರಾಮಲೀಲಾ ಸೇರಿವೆ.

ಪ್ರಧಾನಿ ಮೋದಿ ಸಂತಸ: ಭಾರತ ಮತ್ತು ಪ್ರಪಂಚದಾದ್ಯಂತದ ಇರುವ ಭಾರತೀಯರಿಗೆ ಇದು ರೋಮಾಂಚನಪಡಿಸುವ ಸುದ್ದಿ. ದೀಪಾವಳಿ ನಮ್ಮ ಸಂಸ್ಕೃತಿ ಮತ್ತು ನೀತಿಯೊಂದಿಗೆ ಬಹಳ ನಿಕಟ ಸಂಬಂಧ ಹೊಂದಿದೆ. ಇದು ನಮ್ಮ ನಾಗರಿಕತೆಯ ಆತ್ಮ. ಇದು ಜ್ಞಾನೋದಯ ಮತ್ತು ಸದಾಚಾರವನ್ನು ನಿರೂಪಿಸುತ್ತದೆ. ಯುನೆಸ್ಕೋ ಅಮೂರ್ತ ಪರಂಪರೆಯ ಪಟ್ಟಿಗೆ ದೀಪಾವಳಿ ಹಬ್ಬ ಸೇರ್ಪಡೆಯು ಹಬ್ಬದ ಜಾಗತಿಕ ಜನಪ್ರಿಯತೆಗೆ ಮತ್ತಷ್ಟು ಕೊಡುಗೆ ನೀಡುತ್ತದೆ. ಪ್ರಭು ಶ್ರೀ ರಾಮನ ಆದರ್ಶಗಳು ನಮಗೆ ಶಾಶ್ವತವಾಗಿ ಮಾರ್ಗದರ್ಶನ ನೀಡಲಿ ಎಂದು ಸೋಷಿಯಲ್ ಮೀಡಿಯಾ ಪೇಜ್‌ನಲ್ಲಿ ಪ್ರಧಾನಿ ಬರೆದುಕೊಂಡಿದ್ದಾರೆ.

ಮುಡಾ ಮಾಜಿ ಆಯುಕ್ತ ದಿನೇಶ್‌ಕುಮಾರ್ ಲೋಕಾಯುಕ್ತ ಪೊಲೀಸರ ಕಸ್ಟಡಿಗೆ

ಮೈಸೂರು, ಡಿ.10– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಆಯುಕ್ತ ದಿನೇಶ್‌ಕುಮಾರ್ ಅವರನ್ನು ಹೆಚ್ಚಿನ ವಿಚಾರಣೆಗೆ ಲೋಕಾಯುಕ್ತ ಪೊಲೀಸರ ಕಸ್ಟಡಿಗೆ ನೀಡಲು ಕೋರ್ಟ್ ಆದೇಶಿಸಿದೆ. ಈ ಸಂಬಂಧ ಮೈಸೂರು ಲೋಕಾಯುಕ್ತ ಪೊಲೀಸರು ಬೆಂಗಳೂರಿನಲ್ಲಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಮುಡಾ ಹಗರಣದ ಹೆಚ್ಚಿನ ವಿಚಾರಣೆಗೆ ಹಾಲಿ ಜೈಲಿನಲ್ಲಿರುವ ಮಾಜಿ ಆಯುಕ್ತ ದಿನೇಶ್ ಕುಮಾರ್ ಅವರನ್ನು ಕಸ್ಟಡಿಗೆ ನೀಡುವಂತೆ ಕೋರಿದ್ದರು.



ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳು, ಮೈಸೂರು ಲೋಕಾಯುಕ್ತ ಪೊಲೀಸರ ಅರ್ಜಿ ಪುರಸ್ಕರಿಸಿ ಡಿ.12ರವರೆಗೆ ಕಸ್ಟಡಿಗೆ ನೀಡುವಂತೆ ಆದೇಶಿಸಿದರು. 2025ರ ಸೆ.16 ರಂದು ದಿನೇಶ್‌ಕುಮಾರ್ ಅವರನ್ನು ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಹಾಗೂ ನಿವೇಶನಗಳ ಅಕ್ರಮ ಹಂಚಿಕೆ ಆರೋಪದ ಅಡಿ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ಬಂಧಿಸಿದ್ದು, ಸದ್ಯ ಅವರು ಜೈಲಿನಲ್ಲಿದ್ದಾರೆ.

ಕಾರ್ಖಾನೆ ಮಾಲೀಕರು, ಮಹಿಳಾ ಉದ್ಯೋಗಿ ದೂರು–ಪ್ರತಿದೂರು ; ಎರಡೂ ಪ್ರಕರಣದಲ್ಲೂ ಎಫ್‌ಐಆರ್

ಮೈಸೂರು, ಡಿ.10(ಪಿಎಂ)– ಲೈಂಗಿಕವಾಗಿ ಸಹಕರಿಸುವಂತೆ ಪೀಡಿಸುತ್ತಿರುವ ಆರೋಪದಡಿ ಕಾರ್ಖಾನೆಯೊಂದರ ಮಾಲೀಕರ ವಿರುದ್ಧ ಅಲ್ಲಿನ ಮಹಿಳಾ ಉದ್ಯೋಗಿ ನೀಡಿದ ದೂರಿನನ್ವಯ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಇತ್ತೀಚೆಗೆ ಎಫ್‌ಐಆರ್ ದಾಖಲಾಗಿದ್ದರೆ, ಅದೇ ಮಹಿಳಾ ಉದ್ಯೋಗಿ ವಿರುದ್ಧ ಸದರಿ ಮಾಲೀಕರೇ ನೀಡಿದ ದೂರಿನನ್ವಯ ವಂಚನೆ ಆರೋಪದಡಿ ವಿಜಯನಗರ ಪೊಲೀಸ್ ಠಾಣೆಯಲ್ಲಿ ಕಳೆದ ತಿಂಗಳೇ ಎಫ್‌ಐಆರ್ ದಾಖಲಾಗಿದೆ.

ಕಳೆದ ನ.15ರಂದು ಕೂರ್ಗಳ್ಳಿಯ ಪ್ರಿಸೈಸ್ ಗೇರ್ಸ್ ಅಂಡ್ ಟರ್ಬೈನ್ ಸಲ್ಯೂಷನ್ಸ್ ಕಾರ್ಖಾನೆ ಮಾಲೀಕ ಟಿ.ಎಸ್.ಮುರುಳೀಧರ್ ಸದರಿ ಮಹಿಳಾ ಉದ್ಯೋಗಿ ವಿರುದ್ಧ ದೂರು ನೀಡಿದ್ದರು. ನಮ್ಮ ಕಾರ್ಖಾನೆಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಸದರಿ ಮಹಿಳೆಯು ಗಿರೀಶ್ ಮತ್ತು ಅಜಯ್ ಅವರೊಂದಿಗೆ ಸೇರಿ ಕಂಪನಿಗೆ ವಂಚಿಸುವ ಉದ್ದೇಶದಿಂದ ಕಂಪನಿಯ ಖಾತೆಯಿಂದ ಸುಮಾರು 27 ಲಕ್ಷ ಹಣವನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡು ಹಾಗೂ ಕಂಪನಿಯ ಗೌಪ್ಯ ವ್ಯವಹಾರಗಳನ್ನು ಹಂಚಿಕೊಂಡು ವಂಚಿಸಿದ್ದಾರೆ ಎಂದು ನೀಡಿದ್ದ ದೂರಿನನ್ವಯ ಎಫ್‌ಐಆರ್ ಆಗಿತ್ತು.

ಈಗ ಡಿ.6ರಂದು ಸದರಿ ಕಾರ್ಖಾನೆ ಮಾಲೀಕ ಮುರಳೀಧರ್ ವಿರುದ್ಧ ಇದೇ ಮಹಿಳಾ ಉದ್ಯೋಗಿ ದೂರು ನೀಡಿದ್ದು, ಲೈಂಗಿಕವಾಗಿ ಸಹಕರಿಸುವಂತೆ ಪೀಡಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಮಾಲೀಕರ ಒತ್ತಾಯಕ್ಕೆ ಮಣಿಯದೇ ತಿರುಗಿ ಬಿದ್ದ ಹಿನ್ನೆಲೆಯಲ್ಲಿ ಅವರು ಸಹದ್ಯೋಗಿಗಳ ಮುಂದೆ ವಿನಾಕಾರಣ ನಿಂದಿಸುತ್ತಿದ್ದರು. ಹೀಗಾಗಿ ಕಾರ್ಖಾನೆಯ ಕೆಲಸವನ್ನು ಬಿಟ್ಟಿದ್ದರೂ ಕೆಲ ದಿನಗಳ ನಂತರ ಮನೆ ಬಳಿಯೂ ಬಂದು ಕೆಲಸಕ್ಕೆ ಬರುವಂತೆ ಒತ್ತಡ ಹಾಕಿದ್ದರು. ಅಲ್ಲದೆ, ರೌಡಿಗಳ ಮೂಲಕ ಹಲ್ಲೆ ಮಾಡಿಸುವ ಬೆದರಿಕೆ ಹಾಕಿದ್ದಾರೆ ಎಂದು ಸದರಿ ಮಹಿಳಾ ಉದ್ಯೋಗಿ ಆರೋಪಿಸಿ ನೀಡಿದ ದೂರಿನನ್ವಯ ಎಫ್‌ಐಆರ್ ದಾಖಲಾಗಿದೆ.

ರೆಂಜಾಳ ರಾಮಕೃಷ್ಣ ರಾವ್ ಸೇರಿ ಐವರಿಗೆ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪ್ರಕಟ


ರೆಂಜಾಳ ರಾಮಕೃಷ್ಣ

ಬೆಂಗಳೂರು, ಡಿ.10– ಕರ್ನಾಟಕ ಯಕ್ಷಗಾನ ಅಕಾಡೆಮಿಯ 2025ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟ ಮಾಡಲಾಗಿದೆ. ಅಕಾಡೆಮಿಯ ಗೌರವ ಪ್ರಶಸ್ತಿಗೆ ರೆಂಜಾಳ ರಾಮಕೃಷ್ಣ, ವಿಷ್ಣು ಆಚಾರಿ ಬಳಕೂರು, ಡಿ.ಮನೋಹರ್ ಕುಮಾರ್, ಮುರಲಿ ಕಡೆಕಾರ್, ರಮೇಶ್ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪುರಸ್ಕಾರವು 50 ಸಾವಿರ ನಗದನ್ನು ಒಳಗೊಂಡಿದೆ.

ಯಕ್ಷಸಿರಿ ವಾರ್ಷಿಕ ಪ್ರಶಸ್ತಿಗೆ ದಾಸಪ್ಪ ರಾಮ ಕುಲಾಲ್, ರಾಜೀವ ಶೆಟ್ಟಿ ಹೊಸಂಗಡಿ, ದಾಸಪ್ಪಗೌಡ ಗೇರುಕಟ್ಟೆ, ಶ್ರೀನಿವಾಸ್ ಸಾಲ್ಯಾನ್, ಸದಾಶಿವ ಕುಲಾಲ್, ಬೆಳ್ಳಾರೆ ಮಂಜುನಾಥ ಭಟ್, ಕೇಶವ ಶಕ್ತಿನಗರ, ಲಕ್ಷ್ಮಣಗೌಡ ಬೆಳಾಲ್, ಸಣ್ಣ ಮಲ್ಲಪ್ಪ, ಎ.ಜಿ.ನಾಗರಾಜು ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು 25 ಸಾವಿರ ನಗದನ್ನು ಒಳಗೊಂಡಿದೆ ಎಂದರು.

ಕರ್ಕಿ ಪಿರಿಯ ಪರಮಯ್ಯ ಹಾಸ್ಯಗಾರ ದತ್ತಿನಿಧಿ ಪ್ರಶಸ್ತಿಗೆ ದೇವದಾಸ ರಾವ್ ಕೂಡ್ಲಿ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ರೂ.25 ಸಾವಿರ ನಗದನ್ನು ಒಳಗೊಂಡಿದೆ ಎಂದರು.

ಪುಸ್ತಕ ಬಹುಮಾನ ಪ್ರಶಸ್ತಿಗೆ ಅಶೋಕ ಹಾಸ್ಯಗಾರ, ಕೆರೆಮನೆ ಶಿವಾನಂದ ಹೆಗಡೆ, ಮಣಿಪಾಲ್ ಯೂನಿವರ್ಸಲ್ ಪ್ರೆಸ್ ಅನ್ನು ಆಯ್ಕೆ ಮಾಡಲಾಗಿದೆ. 'ಪಾರ್ತಿಸುಬ್ಬ ಪ್ರಶಸ್ತಿ'ಗೆ ಸಮಿತಿಯಲ್ಲಿ ಆಯ್ಕೆ ಮಾಡಲಾಗಿದ್ದ ಕಲಾವಿದರು ನಿಧನ ಹೊಂದಿರುವ ಕಾರಣಕ್ಕೆ ಮುಂದಿನ ಸಭೆಯಲ್ಲಿ ತೀರ್ಮಾನಿಸಿ ಪ್ರಶಸ್ತಿ ಪ್ರದಾನ ಮಾಡಲಾಗುವುದೆಂದು ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ಹೇಳಿದ್ದಾರೆ.

ಸಹಾಯಧನಕ್ಕೆ ಅರ್ಜಿ ಆಹ್ವಾನ

ಮೈಸೂರು,ಡಿ.10– ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವತಿಯಿಂದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯಡಿ ಗ್ರಾಮೀಣ, ನಗರ ಪ್ರದೇಶದ ಯುವಕ, ಯುವತಿಯರು ಉತ್ಪಾದನಾ, ಸೇವಾ ಚಟುವಟಿಕೆ ಘಟಕಗಳನ್ನು ಪ್ರಾರಂಭಿಸಬಹುದಾಗಿದ್ದು, ಉತ್ಪಾದನಾ ಚಟುವಟಿಕೆಗೆ ಗರಿಷ್ಠ 50 ಲಕ್ಷ ರೂ. ಹಾಗೂ ಸೇವಾ ಚಟುವಟಿಕೆಗೆ ಗರಿಷ್ಠ 20 ಲಕ್ಷ ರೂ. ಸಾಲವನ್ನು ಬ್ಯಾಂಕ್ ಮೂಲಕ ಗ್ರಾಮೀಣ ಪ್ರದೇಶದ ಘಟಕಗಳಿಗೆ ಶೇ.35 ಹಾಗೂ ನಗರ ಪ್ರದೇಶದ ಘಟಕಗಳಿಗೆ ಶೇ.25ರ ಸಹಾಯಧನವನ್ನು ವಿತರಿಸಲಾಗುವುದು. ಆಸಕ್ತರು ವೆಬ್ ಸೈಟ್ kviconline.gov.in/pmegpeportal ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರ, ಸಿಟಿಐ ಕಟ್ಟಡ ಸಯ್ಯಾಜಿರಾವ್ ರಸ್ತೆ ಮೈಸೂರು ಕಚೇರಿಯ ದೂ.ಸಂ:0821-2520886 ನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉತ್ತಮ ಕೆಲಸ ಮಾಡಲು ಉನ್ನತ ಅಧಿಕಾರ ಬೇಕೆಂದೇನಿಲ್ಲ

ಮೈಸೂರಿನ ಸಿಎಆರ್ ಮೈದಾನದಲ್ಲಿ ಕವಾಯಿತು ವಂದನೆ ಸ್ವೀಕರಿಸಿದ ಎಡಿಜಿಪಿ ಎಂ. ಚಂದ್ರಶೇಖರ್‌ರವರ ಅಭಿಮತ





ಮೈಸೂರು ನಗರ ಪೊಲೀಸ್ ಘಟಕದ ವತಿಯಿಂದ ಚಾಮುಂಡಿ ಬೆಟ್ಟದ ತಪ್ಪಲಿನ ಸಿಎಆರ್ ಮೈದಾನದಲ್ಲಿ ಆಯೋಜಿಸಿದ್ದ ಆಕರ್ಷಕ ಪಥಸಂಚಲನದಲ್ಲಿ ಕವಾಯಿತು ವಂದನೆಯನ್ನು ಎಡಿಜಿಪಿ ಸ್ವೀಕರಿಸಿದರು.

ಮೈಸೂರು, ಡಿ. 10 (ಆರ್‌ಕೆ)–ಜನ ಮಾನಸದಲ್ಲಿ ಉಳಿಯುವಂತೆ ಉತ್ತಮ ಕೆಲಸ ಮಾಡಲು ಉನ್ನತ ಅಧಿಕಾರವೇ ಬೇಕೆಂದೇನಿಲ್ಲ ಎಂದು ಆಂತರಿಕ ವಿಭಾಗದ ಎಡಿಜಿಪಿ ಎಂ. ಚಂದ್ರಶೇಖರ್ ಅವರು ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ನಗರ ಪೊಲೀಸ್ ಘಟಕದ ವತಿಯಿಂದ ಚಾಮುಂಡಿ ಬೆಟ್ಟದ ತಪ್ಪಲಿನ ಸಿಎಆರ್ ಮೈದಾನದಲ್ಲಿ ಆಯೋಜಿಸಿದ ಆಕರ್ಷಕ ಪಥಸಂಚಲನದಲ್ಲಿ ಕವಾಯಿತು ವಂದನೆ ಸ್ವೀಕರಿಸಿ ಮಾತನಾಡುತ್ತಿದ್ದ ಅವರು, ಉತ್ತಮವಾಗಿ ಕೆಲಸ ಮಾಡಲು ಅತ್ಯುನ್ನತ (ಹೈ ರ್‍ಯಾಂಕಿಂಗ್) ಹುದ್ದೆಯೇ ಬೇಕಾಗಿಲ್ಲ. ಚಿಕ್ಕ ಹುದ್ದೆಯಲ್ಲಿದ್ದರೂ ದೊಡ್ಡ ಕೆಲಸವನ್ನು ಮಾಡಬಹುದು ಎಂದರು.

ಕಾನ್ಸ್‌ಟೇಬಲ್ ಸೇವೆ ಶ್ಲಾಘನೀಯ : ಅದಕ್ಕೆ ಪೂರಕ ಉದಾಹರಣೆ ನೀಡಿದ ಎಡಿಜಿಪಿ ಅವರು, ತಾವು ಹಿಮಾಚಲ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾಗ ಪೊಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಚರಣ್ ಸಿಂಗ್ ಎಂಬ ಕಾನ್ಸ್‌ಟೇಬಲ್ ಎಂತಹ ಕ್ಲಿಷ್ಟ ಸಂದರ್ಭದಲ್ಲೂ ಅತ್ಯಂತ ಸಮರ್ಥವಾಗಿ ಪರಿಸ್ಥಿತಿ ನಿಭಾಯಿಸುತ್ತಿದ್ದ. ತಮ್ಮ ವ್ಯಾಪ್ತಿಯ ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿ ಎಲ್ಲರ ವಿಶ್ವಾಸಕ್ಕೆ ಪಾತ್ರನಾಗಿದ್ದ. ಬೃಹತ್ ಪ್ರತಿಭಟನೆ, ರ್‍ಯಾಲಿ ಲಕ್ಷಾಂತರ ಜನ ಸೇರುವ ಸಭೆ, ಕಾರ್ಯಕ್ರಮಗಳು ಗಲಾಟೆ–ಗದ್ದಲಗಳಿಲ್ಲದೆ ಶಾಂತ ರೀತಿಯಲ್ಲಿ ನಡೆಯುವಂತೆ ಎಲ್ಲಾ ಅಗತ್ಯ ಮುಂಜಾಗ್ರತೆ ಕ್ರಮ ಕೈಗೊಳ್ಳಲು ಮಾಹಿತಿ ನೀಡಿ ನಿರ್ವಹಣೆ ಮಾಡುತ್ತಿದ್ದ ಎಂದರು.

ಸೇವೆಯಿಂದ ಗೌರವ : ಆ ಕಾನ್ಸ್‌ಟೇಬಲ್ ಮುಂದೆ ಇನ್ಸ್‌ಪೆಕ್ಟರ್ ಆಗಿ ಪದೋನ್ನತಿ ಹೊಂದಿ, ನಂತರ ಸ್ವಯಂ ನಿವೃತ್ತಿ ಪಡೆದುಕೊಂಡರು. ಸೇವೆಯಲ್ಲಿದ್ದಾಗ ಡಿಜಿಪಿ ಅವರು ಸಹ ಆತನನ್ನು ಕರೆದು ಹಲವು ಸಮಸ್ಯೆಗಳಿಗೆ ಪರಿಹಾರೋಪಾಯ ಪಡೆದುಕೊಳ್ಳುತ್ತಿದ್ದರು. ನಿವೃತ್ತಿ ನಂತರ ಚರಣ್‌ಸಿಂಗ್‌ರನ್ನು ಅಂದಿನ ಮುಖ್ಯಮಂತ್ರಿಗಳು ತಮ್ಮ ಸಲಹೆಗಾರರನ್ನಾಗಿ ನೇಮಿಸಿಕೊಂಡಿದ್ದರು. ಒಳ್ಳೆಯ ಕೆಲಸ ಮಾಡಿದರೆ ಅದು ಕಡೆವರೆಗೂ ಜನಮಾನಸದಲ್ಲಿ ಉಳಿಯಲಿದೆ ಎಂದು ಪೊಲೀಸರಿಗೆ ಕಿವಿ ಮಾತು ಹೇಳಿದರು.

ನೀವು ಎಲ್ಲೇ ಇರಿ, ಯಾವುದೇ ಹುದ್ದೆಯಲ್ಲಿರಿ ಮಾಡುವ ಕೆಲಸ ಒಳ್ಳೆಯದಿರಲಿ. ನಿಮ್ಮೆದುರು ಯಾವುದೇ ಅನ್ಯಾಯ, ಅಕ್ರಮ, ಕಾನೂನು ಬಾಹಿರ ಕೆಲಸವಾಗುತ್ತಿರುವುದು ಕಂಡರೆ ಪೊಲೀಸರಾಗಿ ಅದನ್ನು ನೀವು ಕನಿಷ್ಠ ಪಕ್ಷ ತಪ್ಪೆಂದು ಪ್ರತಿಪಾದಿಸಿ. ಏಕೆಂದರೆ, ಕೆಟ್ಟವರಿಂದ ನೊಂದವರ ಶಾಪದ ಶಕ್ತಿ ತೀವ್ರವಾಗಿರುತ್ತದೆ. ಒಂದು ವೇಳೆ ನೀವು ಅದನ್ನು ಪೋಷಿಸಿದರೆ ಸಮಾಜದಲ್ಲಿ ಕೆಟ್ಟವರ ಪ್ರಾಬಲ್ಯ ಜಾಸ್ತಿಯಾಗಿ ನೊಂದವರಿಗೆ ತೀವ್ರ ಅನ್ಯಾಯವಾಗಲಿದೆ ಎಂದು ಅವರು ಇದೇ ಸಂದರ್ಭದಲ್ಲಿ ನುಡಿದರು.

ನೀವೇ ಧನ್ಯರು : ಒತ್ತಡ ಎಲ್ಲರಿಗೂ ಇದ್ದೇ ಇರುತ್ತದೆ. ಅದರಲ್ಲೂ ನಿಮಗೆ ವೃತ್ತಿಪರ ಟೆನ್ಷನ್ ಜಾಸ್ತಿಯೇ ಇರುತ್ತದೆ, ಕರ್ತವ್ಯದಲ್ಲಿದ್ದಾಗ ಅದನ್ನು ಚೆನ್ನಾಗಿ ನಿರ್ವಹಿಸಿ. ಮನೆಯಲ್ಲಿದ್ದಾಗ ಮಕ್ಕಳು, ಮನೆಯೊಂದಿಗೆ ಕಾಲ ವ್ಯಯಿಸಿ. ಒಮ್ಮೆ ಕಳೆದ ಕ್ಷಣ ಮತ್ತೊಮ್ಮೆ ಬರಲಾರದು. ಮೈಸೂರಿನಂತಹ ಸಾಂಸ್ಕೃತಿಕ ನಗರಿಯಲ್ಲಿ ಕೆಲಸ ಮಾಡುತ್ತಿರುವ ನೀವು ಧನ್ಯರು. ಸೀಮಾಲಾಟ್ಕರ್‌ರಂತಹ ಉತ್ತಮ ಕಮಿಷನರ್‌ರೊಂದಿಗೆ ಕರ್ತವ್ಯ ನಿರ್ವಹಿಸುತ್ತಿರುವ ನೀವು ಆರೋಗ್ಯ ಕಾಪಾಡಿಕೊಂಡು ಮನಸ್ಸನ್ನು ಶಾಂತಚಿತ್ತವಾಗಿರಿಸಿಕೊಳ್ಳಿ. ಸರ್ಕಾರ ನಿಮಗೆ ಇಷ್ಟೆಲ್ಲಾ ಅವಕಾಶ ನೀಡಿರುವುದರಿಂದ ನೀವು ಪ್ರತಿಯಾಗಿ ಒಳ್ಳೆಯ ಕೆಲಸ ಮಾಡಿ ಇಲಾಖೆಗೆ ಗೌರವ ತಂದು ಕೃತಜ್ಞತೆ ಸಲ್ಲಿಸುವುದು ನಿಮ್ಮ ಜವಾಬ್ದಾರಿ ಎಂದು ಸಲಹೆ ನೀಡಿದರು.

ನಗರ ಪೊಲೀಸ್ ಕಮಿಷನರ್ ಸೀಮಾ ಲಾಟ್ಕರ್, ಡಿಸಿಪಿ ಕೆ.ಎಸ್. ಸುಂದರ್‌ರಾಜ್, ಮೌಂಟೆಡ್ ಪೊಲೀಸ್ ಕಮಾಂಡೆಂಟ್ ಎ. ಮಾರುತಿ ಹಾಗೂ ಇತರ ಪೊಲೀಸ್ ಅಧಿಕಾರಿಗಳು ಕವಾಯತಿನಲ್ಲಿ ಪಾಲ್ಗೊಂಡಿದ್ದರು. ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ಬಿ.ಆರ್. ಬಿಂದುಮಣಿ ಅವರು ಕವಾಯತಿನ ಕಮಾಂಡರ್ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಶಾಸಕರಿಂದ ಮಂಗಳಮುಖಿಯರ ಚಿತ್ರ ವೀಕ್ಷಣೆ



ಸುಮಾರು 400ಕ್ಕೂ ಹೆಚ್ಚು ಮಂಗಳ ಮುಖಿಯರು ನಟಿಸಿರುವ ಚಿತ್ರ 'ಶಿವಲೀಲಾ' ಪ್ರೀಮಿಯರ್ ಶೋವನ್ನು ಕೆಆರ್ ಕ್ಷೇತ್ರದ ಶಾಸಕ ಶ್ರೀವತ್ಸ ಅವರು ಸ್ನೇಹಿತರೊಡಗೂಡಿ ಬೆಳಗಾವಿಯ ಚಿತ್ರಮಂದಿರದಲ್ಲಿ ವೀಕ್ಷಿಸಿದರು.

ಸದ್ವಿದ್ಯಾ ಸಂಯುಕ್ತ ಪದವಿಪೂರ್ವ ಕಾಲೇಜಿನ ವೈಭವದ ವಾರ್ಷಿಕೋತ್ಸವ



ಸದ್ವಿದ್ಯಾ ಸಂಯುಕ್ತ ಪದವಿ ಪೂರ್ವ ಕಾಲೇಜು ವಾರ್ಷಿಕೋತ್ಸವದಲ್ಲಿ ಕೆಲ ಮಹನೀಯರ ಸನ್ಮಾನಿಸಲಾಯಿತು.

ಮೈಸೂರು: ಸದ್ವಿದ್ಯಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಾರ್ಷಿಕೋತ್ಸವವನ್ನು ಜಗನ್ಮೋಹನ ಅರಮನೆಯ ಸಭಾಂಗಣದಲ್ಲಿ ಇತ್ತೀಚೆಗೆ ಆಚರಿಸಲಾಯಿತು.

ಈ ಅರ್ಥಪೂರ್ಣವಾದ ಕಾರ್ಯಕ್ರಮದಲ್ಲಿ ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಗೌರವ ಅಧ್ಯಕ್ಷ ಪ್ರೊ.ಎಂ.ಎಸ್.ಕೆ. ನರಹರಿಬಾಬು ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ದೇಶವನ್ನು ಪ್ರೀತಿಸಲು ಮತ್ತು ಒಗ್ಗಟ್ಟಿನಿಂದ ಕೆಲಸ ಮಾಡಲು ಕರೆ ನೀಡಿದರು.

ಸಂಸ್ಥೆಯ ಗೌರವ ಕಾರ್ಯದರ್ಶಿ ಎಂ.ಡಿ. ಗೋಪಿನಾಥ್ ಅವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಭಾರತದ ಸಂಸ್ಕೃತಿ ವೈವಿಧ್ಯಮಯವಾದದ್ದು. ಅದನ್ನು ಉಳಿಸಬೇಕಾದ್ದು ನಮ್ಮೆಲ್ಲರ ಹೊಣೆ ಎಂದರು. ಪ್ರಖ್ಯಾತ ವಾಗ್ಮಿ ಮತ್ತು ಚಿಂತಕರಾದ ನಿತ್ಯಾನಂದ ವಿವೇಕ ವಂಶಿ, ವಿವೇಕ ವಂಶಿ ಫೌಂಡೇಶನ್‌ನ ಸಂಸ್ಥಾಪಕರು ಮುಖ್ಯ ಅಭ್ಯಾಗತರಾಗಿ ಆಗಮಿಸಿ ಸನ್ಮಾನ ಸ್ವೀಕರಿಸಿ, ವಿದ್ಯಾರ್ಥಿಗಳು ಮುಂದೆ ಗುರಿ; ಹಿಂದೆ ಗುರು ಇದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂದರು.

ಸಂಸ್ಥೆಯ ಉಪಾಧ್ಯಕ್ಷರಾದ ಬಾಲಾಜಿ ಎಸ್. ಅವರು, ಆಡಳಿತ ಮಂಡಳಿಯ ಸದಸ್ಯರುಗಳಾದ ಡಾ. ನಳಿನಿ ಚಂದರ್, ಆರ್.ಎಸ್. ಪ್ರಸನ್ನ, ರಘುರಾಂ ವಾಜಪೇಯಿ ಮತ್ತು ಪ್ರಾಂಶುಪಾಲರಾದ ವೈ.ಆರ್ ರಮೇಶ, ಉಪಪ್ರಾಂಶುಪಾಲರಾದ ಶ್ರೀಮತಿ ಇಂದುಮತಿ ಜಿ.ಕೆ. ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಹಿರಿಯ ಉಪನ್ಯಾಸಕರಾಗಿ 25 ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿದ ವೈ.ಆರ್. ರಮೇಶ್, ಇಂದುಮತಿ ಜಿ.ಕೆ. ಸುಮಾ ಎಸ್., ಚೇತನಾ ಬಿ.ವಿ. ಮತ್ತು ಆಡಳಿತ ಕಛೇರಿಯ ಮುಖ್ಯಸ್ಥರಾದ ನಳಿನಿ ನಾರಾಯಣ ಅವರನ್ನು ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ವತಿಯಿಂದ ವಿಶೇಷವಾಗಿ ಸನ್ಮಾನಿಸಲಾಯಿತು. ಪ್ರಾಂಶುಪಾಲರಾದ ವೈಆರ್. ರಮೇಶ ಸ್ವಾಗತಿಸಿದರು. ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಡಾ. ಕೃಪಾ. ಮಂಜುನಾಥ್ ಎಲ್ಲರನ್ನೂ ವಂದಿಸಿದರು. ಅನಂತರ ವಿದ್ಯಾರ್ಥಿಗಳಿಂದ 'ವಿವಿಧತೆಯಲ್ಲಿ ಏಕತೆಯ ಭಾರತ' ಶೀರ್ಷಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯಾಕರ್ಷಣೀಯವಾಗಿ ನಡೆದವು. ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯೊಂದಿಗೆ ಅಪಾರ ಸಂಚಯ ವಿದ್ಯಾರ್ಥಿಗಳು ಮತ್ತು ಪೋಷಕರು ಉಪಸ್ಥಿತರಿದ್ದರು.

ಖ್ಯಾತ ನೃತ್ಯ ಕಲಾವಿದೆ ವಸುಂಧರಾ ದೊರೆಸ್ವಾಮಿಯವರಿಗೆ 'ನೂಪುರ ಶ್ರೀ' ಪ್ರಶಸ್ತಿ ಪ್ರದಾನ



ಡಾ.ವಸುಂಧರಾ ದೊರೆಸ್ವಾಮಿ ಅವರಿಗೆ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ 'ನೂಪುರ ಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಡಿ.10(ವಿವಿಹೆಚ್)– ಯಾವುದೇ ಕಲೆಯನ್ನು ಪ್ರೀತಿಯಿಂದ ಆರಾಧಿಸಿ, ಪ್ರತಿಫಲಾಪೇಕ್ಷೆ ಇಲ್ಲದೆ ಸೇವೆ ಸಲ್ಲಿಸಿದ್ದಲ್ಲಿ ಆ ಕಲೆ ಒಲಿಯುತ್ತದೆ ಎಂದು ಅಂತಾರಾಷ್ಟ್ರೀಯ ನೃತ್ಯ ಕಲಾವಿದೆ ಡಾ. ವಸುಂಧರಾ ದೊರೆಸ್ವಾಮಿ ಅಭಿಪ್ರಾಯಪಟ್ಟರು.

ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕುವೆಂಪುನಗರದ ಗಾನಭಾರತೀ ಸಭಾಂಗಣದಲ್ಲಿ ಬುಧವಾರ ಆಯೋಜಿಸಲಾಗಿದ್ದ ಶ್ರೀಮತಿ ಕೆ.ವನಜಾಕ್ಷಮ್ಮ ಸಂಸ್ಮರಣಾ 30ನೇ ನೃತ್ಯ ಆರಾಧನಾ ಹಾಗೂ 'ನೂಪುರ ಶ್ರೀ' ಪ್ರಶಸ್ತಿ ಪ್ರದಾನ–2025 ಕಾರ್ಯಕ್ರಮದಲ್ಲಿ 'ನೂಪುರ ಶ್ರೀ' ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ತಮ್ಮೆಲ್ಲಾ ಕೆಲಸದ ಒತ್ತಡಗಳನ್ನು ದಾಟಿ ವೃತ್ತಿಯೊಂದಿಗೆ ಪ್ರವೃತ್ತಿಯಾಗಿ ಗಂಡು ಮಕ್ಕಳು ಇಂದು ನೃತ್ಯ ಕಲಾಕ್ಷೇತ್ರದಲ್ಲಿ ತೊಡಗಿಸಿಕೊಳ್ಳುತ್ತಿರುವುದು ಶ್ಲಾಘನೀಯ. ಹೆಣ್ಣುಮಕ್ಕಳು ಭರತನಾಟ್ಯವನ್ನು ಮಾಡುವುದು ಲೆಕ್ಕವಿಲ್ಲ. ಆದರೆ ಗಂಡು ಮಕ್ಕಳು ಮುಂದೆ ಬಂದು ಕಲೆಯನ್ನು ಉಳಿಸುವ ಕೆಲಸ ಮಾಡುತ್ತಿದ್ದಾರೆ. ಆದರೆ ಇವರಿಗೆ ವೇದಿಕೆಗಳ ಕೊರತೆಯಿದೆ ಎಂದು ತಿಳಿಸಿದರು.

ಕಲಾ ಪೋಷಣೆ, ಕಲಾ ರಕ್ಷಣೆಗೆ ಹೆಸರಾಗಿರುವ ಮೈಸೂರಿಗೆ ಸಾಂಸ್ಕೃತಿಕ ನಗರಿ ಎಂದೂ ಹೆಸರಿದೆ. ಮೈಸೂರಿನ ಪ್ರತಿಭೆಗಳು ರಾಜ್ಯ, ದೇಶ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುವ ಮೂಲಕ ನೃತ್ಯ ಕ್ಷೇತ್ರವನ್ನು ಶ್ರೀಮಂತವಾಗಿ ಬೆಳೆಯುವಂತೆ ಮಾಡಿ, ಅದರ ಘನತೆಯನ್ನು ಹೆಚ್ಚಿಸಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ನೂಪುರ ಕಲಾವಿದರು ಟ್ರಸ್ಟ್ ವ್ಯವಸ್ಥಾಪಕ ಟ್ರಸ್ಟಿ ಕೆ. ರಾಮಮೂರ್ತಿರಾವ್ ಮಾತನಾಡಿ, ಕಳೆದ ಆರು ದಶಕಗಳಿಂದಲೂ ನೃತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಾವಿರಾರು ಶಿಷ್ಯರನ್ನು ತಯಾರಿ ಮಾಡಿರುವ ಡಾ.ವಸುಂಧರಾ ದೊರೆಸ್ವಾಮಿ ಅವರಿಗೆ ಮುಂದಿನ ಗಣರಾಜ್ಯೋತ್ಸವ ದಿನಾಚರಣೆ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ದೊರೆಯಲಿ ಎಂದರು.

ಇದೇ ವೇಳೆ ಅಂತಾರಾಷ್ಟ್ರೀಯ ನೃತ್ಯ ಕಲಾವಿದರಾದ ಡಾ.ವಸುಂಧರಾ ದೊರೆಸ್ವಾಮಿ ಅವರಿಗೆ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ 'ನೂಪುರ ಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೊತೆಗೆ ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ಸನ್ಮಾನಿಸಲಾಯಿತು. ವಿದ್ವಾನ್ ಕೆ. ಆರ್.ವಿಶ್ವದೀಪ್ ಅವರಿಂದ ಏಕ ವ್ಯಕ್ತಿ ಭರತನಾಟ್ಯ ಪ್ರದರ್ಶನ ನಡೆಯಿತು.

ವಿಜಯವಿಠಲ ವಿದ್ಯಾ ಸಂಸ್ಥೆ ಕಾರ್ಯದರ್ಶಿ ಆರ್.ವಾಸುದೇವ್ ಭಟ್, ಟ್ರಸ್ಟಿ ಲತಾ ರಾಮಮೂರ್ತಿ ರಾವ್, ಭುವನೇಶ್ವರಿ ಉಪಸ್ಥಿತರಿದ್ದರು.

ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಕೋಟ್ಯಾಂತರ ಜನರ ಬದುಕಿನಲ್ಲಿ ಬದಲಾವಣೆ

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ



ಬೆಳಗಾವಿ, ಡಿ.10– ಗ್ಯಾರಂಟಿ ಯೋಜನೆಗಳ ಮೂಲಕ ನಾಗರಿಕರಿಗೆ ನೇರವಾಗಿ ಹಣ ವರ್ಗಾವಣೆಯಿಂದ ಅವರ ಬದುಕು ಬಹಳಷ್ಟು ಚೇತರಿಕೆ ಕಂಡಿದ್ದು, ಕೆಲವರು ಸ್ವಾವಲಂಬಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಐದು ಗ್ಯಾರಂಟಿ ಯೋಜನೆಗಳ ಮೂಲಕ ಇದುವರೆಗೆ ಒಟ್ಟು 1.08 ಲಕ್ಷ ಕೋಟಿ ರೂ. ನೇರವಾಗಿ ಜನರ ಖಾತೆಗಳಿಗೆ ತಲುಪಿದೆ ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಹೇಳಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕತೆಯನ್ನು ಹಾಳು ಮಾಡುತ್ತಿವೆ ಮತ್ತು ಅಭಿವೃದ್ಧಿಗೆ ಅಡ್ಡಿಯಾಗುತ್ತಿವೆ ಎಂಬ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ಟೀಕೆಗೆ, ದಿನೇಶ್ ಗೂಳಿಗೌಡ ಅವರು ಅಂಕಿ–ಅಂಶಗಳ ಸಮೇತ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಅಲ್ಲದೆ, ಗ್ಯಾರಂಟಿ ಯೋಜನೆಗಳ ಯಶಸ್ಸು ಮತ್ತು ಅವುಗಳಿಂದ ಕೋಟ್ಯಾಂತರ ಜನರ ಬದುಕಿನಲ್ಲಿ ಆದ ಬದಲಾವಣೆಯನ್ನು ಒತ್ತಿ ಹೇಳಿದ್ದಾರೆ.

ಶಕ್ತಿ ಯೋಜನೆ: ಮಹಿಳೆಯರು ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಿದ ನಂತರ, ಈವರೆಗೆ ರೂ. 15,951.31 ಕೋಟಿ ಮೌಲ್ಯದ 618 ಕೋಟಿಗೂ ಹೆಚ್ಚು ಅನ್ನಭಾಗ್ಯ ಉಚಿತ ಟಿಕೆಟ್‌ಗಳನ್ನು ಮಹಿಳೆಯರು ಪಡೆದುಕೊಂಡಿದ್ದಾರೆ.

ಗೃಹಜ್ಯೋತಿ ಯೋಜನೆಯಡಿ 167 ಕೋಟಿ ಮನೆಗಳಿಗೆ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಅನ್ನಭಾಗ್ಯ ಯೋಜನೆಯಡಿ 1 ಕೋಟಿ 53 ಲಕ್ಷ ಪಡಿತರ ಚೀಟಿಗಳಿದ್ದು, 5 ಕೋಟಿ 42 ಲಕ್ಷ ಫಲಾನುಭವಿಗಳು ಈ ಯೋಜನೆಯಡಿ ಪ್ರತಿ ತಿಂಗಳು ತಲಾ 10 ಕೆಜಿ ಅಕ್ಕಿ ಪಡೆಯುತ್ತಿದ್ದಾರೆ.

ಯುವನಿಧಿ: 2.84 ಲಕ್ಷ ನಿರುದ್ಯೋಗಿ ಪದವೀಧರರು ಮತ್ತು ಡಿಪ್ಲೊಮಾ ಹೊಂದಿದ ಯುವಕರು ಮಾಸಿಕ ಭತ್ಯೆಯನ್ನು ಪಡೆಯುತ್ತಿದ್ದಾರೆ. ಯೋಜನೆಯಡಿ ಈವರೆಗೆ 757 ಕೋಟಿಗೂ ಹೆಚ್ಚು ನೆರವು ನೀಡಲಾಗಿದೆ. ಮಹಿಳೆಯರ ಸ್ವಾವಲಂಬನೆ ಮತ್ತು ಜೀವನದ ಬದಲಾವಣೆ ಗ್ಯಾರಂಟಿಗಳಿಂದ ಅಭಿವೃದ್ಧಿ ಕುಂಠಿತವಾಗಿದೆ ಎಂಬ ಟೀಕೆ ಸತ್ಯಕ್ಕೆ ದೂರವಾಗಿದೆ. ವಾಸ್ತವವಾಗಿ, ಗ್ಯಾರಂಟಿ ಯೋಜನೆಗಳು, ವಿಶೇಷವಾಗಿ ಶಕ್ತಿ ಮತ್ತು ಗೃಹಲಕ್ಷ್ಮಿ ಯೋಜನೆಗಳು, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಮಹಿಳೆಯರ ಬದುಕನ್ನು ಸಂಪೂರ್ಣವಾಗಿ ಬದಲಾಯಿಸಿವೆ.

ಗೃಹಲಕ್ಷ್ಮಿಯಿಂದ ಪ್ರತಿ ತಿಂಗಳು ನೇರವಾಗಿ ರೂ. 2,000 ಹಣ ಪಡೆಯುತ್ತಿರುವುದರಿಂದ, ಮಹಿಳೆಯರು ಸಣ್ಣ ಉಳಿತಾಯ ಮಾಡಲು, ಮಕ್ಕಳ ಶಿಕ್ಷಣಕ್ಕೆ ಹಣ ವಿನಿಯೋಗಿಸಲು ಮತ್ತು ಸಣ್ಣ ಗೃಹ ಕೈಗಾರಿಕೆಗಳನ್ನು ಪ್ರಾರಂಭಿಸಲು ಸಾಧ್ಯವಾಗುತ್ತಿದೆ. ಇದು ಅವರ ಸ್ವಾವಲಂಬನೆಗೆ ದೊಡ್ಡ ಬಲ ನೀಡಿದೆ.

ಶಕ್ತಿ ಯೋಜನೆಯಿಂದ ಉಚಿತ ಪ್ರಯಾಣಕ್ಕೆ ಅವಕಾಶ ಸಿಕ್ಕಿರುವುದರಿಂದ, ಮಹಿಳೆಯರು ಕೆಲಸ, ವ್ಯಾಪಾರ, ಶಿಕ್ಷಣ, ಮತ್ತು ವೈಯಕ್ತಿಕ ಅಗತ್ಯಗಳಿಗಾಗಿ ಮುಕ್ತವಾಗಿ ಪ್ರಯಾಣಿಸುತ್ತಿದ್ದಾರೆ. ಇದರಿಂದ ಅವರ ಶ್ರಮದ ಹಣ ಉಳಿತಾಯವಾಗಿದ್ದು, ಇದು ಆರ್ಥಿಕ ವ್ಯವಸ್ಥೆಗೆ ಚೈತನ್ಯ ನೀಡಿದೆ.

ಈ ಯೋಜನೆಗಳು ಜನರಿಗೆ ನೇರವಾಗಿ ಆರ್ಥಿಕ ನೆರವು ನೀಡಿ ಅವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿವೆ. ಇದರಿಂದಾಗಿ ಸ್ಥಳೀಯ ಮಾರುಕಟ್ಟೆಗಳು ಮತ್ತು ಗ್ರಾಮೀಣ ಆರ್ಥಿಕತೆಗೆ ಪುನಶ್ಚೇತನ ಸಿಕ್ಕಿದ್ದು, ಜನರ ಬದುಕು ಉಳಿದಿದೆ ಎಂದು ದಿನೇಶ್ ಗೂಳಿಗೌಡ ಅವರು ಪ್ರತ್ಯುತ್ತರ ನೀಡಿದ್ದಾರೆ.

ದೇಶ - ವಿದೇಶ

ಮಹಿಳೆ ಕೊಲೆ: ಭಾರತ ಮೂಲದ ವ್ಯಕ್ತಿಗೆ ಆಸ್ಟ್ರೇಲಿಯಾದಲ್ಲಿ 25 ವರ್ಷ ಜೈಲು

ಕ್ಯಾನ್‌ಬೆರಾ: 2018 ರಲ್ಲಿ ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌ನ ಬೀಚ್‌ನಲ್ಲಿ 24 ವರ್ಷದ ಮಹಿಳೆಯ ಕೊಲೆ ಪ್ರಕರಣದಲ್ಲಿ ಭಾರತ ಮೂಲದ ವ್ಯಕ್ತಿಗೆ 25 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಟೊಯಾ ಕಾರ್ಡಿಂಗ್ಲಿ ಎಂಬುವವರನ್ನು ಕೊಂದ ಆರೋಪದಲ್ಲಿ ಮಾಜಿ ನರ್ಸ್ ರಾಜ್‌ವಿಂದರ್ ಸಿಂಗ್ (41) ಅವರನ್ನು ಕೈರ್ನ್ಸ್‌ನ ಸುಪ್ರೀಂಕೋರ್ಟ್ ತಪ್ಪಿತಸ್ಥರೆಂದು ಘೋಷಿಸಿದೆ.

2018ರ ಅ.21 ರಂದು ಕೈರ್ನ್ಸ್‌ನ ಉತ್ತರದಲ್ಲಿರುವ ವಾಂಗೆಟ್ಟಿ ಬೀಚ್‌ನಲ್ಲಿ ತನ್ನ ನಾಯಿಯನ್ನು ಕರೆದುಕೊಂಡು ಹೋಗುತ್ತಿದ್ದಾಗ ಸಿಂಗ್ ಕಾರ್ಡಿಂಗ್ಲಿಯನ್ನು ಈತ ಕೊಂದಿದ್ದ ಎಂದು ದಿ ಗಾರ್ಡಿಯನ್ ವರದಿ ಮಾಡಿದೆ. ಕೊಲೆಯ ನಂತರ ಸಿಂಗ್ ತಮ್ಮ ಪತ್ನಿ, ಮಕ್ಕಳು ಮತ್ತು ಪೋಷಕರನ್ನು ಆಸ್ಟ್ರೇಲಿಯಾದಲ್ಲಿಯೇ ಬಿಟ್ಟು ಭಾರತಕ್ಕೆ ತೆರಳಿದ್ದ.

ಆತನ ಬಗ್ಗೆ ಮಾಹಿತಿ ನೀಡಿದವರಿಗೆ ಕ್ವೀನ್ಸ್‌ಲ್ಯಾಂಡ್ ಪೊಲೀಸರು 1 ಮಿಲಿಯನ್ ಆಸ್ಟ್ರೇಲಿಯಾ ಡಾಲರ್ ಬಹುಮಾನ ನೀಡುವುದಾಗಿ ಘೋಷಿಸಿದ ನಂತರ ಎರಡು ವರ್ಷಗಳ ಹಿಂದೆ ಆತನನ್ನು ಭಾರತದಿಂದ ಗಡಿಪಾರು ಮಾಡಲಾಗಿತ್ತು ಎಂದು ವರದಿ ತಿಳಿಸಿದೆ.

ವೀರ ಸಾವರ್ಕರ್ ಪ್ರಶಸ್ತಿಗೆ ಶಶಿ ತರೂರ್ ಆಯ್ಕೆ



ತಿರುವನಂತಪುರಂ, ಡಿ.10– ಕಾಂಗ್ರೆಸ್ ನಾಯಕ ಹಾಗೂ ತಿರುವನಂತಪುರಂ ಸಂಸದ ಶಶಿ ತರೂರ್ ಅವರಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸಿದ್ಧಾಂತವಾದಿ ವೀರ ಸಾವರ್ಕರ್ ಅವರ ಹೆಸರಿನ ಪ್ರಶಸ್ತಿಯನ್ನು ನೀಡುವುದಾಗಿ ಎಚ್‌ಆರ್‌ಡಿಎಸ್ ಇಂಡಿಯಾ ಎಂಬ ಎನ್‌ಜಿಒ ಘೋಷಿಸಿದೆ.

ತರೂರ್ ಅವರು ಪ್ರಶಸ್ತಿಯನ್ನು ಸ್ವೀಕರಿಸುವುದಿಲ್ಲ ಅಥವಾ ಸಮಾರಂಭದಲ್ಲಿ ಭಾಗವಹಿಸುವುದಿಲ್ಲ ಎಂದು ಅವರ ಕಚೇರಿ ಸ್ಪಷ್ಟಪಡಿಸಿದೆ. ಈ ವಿಷಯ ನಮ್ಮ ಗಮನಕ್ಕೆ ಬಂದಿಲ್ಲ, ನಮ್ಮ ಒಪ್ಪಿಗೆಯಿಲ್ಲದೆ ಈ ಘೋಷಣೆ ಮಾಡಲಾಗಿದೆ ಎಂದು ತಿಳಿಸಿದೆ.

ಸಂಸದ ಶಶಿ ತರೂರ್ ಸೇರಿದಂತೆ ಪಕ್ಷದ ಯಾವ ಸದಸ್ಯರು ವೀರ ಸಾವರ್ಕರ್ ಅವರ ಹೆಸರಿನಲ್ಲಿ ನೀಡುವ ಯಾವುದೇ ಪ್ರಶಸ್ತಿಯನ್ನು ಸ್ವೀಕರಿಸಬಾರದು ಎಂದು ಕಾಂಗ್ರೆಸ್ ಮುಖಂಡ ಕೆ. ಮುರಳೀಧರನ್ ಬುಧವಾರ ಹೇಳಿದ್ದಾರೆ. ಬ್ರಿಟಿಷರ ಮುಂದೆ ತಲೆಬಾಗಿದವರ ಹೆಸರಿನಲ್ಲಿ ನೀಡುವ ಪ್ರಶಸ್ತಿ ಸ್ವೀಕರಿಸುವುದು ಸರಿಯಲ್ಲ ಎಂದಿದ್ದಾರೆ.

ತರೂರ್ ಅವರು ಸಾವರ್ಕರ್ ಹೆಸರಿನ ಪ್ರಶಸ್ತಿಯನ್ನು ಸ್ವೀಕರಿಸುತ್ತಾರೆ ಎಂದು ನಾನು ನಂಬುವುದಿಲ್ಲ. ಅವರು ಪ್ರಶಸ್ತಿ ಸ್ವೀಕರಿಸಿದರೆ ಅದರಿಂದ ಕಾಂಗ್ರೆಸ್ ಮುಜುಗರ ಅನುಭವಿಸುತ್ತದೆ ಎಂದು ಹೇಳಿದ್ದಾರೆ.

ಮೆಹುಲ್ ಚೋಕ್ಸಿ ಭಾರತ ಹಸ್ತಾಂತರಕ್ಕೆ ಬೆಲ್ಜಿಯಂ ಸುಪ್ರೀಂ ಕೋರ್ಟ್ ಅನುಮತಿ



ಬೆಲ್ಜಿಯಂ: 13,850 ಕೋಟಿ ರೂಪಾಯಿ ಹಗರಣದಲ್ಲಿ ಭಾರತದಿಂದ ಪರಾರಿಯಾಗಿರುವ ವಜ್ರ ವ್ಯಾಪಾರಿ ಮೆಹುಲ್ ಚೋಕ್ಸಿ ಅವರನ್ನು ಭಾರತಕ್ಕೆ ಹಸ್ತಾಂತರಿಸುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಬೆಲ್ಜಿಯಂ ಸುಪ್ರೀಂ ಕೋರ್ಟ್ ವಜಾಗೊಳಿಸಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದ ಹಸ್ತಾಂತರ ವಿನಂತಿಯನ್ನು ಜಾರಿಗೊಳಿಸಬಹುದಾಗಿದೆ ಎಂದು ಹೇಳಿದ್ದ ಆಂಟ್ವೆರ್ಪ್ ಮೇಲ್ಮನವಿ ನ್ಯಾಯಾಲಯದ ಅ.17 ರ ಆದೇಶವನ್ನು ಪ್ರಶ್ನಿಸಿ ಚೋಕ್ಸಿ ಅ.30 ರಂದು ಬೆಲ್ಜಿಯಂನ ಉನ್ನತ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ. ಕ್ಯಾಸೇಶನ್ ನ್ಯಾಯಾಲಯದ ವಕ್ತಾರ ಅಡ್ವೊಕೇಟ್–ಜನರಲ್ ಹೆನ್ರಿ ವಾಂಡರ್ಲಿಂಡೆನ್, ಕ್ಯಾಸೇಶನ್ ನ್ಯಾಯಾಲಯವು ಮೇಲ್ಮನವಿಯನ್ನು ತಿರಸ್ಕರಿಸಿದೆ. ಆದ್ದರಿಂದ, ಮೇಲ್ಮನವಿ ನ್ಯಾಯಾಲಯದ ನಿರ್ಧಾರವು ಮಾನ್ಯವಾಗಿದೆ ಎಂದು ಹೇಳಿದರು.

ಮುಂಬೈ ವಿಶೇಷ ನ್ಯಾಯಾಲಯವು ಮೇ 2018 ಮತ್ತು ಜೂನ್ 2021 ರಲ್ಲಿ ಹೊರಡಿಸಿದ ಬಂಧನ ವಾರಂಟ್‌ಗಳಲ್ಲಿ ಯಾವುದೇ ಅಕ್ರಮವಿಲ್ಲ ಎಂದು ಹೇಳಿದೆ. ಅವುಗಳನ್ನು ಜಾರಿಗೊಳಿಸಬಹುದಾಗಿದೆ ಎಂದು ತೀರ್ಪು ನೀಡಿದ್ದು ಚೋಕ್ಸಿಯ ಹಸ್ತಾಂತರಕ್ಕೆ ದಾರಿ ಮಾಡಿಕೊಟ್ಟಿತು.

82 ಲಕ್ಷ ರೂ ಬಹುಮಾನ ಘೋಷಿಸಲಾಗಿದ್ದ 11 ನಕ್ಸಲೀಯರ ಶರಣಾಗತಿ



ಗಡ್ಚಿರೋಲಿ: ಮಹಾರಾಷ್ಟ್ರದ ಗಡ್ಚಿರೋಲಿ ಜಿಲ್ಲೆಯಲ್ಲಿ 82 ಲಕ್ಷ ರೂ. ಬಹುಮಾನ ಘೋಷಿಸಲಾಗಿದ್ದ 11 ಹಿರಿಯ ನಕ್ಸಲೀಯರು ಬುಧವಾರ ಪೊಲೀಸರಿಗೆ ಶರಣಾಗಿದ್ದಾರೆ. ಸುಕ್ಮಾ ಪೊಲೀಸ್ ಮಹಾನಿರ್ದೇಶಕ ರಶ್ಮಿ ಶುಕ್ಲಾ ಅವರ ಮುಂದೆ ನಕ್ಸಲೀಯರು ಶರಣಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿಜಿಪಿ ಮುಂದೆ ಶಸ್ತ್ರಾಸ್ತ್ರ ತ್ಯಜಿಸಿ ಶರಣಾದಾಗ ಅವರಲ್ಲಿ ನಾಲ್ವರು ಸಮವಸ್ತ್ರದಲ್ಲಿದ್ದರು. ಹೆಚ್ಚಿನ ಸಂಖ್ಯೆಯ ನಕ್ಸಲೀಯರು ಪೊಳ್ಳು ನಕ್ಸಲ್ ಸಿದ್ಧಾಂತದಿಂದ ಭ್ರಮನಿರಸನಗೊಂಡಿದ್ದು, ಜನರ ವಿರುದ್ಧ ಬುದ್ಧಿಹೀನ ಹಿಂಸಾಚಾರದಿಂದ ಹತಾಶೆಗೊಂಡಿದ್ದಾರೆ. 2005 ರಿಂದ ಮಹಾರಾಷ್ಟ್ರ ಸರ್ಕಾರ ಜಾರಿಗೊಳಿಸಿದ ಶರಣಾಗತಿ ಮತ್ತು ಪುನರ್ವಸತಿ ನೀತಿಗೆ ಆಕರ್ಷಿತರಾಗಿದ್ದಾರೆ ಎಂದು ಹೇಳಲಾಗಿದೆ. ಗಡ್ಚಿರೋಲಿ ಪೊಲೀಸರು ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆಗಳ ಸಂಘಟಿತ ಪ್ರಯತ್ನದಿಂದಾಗಿ ಜಿಲ್ಲೆಯಲ್ಲಿ ಈ ವರ್ಷ 112 ನಕ್ಸಲೀಯರು ಶರಣಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರೈಲಿನಲ್ಲಿ ನಿದ್ದೆಗೆ ಜಾರಿದ ವ್ಯಾಪಾರಿ; 5.53 ಕೋಟಿ ಮೌಲ್ಯದ ಚಿನ್ನಾಭರಣ ಕಳವು

ಮುಂಬೈ: ಮುಂಬೈ ಮೂಲದ ಚಿನ್ನದ ವ್ಯಾಪಾರಿಯೊಬ್ಬರು ಸೋಲಾಪುರದಿಂದ ರಾಜ್ಯ ರಾಜಧಾನಿಗೆ ರೈಲು ಪ್ರಯಾಣ ಮಾಡುವಾಗ ನಿದ್ರೆಗೆ ಜಾರಿದ ನಂತರ ಅವರ ಬಳಿ ಇದ್ದ 5.53 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಆಭರಣಗಳನ್ನು ಕಳವು ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿ.6 ಮತ್ತು 7ರ ಮಧ್ಯರಾತ್ರಿ ಚಿನ್ನದ ವ್ಯಾಪಾರಿ ಸಿದ್ಧೇಶ್ವರ ಎಕ್ಸ್‌ಪ್ರೆಸ್ ರೈಲಿನಲ್ಲಿ ಸೋಲಾಪುರದಿಂದ ಮುಂಬೈಗೆ ಪ್ರಯಾಣಿಸುತ್ತಿದ್ದಾಗ ವ್ಯಾಪಾರಿ ಎರಡು ಟ್ರಾಲಿ ಬ್ಯಾಗ್‌ಗಳನ್ನು ಸರಪಳಿಯಿಂದ ಭದ್ರಪಡಿಸಿಕೊಂಡು ತನ್ನ ಸೀಟಿನ ಕೆಳಗೆ ಇಟ್ಟಿದ್ದರು. ಅವರು ನಿದ್ರಿಸುತ್ತಿದ್ದಾಗ ಕಳ್ಳನೊಬ್ಬ ಸರಪಳಿ ಮುರಿದು, ಎರಡೂ ಬ್ಯಾಗ್‌ಗಳನ್ನು ಕದ್ದು, ಸೋಲಾಪುರ ಮತ್ತು ಕಲ್ಯಾಣ್(ಥಾಣೆ ಜಿಲ್ಲೆಯಲ್ಲಿ) ನಡುವೆ ಬೆಲೆಬಾಳುವ ವಸ್ತುಗಳೊಂದಿಗೆ ಪರಾರಿಯಾಗಿದ್ದಾನೆ ಎಂದು ಆರೋಪಿಸಲಾಗಿದೆ. ವ್ಯಾಪಾರಿ ಎಚ್ಚರವಾದಾಗ ಎರಡೂ ಬ್ಯಾಗ್‌ಗಳು ಕಾಣೆಯಾಗಿರುವುದು ಬೆಳಕಿಗೆ ಬಂದಿದೆ.

ಕಲ್ಯಾಣ್ ಜಿಆರ್‌ಪಿಯ ಹಿರಿಯ ಇನ್ಸ್‌ಪೆಕ್ಟರ್ ಪಂಢರಿ ಕಾಂಡೆ ಮಾಧ್ಯಮದ ಜೊತೆ ಮಾತನಾಡಿ, ನಾವು ಎಫ್‌ಐಆರ್ ದಾಖಲಿಸಿ, ತನಿಖೆ ಪ್ರಾರಂಭಿಸಿದ್ದೇವೆ. ವ್ಯಾಪಾರಿ ನಿದ್ರೆಗೆ ಜಾರಿದ್ದನ್ನು ನೋಡಿಕೊಂಡು ಆರೋಪಿ ಚಿನ್ನದ ಆಭರಣಗಳಿದ್ದ ಚೀಲಗಳೊಂದಿಗೆ ಪರಾರಿಯಾಗಿದ್ದಾನೆ ಎಂದಿದ್ದಾರೆ.

ಭಗಂಡೇಶ್ವರ ದೇವಾಲಯದ ಬಳಿ ಕಟ್ಟಡ ಕಾಮಗಾರಿ ಸ್ಥಗಿತಕ್ಕೆ ಆಗ್ರಹ


ಭಗಂಡೇಶ್ವರ ದೇವಾಲಯದ ಬಳಿ ಕಟ್ಟಡ ಕಾಮಗಾರಿ ನಡೆಯುತ್ತಿರುವುದು.

ನಾಪೋಕ್ಲು, ಡಿ.10(ದುಗ್ಗಳ)– ದಕ್ಷಿಣದ ಪ್ರಯಾಗ ಎನಿಸಿರುವ ಭಾಗಮಂಡಲದ ಭಗಂಡೇಶ್ವರ ದೇವಾಲಯದ ಬಳಿ ಅಂಗಡಿ ಮಳಿಗೆಗಳು ಹಾಗೂ ವಸತಿಗೃಹ ಸಮುಚ್ಚಯ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಕಾಮಗಾರಿಯನ್ನು ಕೂಡಲೆ ಸ್ಥಗಿತಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಪಡಿಸಿದ್ದಾರೆ.

ದೇವಾಲಯದ ಸಮೀಪ ಕನ್ನಿಕಾ ನದಿ ಹರಿಯುತ್ತಿದ್ದು ಇದು ಪವಿತ್ರ ಕಾವೇರಿ ನದಿಯನ್ನು ಸಂಗಮಿಸಿ ತ್ರಿವೇಣಿ ಸಂಗಮವಾಗಿದೆ. ತ್ರಿವೇಣಿ ಸಂಗಮ ಭಾಗಮಂಡಲದ ಪವಿತ್ರ ಕ್ಷೇತ್ರವಾಗಿದ್ದು, ಭಕ್ತಾದಿ ಗಳಿಗೆ ಧಾರ್ಮಿಕ ತಾಣವಾಗಿ ಶ್ರದ್ಧಾ ಭಕ್ತಿಯ ಕೇಂದ್ರವಾಗಿದೆ. ಇದೀಗ ಪವಿತ್ರ ಕ್ಷೇತ್ರದಲ್ಲಿ ಕಟ್ಟಡ ಸಮುಚ್ಚಯ ನಿರ್ಮಾಣಗೊಳ್ಳುತ್ತಿದ್ದು, ಇದರಿಂದ ದೇವಾಲಯದ ಪಾವಿತ್ರತೆಗೆ ಧಕ್ಕೆಯಾಗಲಿದ್ದು ಪರಿಸರ ಮಾಲಿನ್ಯ ಗೊಳ್ಳಲಿದೆ ಎಂಬ ಆತಂಕದಿಂದ ಸಾರ್ವಜನಿಕರಲ್ಲಿ ವಿರೋಧ ವ್ಯಕ್ತವಾಗಿದೆ.

ಭಗಂಡೇಶ್ವರ, ತಲಕಾವೇರಿ ವ್ಯವಸ್ಥಾಪನ ಸಮಿತಿಯ ಮಾಜಿ ಅಧ್ಯಕ್ಷ ಅಪ್ಪಚೆಟ್ಟೋಳಂಡ ಮನುಮುತ್ತಪ್ಪ ಮಾತನಾಡಿ ದೇವಾಲಯಕ್ಕೆ ಹೊಂದಿಕೊಂಡಂತೆ ನಿರ್ಮಾಣಗೊಳ್ಳುತ್ತಿರುವ ಕಟ್ಟಡ ಸಮುಚ್ಚಯದಿಂದ 10–15 ಮೀಟರ್ ದೂರದಲ್ಲಿ ಕನ್ನಿಕಾ ನದಿ ಹರಿಯುತ್ತಿದ್ದು ಗಲೀಜು ನೀರು ಕನ್ನಿಕಾ ನದಿಯ ಪವಿತ್ರತೆಗೆ ಧಕ್ಕೆ ತರಲಿದೆ. ಕಟ್ಟಡಗಳ ನಿರ್ಮಾಣದಿಂದ ದೇವಸ್ಥಾನದ ಸೌಂದರ್ಯಕ್ಕೆ ಧಕ್ಕೆಯಾಗಲಿದೆ. ಕೂಡಲೇ ಕಾಮಗಾರಿಯನ್ನು ಸ್ಥಗಿತಗೊಳಿಸಿ ಜನರ ಅಭಿಪ್ರಾಯ ಸಂಗ್ರಹಿಸುವಂತೆ ಒತ್ತಾಯಿಸಿದರು.


ಭಾಗಮಂಡಲ ಗ್ರಾಪಂ ಅಧ್ಯಕ್ಷ ಕಾಳನ ರವಿ ಮಾತನಾಡಿ ಪಂಚಾಯಿತಿಯ ಗಮನಕ್ಕೆ ಬಾರದೆ ಕಾಮಗಾರಿ ಮಾಡಲಾಗುತ್ತಿದೆ, ಕಟ್ಟಡಗಳ ನಿರ್ಮಾಣದಿಂದ ಇಕ್ಕಟ್ಟಿನ ಪರಿಸ್ಥಿತಿ ನಿರ್ಮಾಣವಾಗಿದೆ. ಆಡಳಿತ ಅಧಿಕಾರಿ ಈ ಬಗ್ಗೆ ಸೂಕ್ತ ಉತ್ತರ ನೀಡುತ್ತಿಲ್ಲ ಎಲ್ಲವನ್ನು ಜಿಲ್ಲಾಧಿಕಾರಿಗಳೇ ನಿರ್ವಹಿಸುತ್ತಾರೆ ಎಂದಿದ್ದಾರೆ. ಈ ಹಿಂದೆ ದೇವಾಲಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ರಾಶಿ ಪ್ರಶ್ನೆಗಳನ್ನು ಇಟ್ಟು ಜ್ಯೋತಿಷ್ಯ ಮೂಲಕ ಅಭಿವೃದ್ಧಿ ಕಾರ್ಯ ಮಾಡಲಾಗುತ್ತಿತ್ತು. ಅದರಂತೆ ಸಾಧಕ ಬಾಧಕಗಳ ಬಗ್ಗೆ ಉತ್ತರ ಪಡೆದು ಮುಂದುವರೆಯಬೇಕು

ಸಾಮಾಜಿಕ ಹೋರಾಟಗಾರ ಕುದುಕುಳಿ ಭರತ್, ಭಾಗಮಂಡಲ ಸಹಕಾರಿ ಸಂಘದ(ವಿಎಸ್‌ಎಸ್‌ಎನ್) ಅಧ್ಯಕ್ಷ ಹೊಸೂರು ಸತೀಶ್ ಕುಮಾರ್ ಜೋಯಪ್ಪ, ಜಿಪಂ ಮಾಜಿ ಸದಸ್ಯ ರಾಜೀವ್, ಪಟ್ಟಮಾಡ ಸುಧೀರ್ ಕುಮಾರ್, ಅಮೆ ಹರೀಶ್, ನಿಡ್ಯಾಮಲೆ ರವಿ, ಕುದುಪಜೆ ಕುಲದೀಪ್, ಮೂಲೆ ಮಜಲು ಪೂಣಚ್ಚ ಇತರರಿದ್ದರು.

ಪ್ರಧಾನಿ ಬಗ್ಗೆ ಅವಹೇಳನ ವಿಡಿಯೋ ವೈರಲ್; ಮೂವರ ಬಂಧನ


ಫಹಾದ್ ಎಂ.ಈ.


ಎಂ.ಹೆಚ್.ಬಶೀಲ್


ಎಂ.ಎಂ.ಸಮೀರ್

ಮಡಿಕೇರಿ, ಡಿ.10–ಪ್ರಧಾನಿ ನರೇಂದ್ರ ಮೋದಿ ಅವರನ್ನು ಕುರಿತು ಅವಹೇಳನಕಾರಿ ಸಂಭಾಷಣೆಗಳಿರುವ ವಿಡಿಯೋ ವೈರಲ್ ಮಾಡಿದ ಆರೋಪಕ್ಕೊಳಗಾಗಿದ್ದ ಮೂವರನ್ನು ನಗರ ಪೊಲೀಸರು ಬಂಧಿಸಿದ್ದಾರೆ. ಮತ್ತೋರ್ವ ಆರೋಪಿ ಪರಾರಿಯಾಗಿದ್ದು, ಆತನ ಪತ್ತೆಗಾಗಿ ಕ್ರಮ ಕೈಗೊಳ್ಳಲಾಗಿದೆ.

ಕೆಎಸ್‌ಆರ್‌ಟಿಸಿ ಬಸ್ ಡಿಪೋ ಮುಂಭಾಗದ ಸ್ಪೈಸಸ್ ಒಂದರಲ್ಲಿ ಕೆಲಸ ಮಾಡುತ್ತಿದ್ದ ನಗರದ ರಾಣಿಪೇಟೆ ನಿವಾಸಿ ಎಂ.ಈ.ಫಹಾದ್(31), ತ್ಯಾಗರಾಜ ಕಾಲೋನಿಯ ಬಶೀಲ್ ಎಂ.ಹೆಚ್.(29) ಮತ್ತು ಸಮೀರ್ ಎಂ.ಎಂ.(31) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಇವರು ಪ್ರಧಾನಿ ನರೇಂದ್ರ ಮೋದಿ ರಸ್ತೆ, ರೈಲು ವ್ಯವಸ್ಥೆಯನ್ನು ಹಾಳುಗೆಡವಿದ್ದು, ಎನ್.ಆರ್.ಸಿ ಜಾರಿಗೆ ತಂದು ಹಿಂದೂ, ಮುಸಲ್ಮಾನರ ನಡುವೆ ಒಡಕು ಮೂಡಿಸಿದ್ದಾರೆ ಎಂದು ಆರೋಪಿಸಿದ್ದರು. ಮಾತ್ರವಲ್ಲದೇ ಪ್ರಧಾನಿ ಬಗ್ಗೆ ಹೀನಾಯ ಅವಾಚ್ಯ ಪದಗಳನ್ನು ಬಳಕೆ ಮಾಡಿ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟು ವಿಕೃತಿ ಮೆರೆದಿದ್ದಾರೆ. ಸಮಾಜದಲ್ಲಿ ಅಶಾಂತಿ ಸೃಷ್ಟಿಸುವುದಕ್ಕಾಗಿ ಈ ವಿಡಿಯೋ ಚಿತ್ರೀಕರಿಸಿ ವೈರಲ್ ಮಾಡಿರುವ ಕುರಿತು ಶಂಕೆ ಇದ್ದು, ತಕ್ಷಣ ಕಿಡಿಗೇಡಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿ ನಗರ ವೃತ್ತ ನಿರೀಕ್ಷಕ ಪಿ.ಕೆ.ರಾಜು ಅವರಿಗೆ ಜಿಲ್ಲಾ ಬಿಜೆಪಿ ಪ್ರಮುಖರು ದೂರು ಸಲ್ಲಿಸಿದ್ದರು.

ಪ್ರತಿಭಟನೆ : ಘಟನೆಯನ್ನು ಖಂಡಿಸಿರುವ ಬಿಜೆಪಿ ನಾಳೆ (ಡಿ.11) ಪ್ರತಿಭಟನೆಗೆ ಕರೆ ನೀಡಿದೆ. ನಗರದ ಹಳೇ ಖಾಸಗಿ ಬಸ್ ನಿಲ್ದಾಣದಲ್ಲಿ ಬೆಳಗೆ 10.30 ಗಂಟೆಗೆ ಘಟನೆಯನ್ನು ಖಂಡಿಸಿ ಮತ್ತು ಕೃತ್ಯದಲ್ಲಿ ಪಾಲ್ಗೊಂಡ ಇತರರನ್ನು ತಕ್ಷಣವೇ ಬಂಧಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸುವುದಾಗಿ ತಿಳಿಸಿದೆ.

ಡಿ.16ರಿಂದ ಧನುಪೂಜೆ

ಮಡಿಕೇರಿ: ಪುರಾಣ ಪ್ರಸಿದ್ಧ ಸುಳ್ಯ ಸೀಮೆಯ ತೊಡಿಕಾನ ಶ್ರೀಮಲ್ಲಿಕಾರ್ಜುನ ದೇವಾಲಯದಲ್ಲಿ ಡಿ.16ರಿಂದ ಜ.14ರ ವರೆಗೆ ಧನುಪೂಜೆ ನಡೆಯಲಿದೆ.

ಡಿ.16ರಿಂದ ಶ್ರೀ ದೇವಳದಲ್ಲಿ ಎಂದಿನಂತೆ ಎಲ್ಲಾ ಸೇವೆಗಳು ನಡೆಯುವುದಲ್ಲದೆ ಬೆಳಿಗ್ಗೆ 5 ಗಂಟೆಗೆ ಧನುಪೂಜೆ ಜರುಗಲಿದೆ. ಧನುಪೂಜೆಯ ಎಲ್ಲಾ ದಿನಗಳಲ್ಲಿ ಸೀಮೆಯ ಭಜನಾ ತಂಡಗಳಿಂದ ಪೂರ್ವಾಹ್ನ 4 ಗಂಟೆಗೆ ಭಜನಾ ಸೇವೆ ನಡೆಯಲಿದೆ. ಧನುಪೂಜೆ ಮಾಡಿಸುವವರು ರೂ.500 ನೀಡಿ ತಮಗೆ ಬೇಕಾದ ದಿವಸವನ್ನು ಆಯ್ಕೆ ಮಾಡಿಕೊಂಡು ದೇವಾಲಯದ ಕಚೇರಿ ಸಮಯದಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಪೂಜೆಯಲ್ಲಿ ಪಾಲ್ಗೊಳ್ಳುವವರು ಕುಟುಂಬ ಸಮೇತರಾಗಿ ಮುಂಜಾನೆ 4.45 ಗಂಟೆಗೆ ಮೊದಲೇ ದೇವಾಲಯದಲ್ಲಿ ಹಾಜರಿರಬೇಕು.

ಜ.14ರಂದು ಶ್ರೀ ದೇವಳದಲ್ಲಿ ಬೆಳಿಗ್ಗೆ 7 ಗಂಟೆಗೆ ಗಣಪತಿ ಹೋಮ, 9ರಿಂದ ಆಯಿರಕೊಡ ಅಭಿಷೇಕ, ಸಿಯಾಳಾಭಿಷೇಕ, ಶತರುದ್ರಾಭಿಷೇಕ ಹಾಗೂ ರಾತ್ರಿ ರಂಗಪೂಜೆ ಜರುಗಲಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಡಿ.10–ಮಡಿಕೇರಿ ವಿದ್ಯುತ್ ಉಪ ಕೇಂದ್ರದ ಫೀಡರ್‌ನಲ್ಲಿ ಡಿ.11 ರ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಚೈನ್‌ಗೇಟ್, ಪುಟಾಣಿನಗರ, ಸುದರ್ಶನ ವೃತ್ತ, ಜಯನಗರ, ಸಿದ್ದಾಪುರ ರಸ್ತೆ, ಜಿಟಿ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸಿದ್ದಾಪುರ ಗ್ರಾಪಂ ಕಚೇರಿ ಎದುರು ಸಿಪಿಐಎಂ ಪ್ರತಿಭಟನೆ


ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿ.ಪಿ.ಐ.ಎಂ ಪಕ್ಷ ಸಿದ್ದಾಪುರ ಗ್ರಾಮ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಿತು.

ಮಡಿಕೇರಿ, ಡಿ.10–ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿಪಿಐಎಂ ಪಕ್ಷದಿಂದ ಸಿದ್ದಾಪುರ ಗ್ರಾಮ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಸಿದ್ದಾಪುರ ಗ್ರಾಪಂ ವ್ಯಾಪ್ತಿಯ ಕಾಫಿ ತೋಟ ಗಳ ಲೈನ್‌ಮನೆಗಳಲ್ಲಿ ಹಾಗೂ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ಬಡವರು ನಿವೇಶನಕ್ಕಾಗಿ ಪಂಚಾಯಿತಿಗೆ ಅರ್ಜಿ ಸಲ್ಲಿಸಿ ಹಲವು ವರ್ಷಗಳೆ ಕಳೆದರೂ ನಿವೇಶನ ದೊರೆತಿಲ್ಲ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು. ನಿವೇಶನ ರಹಿತ ಕುಟುಂಬಗಳು ಗ್ರಾಪಂಗೆ ನೀಡಿ ರುವ ಅರ್ಜಿಯ ಬಗ್ಗೆ ಗ್ರಾ.ಪಂ. ಆಡಳಿತ ಮಂಡಳಿ ಗಂಭೀರ ವಾಗಿ ಪರಿಗಣಿಸದೆ ನಿರ್ಲಕ್ಷ್ಯ ವಹಿಸುತ್ತಿರುವುದು ಖಂಡನೀಯ ಎಂದರು.

ಗುಹ್ಯ ಗ್ರಾಮದ ಕೂಡುಗದ್ದೆ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ತಕ್ಷಣವೇ ಈ ಸಮಸ್ಯೆ ಬಗೆಹರಿಸಬೇಕು. ಕೂಡುಗದ್ದೆ ಸೇರಿದಂತೆ ಗ್ರಾಮ ವ್ಯಾಪ್ತಿಯ ಹಲವು ರಸ್ತೆಗಳು ಹದಗೆಟ್ಟಿದ್ದು, ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಪಕ್ಷದ ಎನ್.ಡಿ.ಕುಟ್ಟಪ್ಪನ್, ಬೈಜು, ಅನಿಲ್, ಮುಸ್ತಫಾ ಪಾಲ್ಗೊಂಡಿದ್ದರು.

ಪೊನ್ನಚನ ಸುಬ್ಬಯ್ಯ ನಿಧನ



ನಾಪೋಕ್ಲು, ಡಿ.10–ಇಲ್ಲಿಗೆ ಸಮೀಪದ ಬಲಮುರಿ ಗ್ರಾಮದ ನಿವಾಸಿ ಪೊನ್ನಚನ ಸುಬ್ಬಯ್ಯ(85) ವಯೋಸಹಜವಾಗಿ ಮಂಗಳವಾರ ನಿಧನರಾದರು. ಅಂತ್ಯಕ್ರಿಯೆ ಬುಧವಾರ ನೆರವೇರಿತು. ಮೃತರು ಪತ್ನಿ ಹಾಗೂ ಪುತ್ರ, ಪುತ್ರಿ ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.

ಬಿಲ್ಲವರ.ಎಸ್. ಹೊನ್ನಪ್ಪ



ನಾಪೋಕ್ಲು: ಬೇತು ಗ್ರಾಮದ ನಿವಾಸಿ ಬಿಲ್ಲವರ. ಎಸ್. ಹೊನ್ನಪ್ಪ ಚಾಮಿ(67) ಅನಾರೋಗ್ಯದಿಂದ ಬುಧವಾರ ನಿಧನರಾದರು.

ಮೃತರ ಅಂತ್ಯಕ್ರಿಯೆಯು ಗುರುವಾರ ನಾಪೋಕ್ಲುವಿನ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ. ಮೃತರು ಪತ್ನಿ ಹಾಗೂ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.

ಗೀತಾ ರಾಜಪ್ಪ



ನಾಪೋಕ್ಲು : ಇಲ್ಲಿಗೆ ಸಮೀಪದ ಬಲ್ಲಮಾವಟಿ ಗ್ರಾಪಂ ಪೇರೂರು ಗ್ರಾಮದ ಕೀಯಲ್ ಕೇರಿ ನಿವಾಸಿ ಮೂವೇರ ರಾಜಪ್ಪ ಅವರ ಧರ್ಮಪತ್ನಿ, ಗೀತಾ ರಾಜಪ್ಪ(52) ಬುಧವಾರ ಹೃದಯಘಾತದಿಂದ ನಿಧನರಾದರು. ಉತ್ತಮ ಹಗ್ಗಜಗ್ಗಾಟ ಕ್ರೀಡಾಪಟುವಾಗಿದ್ದ ಗೀತಾ ರಾಜಪ್ಪ ಅವರ ಅಂತ್ಯಕ್ರಿಯೆಯು ಗುರುವಾರ ಪೇರೂರು ಗ್ರಾಮದ ಮೂವೇರ ಕುಟುಂಬಸ್ಥರ ರುದ್ರಭೂಮಿಯಲ್ಲಿ ನಡೆಯಲಿದೆ. ಮೃತರು ಪತಿ ಮೂವೇರ ರಾಜಪ್ಪ, ಪುತ್ರಿ ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.

ವನ್ಯಜೀವಿಗಳೊಂದಿಗೆ ಸಹಬಾಳ್ವೆ ಅಗತ್ಯ



ವನ್ಯಜೀವಿ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ. ಶಿವಕುಮಾರ್ ಮಾತನಾಡಿದರು.

ಕುಶಾಲನಗರ, ಡಿ.10–ವನ್ಯಜೀವಿ ಮತ್ತು ಮನುಷ್ಯರು ಸಾಮರಸ್ಯದಿಂದ ಸಹಬಾಳ್ವೆ ನಡೆಸಬೇಕಾಗುತ್ತದೆ. ಸಂಘರ್ಷಕ್ಕೆ ದಾರಿ ಮಾಡಿಕೊಡದೆ ಅವುಗಳ ಮೇಲೆ ಹಗೆ ಸಾಧಿಸದೆ ಬದುಕುವಂತೆ ವನ್ಯಜೀವಿ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಎಂ.ಸಿ. ಶಿವಕುಮಾರ್ ತಿಳಿಸಿದ್ದಾರೆ.

ಖ್ಯಾತ ವನ್ಯಜೀವಿ ಪಶುವೈದ್ಯಕೀಯ ತಜ್ಞ ಡಾ. ಚಿಟ್ಟಿಯಪ್ಪ ತರಬೇತಿಯನ್ನು ಉದ್ಘಾಟಿಸಿ ಸಂಘಜೀವಿಗಳಾದ ಆನೆಗಳು ಮುಖಂಡ ಆನೆ ತೋರಿಸಿದ ಹಾಗೆ ಗುಂಪಾಗಿ ವಲಸೆ ಸ್ಥಳಗಳಿಗೆ ಹೋಗುತ್ತವೆ. ಅವುಗಳ ನೆನಪಿನ ಶಕ್ತಿ ಹೆಚ್ಚು ಬಹಳ ಬುದ್ಧಿವಂತ ಪ್ರಾಣಿಯಾಗಿರುವ ಅವುಗಳ ತಂಟೆಗೆ ಹೋಗಬಾರದು ಎಂದರು. ಅಲ್ಲದೆ ಅರಣ್ಯದಲ್ಲಿನ ತಮ್ಮ ಅನೇಕ ಅನುಭವಗಳನ್ನು ಆನೆ, ಹುಲಿ, ಚಿರತೆ ಹೀಗೆ ವನ್ಯಜೀವಿಗಳ ಒಡನಾಟವನ್ನು ರೈತರೊಂದಿಗೆ ಹಂಚಿಕೊಂಡರು.

ಭಾಗಮಂಡಲದ ಉಪವಲಯ ಅರಣ್ಯಾಧಿಕಾರಿ ಉಮಾಶಂಕರ್ ಮಾತನಾಡಿ, ವರ್ಷದಲ್ಲಿ ಯಾವ ಋತು, ದಿನದಲ್ಲಿ ಯಾವ ಅವಧಿಯಲ್ಲಿ ಸಂಘರ್ಷ ನಡೆಯುತ್ತೆ ಎಂದು ಅಂಕಿ ಅಂಶ ಸಮೇತ ವಿವರಿಸಿ ಎಚ್ಚರಿಕೆ ವಹಿಸಲು ತಿಳಿಸಿದರು. ಇಲಾಖೆಯಿಂದ ಸಂಘರ್ಷ ತಡೆಯಲು ತೆಗೆದುಕೊಂಡಿರುವ ನಡೆಗಳನ್ನು ವಿವರಿಸಿದರು. ಕಂದಕಗಳು, ರೈಲ್ವೆ ಹಳಿಗಳ ತಡೆ, ಬೆಳೆ ಬದಲಾವಣೆ, ಬೀಜಚೆಂಡುಗಳು ಇತ್ಯಾದಿ ಬಗ್ಗೆ ವಿವರಿಸಿ ಬೆಳೆ ಹಾಳು ಮಾಡುವುದನ್ನು ತಡೆಯಲು ಮಾರ್ಗೋಪಾಯಗಳನ್ನು ತಿಳಿಸಿ, ಕಾಡು ಪ್ರಾಣಿಗಳು ಕಣ್ಣಿಗೆ ಬಿದ್ದರೆ ಕೂಡಲೇ ಇಲಾಖೆಯ ಸಹಾಯ ಪಡೆಯುವಂತೆ ಕೋರಿದರು.

ತರಬೇತಿಗೆ 60ಕ್ಕೂ ಹೆಚ್ಚು ಸುತ್ತಮುತ್ತಲಿನ ರೈತರು, ಸಾರ್ವಜನಿಕರು ಭಾಗವಹಿಸಿದ್ದರು ರೈತ ಗೀತೆಯೊಂದಿಗೆ ಪ್ರಾರಂಭವಾಯಿತು ಪ್ರಶಾಂತ ಎಲ್ಲರನ್ನು ಸ್ವಾಗತಿಸಿದರು.



ಪ್ರತಿಭಾ ಕಾರಂಜಿಯಲ್ಲಿ ಪ್ರಥಮ

ಕಕ್ಕಬ್ಬೆ ಕೇಂದ್ರ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಮಿದಿಲಾಜ್ ಪ್ರತಿಭಾ ಕಾರಂಜಿ ವಲಯ ಮಟ್ಟ ಹಾಗೂ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾನೆ.

ಗೌರವಯುತ ಜೀವನಕ್ಕಾಗಿ ಮಾನವ ಹಕ್ಕು ಜಾರಿ


ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಚಾಮರಾಜನಗರ, ಡಿ.10–ಶಾಂತಿ ಸೌಹಾರ್ದ, ಆರೋಗ್ಯಪೂರ್ಣ ಪರಿಸರದಲ್ಲಿ ಗೌರವಯುತ ಜೀವನ ನಡೆಸಲು ಮಾನವ ಹಕ್ಕುಗಳನ್ನು ಜಾರಿಗೆ ತರಲಾಯಿತು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೆ ಕೆಡಿಪಿ ಸಭಾಂಗಣದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ವಿಶ್ವ ಮಾನವ ಹಕ್ಕು ಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾನವ ಹಕ್ಕುಗಳ ರಕ್ಷಣೆ ಎಲ್ಲರ ಆದ್ಯ ಕರ್ತವ್ಯವಾಗಿದೆ. ಮಾನವ ಹಕ್ಕುಗಳ ಉಲ್ಲಂಘನೆಯಾದ ಪಕ್ಷದಲ್ಲಿ ಅಥವಾ ಮಾನವ ಹಕ್ಕುಗಳ ರಕ್ಷಣೆ ಮಾಡಲು ವಿಫಲವಾಗಿರುವ ಸಂದರ್ಭಗಳಲ್ಲಿ ತೊಂದರೆಗೆ ಒಳಗಾದವರು ಅಥವಾ ಅವರ ಪರವಾಗಿ ಯಾರಾದರೂ ಕುಂದು ಕೊರತೆ ಪರಿಹರಿಸಿಕೊಳ್ಳಲು, ನ್ಯಾಯ ದೊರಕಿಸಿಕೊಳ್ಳಲು ಮಾನವ ಹಕ್ಕುಗಳ ಆಯೋಗವನ್ನು ಸಂಪರ್ಕಿಸಿ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸಬಹುದು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾನವ ಹಕ್ಕುಗಳ ಪ್ರತಿಜ್ಞಾವಿಧಿ ಬೋಧಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ಜಿಪಂ ಉಪ ಕಾರ್ಯದರ್ಶಿ ಶೃತಿ ಮತ್ತು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಆಕ್ಸಿಜನ್ ದುರಂತ ಸಂತ್ರಸ್ತರಿಗೆ ಅಂತೂ ಸರ್ಕಾರಿ ಉದ್ಯೋಗದ ಯೋಗ!

ಚಾಮರಾಜನಗರ, ಡಿ.10–ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ 31 ಸಂತ್ರಸ್ಥ ಕುಟುಂಬಗಳಿಗೆ ಖಾಯಂ ಸರ್ಕಾರಿ ಉದ್ಯೋಗ ನೀಡಲು ಪ್ರಕ್ರಿಯೆಗಳು ಆರಂಭವಾಗಿದ್ದು, ಸಂತ್ರಸ್ತ ಕುಟುಂಬಗಳು ದಾಖಲಾತಿ ಸಲ್ಲಿಸುವಂತೆ ನೋಟೀಸ್ ನೀಡಲಾಗಿದೆ. ಇದರಿಂದ ಕೊನೆಗೂ ನಾಲ್ಕು ವರ್ಷಗಳ ನಂತರ ಈ ಕುಟುಂಬಗಳಿಗೆ ಅಂತೂ ಇಂತೂ ನ್ಯಾಯ ದೊರಕಿದಂತಾಗಿದೆ.

ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ 2021ರ ಮೇ 2 ರ ರಾತ್ರಿ ಆಕ್ಸಿಜನ್ ಅವಲಂಬಿತರಾಗಿ ಚಿಕಿತ್ಸೆ ಪಡೆಯುತ್ತಿದ್ದ 36 ರೋಗಿಗಳಿಗೆ ಆಕ್ಸಿಜನ್ ದೊರಕದೆ ಮೃತಪಟ್ಟಿದ್ದರು. ಈಗ 31 ಜನರಿಗೆ ಸರ್ಕಾರಿ ಉದ್ಯೋಗ ನೀಡಲು ಪ್ರಕ್ರಿಯೆಗಳು ಆರಂಭವಾಗಿವೆ. ಇನ್ನೊರ್ವ ಸಂತ್ರಸ್ತರಿಗೆ ಈಗಾಗಲೇ ಸರ್ಕಾರಿ ಉದ್ಯೋಗ ನೀಡಲಾಗಿದೆ. ಇನ್ನು ನಾಲ್ಕು ಕುಟುಂಬಗಳು ಸರ್ಕಾರದ ಪಟ್ಟಿಯಲ್ಲಿ ಇಲ್ಲದ ಕಾರಣ ಅವರಿಗೆ ಉದ್ಯೋಗ ದೊರೆತಿಲ್ಲ.

ಮೂರೇ ದಿನದಲ್ಲಿ ದಾಖಲೆ ನೀಡುವುದು ಕಷ್ಟ

ಸಂತ್ರಸ್ತರನ್ನು ಡಿ.2 ರಂದು ಸಿಮ್ಸ್‌ಗೆ ಕರೆದು 12 ಬಗೆಯ ದಾಖಲೆಗಳನ್ನು ಮೂರೇ ದಿನಗಳಲ್ಲಿ ನೀಡುವಂತೆ ಕೇಳಿದ್ದಾರೆ. ಇವರಲ್ಲಿ 25 ಜನರು ಸ್ವಲ್ಪ ದಾಖಲೆಗಳನ್ನು ಸಲ್ಲಿಸಿದ್ದಾರೆ. ಇನ್ನು 6 ಜನರು ದಾಖಲಾತಿ ಸಲ್ಲಿಸಿಲ್ಲ. ಡಿ. 5ರಂದು ಸಿಮ್ಸ್ ನಿಂದ ಅವರಿಗೆ ನೋಟೀಸ್ ಕಳಿಸಿ ಇನ್ನು ದಾಖಲಾತಿ ನೀಡಬೇಕು. ಇಲ್ಲವಾದಲ್ಲಿ ಉದ್ಯೋಗ ನೀಡುವ ಪ್ರಕ್ರಿಯೆಯಿಂದ ನಿಮ್ಮ ಹೆಸರು ಕೈಬಿಡಲಾಗುವುದು ಎಂಬ ಅಂತಿಮ ತಿಳುವಳಿಕೆ ಪತ್ರ ಕಳುಹಿಸಿದ್ದಾರೆ. ಸಿಮ್ಸ್ ಈ ಬಗ್ಗೆ ನಮಗೆ ಮುಂಚೆಯೇ ತಿಳಿಸಬೇಕಿತ್ತು. ಇಷ್ಟೊಂದು ಕಡಿಮೆ ಅವಧಿಯಲ್ಲಿ ಈ ಎಲ್ಲ ದಾಖಲೆಗಳನ್ನು ನೀಡುವುದು ಹೇಗೆ ಎಂದು ಸಂತ್ರಸ್ತರು ಅಳಲು ತೋಡಿಕೊಂಡರು.

ವಿಶೇಷ ನೇಮಕಾತಿಯಡಿ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಪ್ರಕ್ರಿಯೆಗಳು ಆರಂಭಗೊಂಡಿದ್ದು, ಆ ಕುಟುಂಬಗಳಲ್ಲಿನ ತಲಾ ಒಬ್ಬರಿಗೆ ಉದ್ಯೋಗ ನೀಡುವ ನಿಟ್ಟಿನಲ್ಲಿ ಮೈಸೂರಿನ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ, ಸಿಮ್ಸ್ ನಿರ್ದೇಶಕರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಗಿದೆ.

ಖಾಲಿ ಹುದ್ದೆಗಳಿಗೆ ಭರ್ತಿ: ಸಿಮ್ಸ್‌ನಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸಂತ್ರಸ್ತರ ಕುಟುಂಬಗಳಲ್ಲಿನ ಅರ್ಹರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಆ ಪೈಕಿ ನರ್ಸಿಂಗ್, ಚಾಲಕ, ಸ್ಟೋರ್ ಕೀಪರ್ ಹಾಗೂ ಗ್ರೂಪ್ ಡಿ ಅಥವಾ ಖಾಲಿ ಇರುವ ಅರ್ಹ ಹುದ್ದೆಗಳನ್ನು ನೀಡುವ ನಿಟ್ಟಿನಲ್ಲಿ ಪ್ರಸ್ತಾವನೆ ಸಲ್ಲಿಕೆಯಾಗುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

4 ಕುಟುಂಬಕ್ಕೆ ಅನ್ಯಾಯ : ಉಳಿದ ನಾಲ್ಕು ರೋಗಿಗಳ ಕುಟುಂಬವನ್ನು ಅಧಿಕಾರಿಗಳು ಸಂತ್ರಸ್ತರ ಪಟ್ಟಿಯಲ್ಲಿ ಸೇರಿಸಿಲ್ಲ. ಆ ನಾಲ್ವರ ಕುಟುಂಬಗಳಿಗೂ ಸರ್ಕಾರಿ ಉದ್ಯೋಗ ನೀಡಿ ನ್ಯಾಯ ದೊರಕಿಸುವ ಹೊಣೆ ಸರ್ಕಾರದ್ದಾಗಿದೆ.

ಬೆಳಗಾವಿಯಲ್ಲಿ ಗೌರ್ನಿಂಗ್ ಕೌನ್ಸಿಲ್ ಸಭೆ : ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ 31 ಕುಟುಂಬಗಳಿಗೆ ಸಿಮ್ಸ್‌ನಲ್ಲಿ ಸರ್ಕಾರಿ ಉದ್ಯೋಗ ನೀಡುವ ಸಂಬಂಧ ಸರ್ಕಾರ ಅನುಮೋದನೆ ನೀಡಿ ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ ಒಂದು ಸಮಿತಿ ಸಹ ರಚನೆಯಾಗಿದೆ. ಈಗಾಗಲೇ ಸಮಿತಿ ಸಭೆ ನಡೆಸಿ ಸಂತ್ರಸ್ತರು ಸರ್ಕಾರಕ್ಕೆ ಸೂಕ್ತ ದಾಖಲಾತಿ ನೀಡುವಂತೆ ನೋಟೀಸ್ ಕಳುಹಿಸಲಾಗಿದೆ. ಈ ಸಂಬಂಧ ಡಿ. 17 ರಂದು ಬೆಳಗಾವಿಯಲ್ಲಿ ಗೌರ್ನಿಂಗ್ ಕೌನ್ಸಿಲ್ ಸಭೆ ನಡೆಯಲಿದೆ. ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪತ್ರಿಕಾ ಛಾಯಾಗ್ರಾಹಕ ಹಬೀಬ್ ನಿಧನ : ಸಂತಾಪ


ಹಿರಿಯ ಪತ್ರಿಕಾ ಛಾಯಾಗ್ರಾಹಕ ಹಬೀಬ್ ಉಲ್ಲಾ ನಿಧನಕ್ಕೆ ಪತ್ರಕರ್ತರ ಸಂಘ ಸಂತಾಪ ಸಲ್ಲಿಸಿತು

ಕೊಳ್ಳೇಗಾಲ, ಡಿ.10– ಹಿರಿಯ ಪತ್ರಿಕಾ ಛಾಯಾಗ್ರಾಹಕ ಹಬೀಬ್ ಉಲ್ಲಾ (63) ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೃತರು ಪತ್ನಿ ಸಹರಾಭಾನು, ಮಕ್ಕಳಾದ ಶಫೀವುಲ್ಲಾ, ಜಮಿ ಉಲ್ಲಾ, ಉಮೆ ಹುಲ್ಮಾ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ

ಮಂಗಳವಾರ ಮಧ್ಯಾಹ್ನ 1ಗಂಟೆಗೆ ಈದ್ಗಾ ಮೈದಾನದಲ್ಲಿ ಅಂತ್ಯಕ್ರಿಯೆ ಜರುಗಿತು.

ನಗರಸಭೆ ಮಾಜಿ ಅಧ್ಯಕ್ಷ ಸೆಲ್ವರಾಜು, ಮಾಜಿ ಸದಸ್ಯರುಗಳಾದ ಕೆ ಕೆ ಮೂರ್ತಿ, ಮಂಜುನಾಥ್, ನಾಗಣ್ಣ, ಮಂಜುನಾಥ್, ಸಾಹಿತಿ ಪಳನಿಸ್ವಾಮಿ ಜಾಗೇರಿ, ಹಿರಿಯ ಪತ್ರಕರ್ತ ರಾಜೇಶ್, ನಾಗೇಂದ್ರಸ್ವಾಮಿ ಸೇರಿದಂತೆ ಹಲವರು ಮೃತರಿಗೆ ಅಂತಿನ ನಮನ ಸಲ್ಲಿಸಿದರು. ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್, ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಎಸ್.ಬಾಲರಾಜು, ಆರ್.ನರೇಂದ್ರ, ಪರಿಮಳಾ ನಾಗಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಹೆಚ್.ಕೆ.ಟ್ರಸ್ಟ್ ಕಾರ್ಯದರ್ಶಿ ಪ್ರೇಮಲತಾ ಕೃಷ್ಣಸ್ವಾಮಿ, ಶ್ರೀವರ್ಧನ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಅರ್ಜಿ ಆಹ್ವಾನ

ಚಾಮರಾಜನಗರ: ಎಸ್‌ಬಿಐ ಗ್ರಾಮೀಣ ಸ್ವಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ಗ್ರಾಮೀಣ ನಿರುದ್ಯೋಗ ಯುವಕ–ಯುವತಿಯರಿಗೆ ಊಟ ವಸತಿಗಳೊಂದಿಗೆ ಉಚಿತ ಸಿಸಿ ಟಿವಿ ಅಳವಡಿಕೆ ಮತ್ತು ರಿಪೇರಿ ತರಬೇತಿಯನ್ನು ಡಿ.15 ರಿಂದ 13 ದಿನಗಳವರೆಗೆ ನೀಡಲಾಗುತ್ತಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಗರಗನಹಳ್ಳಿ ಶಾಲೆಯಲ್ಲಿ ಪ್ರತಿಭಾ ಕಾರಂಜಿ, ಕಲೋತ್ಸವ



ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮವನ್ನು ಬಿಇಓ ಸ್ವಾಮಿ ಉದ್ಘಾಟಿಸಿದರು

ಗುಂಡ್ಲುಪೇಟೆ, ಡಿ.10(ಸೋಮ್.ಜಿ)– ತಾಲೂಕಿನ ಗರಗನಹಳ್ಳಿ ಪ್ರೌಢಶಾಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಹಾಗೂ ಬಿಇಓ ಕಚೇರಿ ವತಿಯಿಂದ ಕ್ಲಸ್ಟರ್ ಮಟ್ಟದಿಂದ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಸ್ವಾಮಿ ಪ್ರತಿಯೊಂದು ಮಗು ಸಹ ಕೌಶಲ್ಯ ಹೊಂದಿರುತ್ತದೆ ಅದನ್ನು ಇಂತಹ ಕಾರ್ಯಕ್ರಮಗಳ ಮೂಲಕ ಹೊರತಂದು ಪ್ರೋತ್ಸಾಹ ನೀಡುವ ಕೆಲಸ ಮಾಡುವುದೇ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವದ ಕಾರ್ಯಕ್ರಮವಾಗಿದೆ ಎಂದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಕೆ.ಸಿ.ಸತೀಶ್, ಎಸ್‌ಡಿಎಂಸಿ ಅಧ್ಯಕ್ಷ ಮಹದೇವಪ್ಪ, ಜಿಪಿಟಿ ಸಂಘದ ಅಧ್ಯಕ್ಷ ಶಿವಸ್ವಾಮಿ, ಬಿಆರ್‌ಸಿ ಚಂದ್ರಶೇಖರ್, ಸಿಆರ್‌ಪಿ ರವೀಂದ್ರ ಕುಮಾರ್, ಮುಖ್ಯ ಶಿಕ್ಷಕ ಕಿರಣ್, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

ಇಂದಿನಿಂದ ಐದು ದಿನ ವಿವಿಧೆಡೆ ವಿದ್ಯುತ್ ವ್ಯತ್ಯಯ



ಚಾಮರಾಜನಗರ, ಡಿ.10–ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಚಾಮರಾಜನಗರ 220 ಕೇಂದ್ರದಿಂದ ಹೊನ್ನಳ್ಳಿ ವಿದ್ಯುತ್ ವಿತರಣಾ ಕೇಂದ್ರದವರೆಗೆ ಏಕ ಪ್ರಸರಣ ಮಾರ್ಗದ ಮೇಲೆ ಎರಡನೇ ಪ್ರಸರಣ ಮಾರ್ಗವನ್ನು ಎಳೆಯಲು ಡಿ.11 ರಿಂದ 15ರವರೆಗೆ ಒಟ್ಟು 5 ದಿನಗಳ ಕಾಲ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಅರಕಲವಾಡಿ, ಯರಗನಹಳ್ಳಿ, ಸುವರ್ಣನಗರ, ಫ್ಯಾಕ್ಟರಿ, ಬಿಸಿಲವಾಡಿ, ಪುಣಜನೂರು, ಡೊಳ್ಳಿಪುರ, ಚನ್ನಪನಪುರ, ಅಮಚವಾಡಿ, ಮಾದಲವಾಡಿ, ಸಿದ್ದಯ್ಯನಪುರ, ಹೊಂಗಲವಾಡಿ, ಕೋಳಿಪಾಳ್ಯ, ಬಂಧಿಗೌಡನಹಳ್ಳಿ, ಅಟ್ಟುಗೂಳಿಪುರ, ಕಿಲಿಗೆರೆ, ಯನಗುಂಬ, ಯರಗನಹಳ್ಳಿ, ಅಚ್ಚಟ್ಟಿಪುರ, ಯಾನಗಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ 1912 ಕರೆ ಮಾಡುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯ ನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕರ ವರ್ಗಾವಣೆ ; ಬೀಳ್ಕೊಡುಗೆ



ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ ವರ್ಗವಾದ ಹಿನ್ನೆಲೆ ಅವರಿಗೆ ಬೀಳ್ಕೊಡುಗೆ ನೀಡಿ ಅಭಿನಂದಿಸಲಾಯಿತು.

ಕೊಳ್ಳೇಗಾಲ,ಡಿ.10– ತಾಲೂಕಿನ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ ರವರನ್ನು ನಂಜನಗೂಡು ತಾಲೂಕಿನ ಹದಿನಾರು ಶಾಲೆಯ ಮುಖ್ಯ ಶಿಕ್ಷಕರಾಗಿ ವರ್ಗಾವಣೆಗೊಂಡ ಹಿನ್ನೆಲೆಯಲಿ ತಾಲೂಕು ಪಂಚಾಯ್ತಿ ವತಿಯಿಂದ ಬೀಳ್ಕೊಡುಗೆ ನೀಡಿ ಗೌರವಿಸಲಾಯಿತು.

ತಾಪಂ ಇಓ ಗುರುಶಾಂತಪ್ಪ ಬೆಳ್ಳುಂಡಗಿ ಮಾತನಾಡಿ ರಂಗಸ್ವಾಮಿ ಅವರು ಅಕ್ಷರ ದಾಸೋಹದಲ್ಲಿ ಉತ್ತಮ ರೀತಿ ಕರ್ತವ್ಯ ನಿರ್ವಹಿಸಿದ್ದಾರೆ, ಮುಂದಿನ ದಿನಗಳಲ್ಲೂ ಪ್ರಾಮಾಣಿಕವಾಗಿ ಸರ್ಕಾರಿ ಸೇವೆ ಮಾಡುವಂತಾಗಲಿ ಎಂದರು

ಅಭಿನಂದನೆ ಸ್ವೀಕರಿಸಿದ ರಂಗಸ್ವಾಮಿ ಮಾತನಾಡಿ, ಕೊಳ್ಳೇಗಾಲ ಹಾಗೂ ಹನೂರು ತಾಲೂಕಿನಲ್ಲಿ 6 ವರ್ಷಗಳಿಂದ ಎಲ್ಲರ ಸಹಕಾರದಿಂದ ಉತ್ತಮ ಸೇವೆ ಸಲ್ಲಿಸಿದ್ದೇನೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಜೋಸೆಫ್ ಅಲೆಕ್ಸಾಂಡರ್, ಪ್ರಧಾನ ಕಾರ್ಯದರ್ಶಿ ಚಿಕ್ಕರಾಜು, ರಾಜಣ್ಣ ಇನ್ನಿತರರು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ರಿಯಲ್ ಎಸ್ಟೇಟ್ ಸಂಸ್ಥೆಗೆ ಮಾರ್ಕೆಟಿಂಗ್‌ಗಾಗಿ ಆಫೀಸ್ ಬಾಯ್
ದ್ವಿಚಕ್ರ ವಾಹನ ಕಡ್ಡಾಯ.
ಕಛೇರಿ: ಆನಂದನಗರ, ನ್ಯೂ ಕಾಂತರಾಜ್ ಅರಸ್ ರಸ್ತೆ, ಮೈಸೂರು
Mob: 9620461052

ಸೈಟು ಮಾರಾಟಕ್ಕಿದೆ
30x40 S/F
"ವಾಸ್ತವ ಮಾನಸ ಲೇಔಟ್"
TVS ಫ್ಯಾಕ್ಟರಿ ಮುಖ್ಯ ರಸ್ತೆ, ತಳೂರು. ಕೂಡಲೇ ಮನೆ ಕಟ್ಟಲು ಅಥವಾ ಹೂಡಿಕೆಗೆ ತುಂಬಾ ಯೋಗ್ಯವಾಗಿದೆ
9008570086, 9591810822

WANTED
Male or Female candidates with basic computer knowledge and Accounts with good communication skill. Contact
9901364556

ಜಮೀನು ಮಾರಾಟಕ್ಕಿದೆ
2 ಎಕರೆ 9 ಗುಂಟೆ ಮೈಸೂರಿನಿಂದ 25 ಕಿಲೋಮೀಟರ್
Mob: 9739826533
ಕಾರ್ ವಾಷಿಂಗ್ ಸೆಂಟರ್ ಬಾಡಿಗೆಗೆ ದೊರೆಯುತ್ತದೆ. 2400 ಸ್ಕ್ವೇರ್ ಫೀಟ್. ಕಾರ್ ವಾಶ್ ಮತ್ತು ಗ್ಯಾರೇಜ್ ಬಾಡಿಗೆಗೆ ದೊರೆಯುತ್ತದೆ.

ನಂಜನಗೂಡಿನಲ್ಲಿ
ಸೈಟುಗಳು
ಡಿ.ಸಿ. ಅಲಿನೇಷನ್
ರೂ. 10 ಲಕ್ಷ
ಮೊದಲು ಬಂದವರಿಗೆ ವಿಶೇಷ ರಿಯಾಯಿತಿ ದೊರೆಯಲಿದೆ
8792306996
ಬ್ಯಾಂಕ್ ಲೋನ್ ದೊರೆಯುತ್ತದೆ

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ಬೇಕಾಗಿದ್ದಾರೆ
ದೋಸೆ ಕುಕ್ ಮತ್ತು ಸಹಾಯಕರು ಬೇಕಾಗಿದ್ದಾರೆ.
ಸ್ಥಳ: ಹೋಟೆಲ್ ಈಸಿ ತಿಂಡಿ, ಅಭಿಷೇಕ್ ಸರ್ಕಲ್, ಹೆಬ್ಬಾಳ್, ಮೈಸೂರು
Mob: 8147683310

ಬೇಕಾಗಿದೆ
Corner site
25 - 50 Lakhs
City Limits
Mob: 9141567896

House for Rent
16, 2 BHK house for rent available for PG & private hostels. Including bunkers available.
9980685348, 8970326846

SITE FOR SALE
60x90
Next to post office, Somavarapete, Chamarajanagara
9448187863

WANTED
TUITION TEACHER for 10th Std. Student- CBSE Board.
Subject : Science -(Physics, Chemistry and Biology) (Online/Offline). Contact:
Mob: 8748991416

RERA APPROVED — RAI ESTATES — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

PEST CONTROL SERVICES
ಸೊಳ್ಳೆ, ಜಿರಳೆ, ಇಲಿ, ಜೇಡ, ಗೆದ್ದಲು ಹುಳು, ತಿಗಣೆಗಳನ್ನು ನಿಮ್ಮ ಮನೆ, ಆಫೀಸ್, ಅಪಾರ್ಟ್‌ಮೆಂಟ್, ಶಾಲೆ ಕಾಲೇಜುಗಳಿಂದ ತಡೆಗಟ್ಟಿ.
ಸಂಪರ್ಕಿಸಿ:
9886899944

ಮೈಸೂರಿನಲ್ಲಿ DTCP Approved ಬಡಾವಣೆಗಳಲ್ಲಿ ನಿವೇಶನಗಳು ದೊರೆಯುತ್ತವೆ
1) ಟಿ.ನರಸೀಪುರ ಮುಖ್ಯ ರಸ್ತೆ.
2) ಹೆಚ್.ಡಿ. ಕೋಟೆ ಮುಖ್ಯ ರಸ್ತೆ
3) ಕೆಲ್ಲಹಳ್ಳಿ, ಪೆರಿಫೆರಲ್ ರಿಂಗ್ ರಸ್ತೆ.
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
Mob: 7411914135

MUDA SITES FOR SALE
₹2300/ per Sft.
Kenchalguud.
Near Brahmins Layout.
9611110601

ಬೇಕಾಗಿದ್ದಾರೆ
ಮೈಸೂರಿನ ದಟ್ಟಗಳ್ಳಿಯಲ್ಲಿರುವ ಮನೆಗೆ ಮನೆ ಕೆಲಸಕ್ಕೆ ಅನುಭವಸ್ಥ ಒಂದು ಕುಟುಂಬ ಬೇಕಾಗಿದೆ ಉತ್ತಮ ಸಂಬಳ ನೀಡಲಾಗುವುದು.
ಸಂಪರ್ಕಿಸಿ:
81234 50066

100% ಉದ್ಯೋಗವಕಾಶ ವರ್ಕ್ ಫ್ರಂ ಹೋಂ
ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ ವಯಸ್ಸು 18 ರಿಂದ 65 ರವರೆಗೆ. ಆಫೀಸ್‌ಗಳಿಗೆ 4th, 7th, 10th, ITI, Any Degree Pass / Fail ಆದ ಯುವಕ, ಯುವತಿಯರಿಗೆ ಹಾಗೂ ESI, PF ನೊಂದಿಗೆ. ಇಂದೇ ಕರೆ ಮಾಡಿ. ಸಂಬಳ: 22,000 – 45000.
6362024878, 9019593297

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

ನೇರ ಆಯ್ಕೆ ಉದ್ಯೋಗವಕಾಶ
ವರ್ಕ್ ಫ್ರಮ್ ಹೋಂ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ & ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ + ಮಹಿಳೆಯರಿಗೆ ಹಾಗೂ ವಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ. 7th, 10th, PUC, Any Degree ಪಾಸ್, ಫೇಲ್ ಆದವರು. 20,000 ದಿಂದ 25,000. ಸಂಪರ್ಕಿಸಿ:
Mob: 8095133188

FOR SALE
30x40 Sites Near RT Nagar BSNL Layout @ Just 22 Lakhs
20x30, 30x40 MUDA Approved Sites Near Rainbow School Bogadi
30x40|30x50 MUDA Sites KHB Attach, HD Kote Road. | 2 & 3 BHK Apartments @ Ramakrishna Ngr
Commercial Properties Also Available
PRAKRUTHI PROPERTIES
95386 90359, 90359 90359

FOR SALE
20x30 Old Houses @ Kuvempunagar, RK Nagar
40x120 Site@ 80 Feet Road in Dattagalli
20x30 New Duplex House @ Utthanahalli & Dattagalli
40x60@ JP Ngr, Shardha Lyt
20x30/30x45/35x60/40x60 Properties @ Srirampura
20x30 Properties @ VijayaNagar
PRAKRUTHI PROPERTIES
95386 90359, 90359 90359

ಅಡುಗೆಯವರು ಬೇಕಾಗಿದ್ದಾರೆ
ಮಾಂಸಹಾರಿ ಹೋಟೆಲ್‌ಗೆ ನಾಟಿ ಸ್ಟೈಲ್ ಅಡುಗೆ ಮಾಡುವ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
ಮೊ: 6364548607

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

REQUIRED IMMEDIATELY
DRIVERS
SALESMEN
9141835175
6366610175
careersmysuru@gmail.com
Ilwala, Near Belawadi Chk Pt, Mysore

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಕೆಲಸಕ್ಕೆ ಬೇಕಾಗಿದ್ದಾರೆ
* ಕ್ಯಾಪ್ಟನ್ (1)
* ಸಪ್ಲೆಯರ್ (2)
ವಿಜಯನಗರ 4 ನೆ ಸ್ಟೇಜ್, ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
9353263974



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಹುದ್ದೆಯ ಹೆಸರು: ಪೆಟ್ರೋಲ್ ಬಂಕ್‌ಗೆ ಕೆಲಸಗಾರರು
ಸ್ಥಳ: ವಿಷ್ಣು ಫ್ಯೂಯಲ್ಸ್, ಬನಿಮಂಟಪ 'ಎ' ಲೇಔಟ್, ಮೈಸೂರು
ಸಂಪರ್ಕಿಸಿ:
7204563666 / 9741555639

AFFIDAVIT
I, M.J. Tharesh, S/o Late K.C. Jayashankar, residing at No. 284, 6th Cross, 3rd Stage, Gokulam, Mysuru-570 002, Karnataka, that my father's correct name is Late Kapanaiah Chamundaiah Jayashankar (Late K.C. Jayashankar), but in my passport my father's name mentioned as Jayashankar instead of Late Kapanaiah Chamundaiah Jayashankar (Late K.C. Jayashankar) vide affidavit sworn before Notary C.R. Seetharam, Mysore dated 9-12-2025

SITE FOR SALE
30x35
Near Gorur Main Road, Mysuru.
Mob: 9980657303

SITES FOR SALE
30x40
(MUDA APPROVED)
Nearby Srirampura Circle, Mysuru.
Mob: 8050345574

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ & ಶೋರೂಂಗಳಿಗೆ ಯುವಕರು, ಯುವತಿಯರು ಬೇಕಾಗಿದ್ದಾರೆ. 7th, 10th, PUC, Any Degree ವಸತಿ, ಊಟ ಉಚಿತವಾಗಿದೆ. ಸಂಬಳ + ಓ.ಟಿ. 20,000 ದಿಂದ 45,000. ಸಂಪರ್ಕಿಸಿ:
9916744622, 9916788422

ಟೈಲರಿಂಗ್ ತರಬೇತಿ
ಉಚಿತ / ಉಚಿತ
ವಿಳಾಸ: ಗಾನವಿ ಇಂಟರ್ನ್ಯಾಷನಲ್ ಉದಯಗಿರಿ
Ph No: 9620476665, 9620436665 9620546665, 0821-2977765

VIVARDHANA MICRO FINANCE LIMITED
Required female HR (MSW) candidate for reputed organization company with Minimum 1 year experience (should speak proper english) package will be 15,000 to 25,000, Male Candidate required for Document Verification (Package 15000 to 20,000) Age (between 20 to 28) Contact
9110664030

ಉದ್ಯೋಗ ಅವಕಾಶ
ಕರ್ನಾಟಕದಾದ್ಯಂತ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ ಮತ್ತು ವೇರ್‌ಹೌಸ್ / ಬ್ಯಾಂಕ್ / ಆಫೀಸ್ ಕೆಲಸಗಳಿಗೆ 4th, 10th, ITI, B.Com, B.Sc, BE, B.Tech, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಹಾಗೂ ಚಾಲಕರು ಇಂದೇ ಬೇಕಾಗಿದ್ದಾರೆ. ESI, PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ಓಟಿ, 15200 – 86000
7406996362

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಸಭಾಂಗಣ ನೋಡಿಕೊಳ್ಳಲು ಮತ್ತು ಶುಚಿತ್ವ ಕೆಲಸಕ್ಕಾಗಿ ನೌಕರರು ಬೇಕಾಗಿದ್ದಾರೆ. ಇಲ್ಲೇ ಉಳಿದು ಕೊಳ್ಳಲು ವಸತಿ ಸೌಲಭ್ಯವಿದ್ದು ಮಾಸಿಕ ಸಂಚಿತ ವೇತನ ಮತ್ತು ಶುಚಿತ್ವ ಭತ್ಯೆ ಪಾವತಿಸಲಾಗುವುದು. ಆಸಕ್ತಿ ಉಳ್ಳವರು ಕೂಡಲೇ ಕೊಡಗು ಸಹಕಾರ ಸಂಘ ನಿ., ನಂ.71, ಆಸ್ಪತ್ರೆ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು, (ಮಂಜುನಾಥ ಕಲ್ಯಾಣ ಮಂಟಪ ಹತ್ತಿರ) ಕಚೇರಿ ದಿನಗಳಲ್ಲಿ ಬೆಳಿಗ್ಗೆ 10.30 ರಿಂದ ಸಂಜೆ 5 ರೊಳಗೆ ಸಂದರ್ಶಿಸುವುದು.

ಬೇಕಾಗಿದ್ದಾರೆ
ರಿಸಪ್ಷನಿಷ್ಟ್ ಹುಡುಗಿ/ಮಹಿಳೆಯರು ಕನ್ನಡ / ಇಂಗ್ಲಿಷ್ ಓದಲು ಬರೆಯಲು ಮತ್ತು ಚೆನ್ನಾಗಿ ಮಾತನಾಡಲು ಬರುವ ಅಭ್ಯರ್ಥಿಗಳು ಖುದ್ದಾಗಿ ಸಂಪರ್ಕಿಸಿ
7795912374
9108039302

SITES FOR SALE
1. 30*40 East facing site Price - 1cr 55 lakh negotiable Vijaynagar 2nd stage Mysore
2. 20*25 west facing site Price - 30 lakh negotiable Khb ootgalli Mysore
3. 30*40 south facing site Price 45 lakh negotiable Suvarna layout bogadi Mysore

7022910042

IMMEDIATE REQUIREMENT
Personal Assistant
Qualification: Any Degree with good communication in English and hands on MS-Office minimum 2 years' experience
4148888
9164608888

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, (18k -38k), SSLC, PUC, DEGREE
6366718368, 9739121355

ಸದ್ಗುರು ಮ್ಯಾರೇಜಸ್
ಒಕ್ಕಲಿಗ 26 ವರ್ಷ BE, MBA ಸುಂದರ ಶ್ರೀಮಂತ ಕೋಟ್ಯಾಧೀಶ್ವರ ವಧುವಿಗೆ BE, MTech, MBA, MCA, MBBS& MD, BD&MDS ಸುಂದರ ಶ್ರೀಮಂತ ಸೂಕ್ತ ವರ ಬೇಕಾಗಿದೆ. ನೇರ ಸಂಪರ್ಕಿಸಿ
9448229184, 7899625268

For Sale
Home furniture Sofa 3 + 1 + 1 Rose Wood Rs.35000 Dressing Table Rose Wood Rs.23000 Wooden Crockery unit / Study table - Teak wood Rs.25000 wooden cot king size with storage Rs18500.
9742596647

FOR RENT
2400 Sq ft Commercial in Shivarampet Mysore
Suitable for Call Center, BPD, NGO Garments, Tuition Center IT-BT, Clinic & Pathology
9845156619
9902356334

Change of Name
I, DR. YATHEESH. K.S, S/o K. SIDDAIAH R/o #280, 3rd Cross, Brundavan Extn, Mysore, Karnataka, 570020 changed my minor daughter's name from SIRI YATEESH K Y to AKSHAYASIRI K Y on my own free will, sworn in before Notary SARASWATHI J, Mysore, vide Affidavit dated: 28.11.2025.
Sd/-DR. YATHEESH. K.S

IMMEDIATE REQUIREMENT
Data Entry Operator with MS-Office
Qualification: Any Degree with minimum 2 years' experience
4148888
9164608888

ದುರ್ಗಾಂಬೆ ವಾಟರ್ ಪ್ರೂಫಿಂಗ್
ನಿಮ್ಮ ಮನೆ ಸೋರುತ್ತಿದೆಯೇ ಹಾಗಾದರೆ ಇನ್ನು ಮುಂದೆ ಭಯ ಬೇಡ
ನುರಿತ ತಜ್ಞ ಕೆಲಸಗಾರರು. RCC ಯಲ್ಲಿ ಬಂದಂತಹ ಬಿರುಕುಗಳು ಪಾಯಿಂಟ್‌ಗಳು ಹಾಗೂ ಯಾವುದೇ ತರಹದ ಲೀಕೇಜ್‌ಗಳನ್ನು ಸರಿಪಡಿಸಲಾಗುವುದು. ಗೋಡೆಯ ಸೈಡ್‌ವಾಲ್‌ಗಳನ್ನು ಸಹ ಸರಿ ಮಾಡಲಾಗುವುದು. 10 ವರ್ಷಗಳ 100% ಕೆಲಸದ ಗ್ಯಾರಂಟಿ. ಬಿಲ್ ಕೊಡಲಾಗುವುದು.
8792087596

ಬೃಹತ್ ಉದ್ಯೋಗವಕಾಶ
ಮೈಸೂರಿನಲ್ಲಿರುವ A.W. Group of ಕಂಪನಿಗೆ 324 ಕನ್ನಡಬಲ್ಲ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, PUC-114, ITI - 65, Diploma, Any Degree, MBA - 145 ವಯೋಮಿತಿ : 18-34 Years ತಿಂಗಳಿಗೆ : 20,500 - 25000 (ಉಚಿತ ಊಟ + ವಸತಿ ವ್ಯವಸ್ಥೆಯಿದೆ. ಕೂಡಲೇ ಕರೆಮಾಡಿ. ಪ್ರಗತಿ :
7090212014, 7349699460

ಉದ್ಯೋಗ ಅವಕಾಶಗಳು
1) Engineering Plastics - ಮೇಟಗಳ್ಳಿ, ಬಸವನಗುಡಿಗೆ ಹುಡಗ-ಹುಡುಗಿಯರು ಬೇಕಾಗಿದ್ದಾರೆ.
2) ಸೆಕ್ಯೂರಿಟಿ ಗಾರ್ಡುಗಳು(ಪುರುಷರು)-ಮೇಟಗಳ್ಳಿ, ಹೂಟಗಳ್ಳಿ, ನಂಜುಮಳಿಗೆ ಸುತ್ತ-ಮುತ್ತ
3) ಅನುಭವಿ ಮಾರ್ಕೆಟಿಂಗ್ ವ್ಯವಸ್ಥಾಪಕರು ಬೇಕಾಗಿದ್ದಾರೆ. ಸ್ಥಳ : ಮಂಡ್ಯ, ಸುತ್ತ-ಮುತ್ತ
ಆಕರ್ಷಕ ಸಂಬಳದ ಜೊತೆಗೆ ESI, PF ಕೊಡಲಾಗುತ್ತದೆ.
Contact : 8217563349
8867197599, 9148975329

ಮಾರಾಟಕ್ಕೆ
* 20x30 (1200 ಚ. ಅ) – ಪೂರ್ವ ಮುಖ ಉ+1. ವಾಸಸ್ಥಾನ – JSS ಲೇಔಟ್. * ಉತ್ತರಮುಖ ಉ+2 ಡುಪ್ಲೆಕ್ಸ್ ಮನೆ – ವಸಂತನಗರ. ಪ್ಲಾಟ್: 20x30 ಅಡಿ । ನಿರ್ಮಾಣ ವಿಸ್ತೀರ್ಣ: 1800 ಚ.ಅ. ಸುಂದರ ವಿನ್ಯಾಸ, ಉತ್ತಮ ಸ್ಥಳ, ಎಲ್ಲಾ ಸೌಲಭ್ಯಗಳ ಸಮೀಪ. ಸಂಪರ್ಕಿಸಿ :
9986621579 / 7624987329

ಸೈಟು ಮಾರಾಟಕ್ಕಿದೆ
ಶ್ರೀರಾಂಪುರ, ಎರಡನೇ ಹಂತ, ನಿಯರ್ ಬಿಇಎಂಎಲ್ ಮೇನ್ ರೋಡ್ ಹತ್ತಿರ, ನಾರ್ತ್ ಫೇಸ್ 30x40. ಸಂಪರ್ಕಿಸಿ:
Mob: 9141353309
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

ಸೈಟು ಮಾರಾಟಕ್ಕಿದೆ
ಮೈಸೂರು ಸಿಟಿ, ಶ್ರೀರಾಂಪುರ, ನಿಯರ್ ಕೋಟೆಹುಂಡಿ KSRTC ಲೇಔಟ್, ಈಸ್ಟ್ ಫೇಸಿಂಗ್ 30x50.
Mob: 9845713284
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

SITES WANTED
@ Mys-Hunsur Highway, Central St. Joseph School, Acharya Vidyakula & Mysore surroundings.
QUICK REGN.
Mob: 93421-25252

ಬಾಡಿಗೆಗಿದೆ
ಎರಡು ಕೊಠಡಿ ಮನೆ (ಮೊದಲ ಮಹಡಿ) (ಪೂರ್ವ ಬಾಗಿಲು) (ಶಾಖಾಹಾರಿ ಮಾತ್ರ) ಬಾಡಿಗೆಗೆ ಲಭ್ಯವಿದೆ, ಸರಸ್ವತಿಪುರಂ ಕಾಮಾಕ್ಷಿ ಹಾಸ್ಪಿಟಲ್ ಎದುರು ಸಂಪರ್ಕಿಸಿ
9606961793

ಕೇಂದ್ರ/ರಾಜ್ಯ ಸರ್ಕಾರದ ನಿವೃತ್ತರಾದ ಹಿರಿಯ ನಾಗರಿಕರಿಗೆ ಉದ್ಯೋಗಾವಕಾಶದ ಸೆಮಿನಾರ್
ಸ್ಥಳ: ಮೌರ್ಯ ರೆಸಿಡೆನ್ಸಿ ಹೋಟೆಲ್, ಹರ್ಷ ರಸ್ತೆ, ಉಡ್‌ಲ್ಯಾಂಡ್ ಟಾಕೀಸ್ ಹತ್ತಿರ, ಮೈಸೂರು–01
ದಿನಾಂಕ : 15–12–2025, ಸಮಯ: 11 AM
ವಿದ್ಯಾರ್ಹತೆ : SSLC & Above any degree
ದಾಖಲಾತಿಗಳು : 1) ಆಧಾರ್ ಕಾರ್ಡ್, 2) ಪಾನ್‌ಕಾರ್ಡ್, 3) 1 ಫೋಟೊ, 4) ಮಾರ್ಕ್ಸ್ ಕಾರ್ಡ್, 5) ಬ್ಯಾಂಕ್ ಪಾಸ್‌ಬುಕ್
Followed by Lunch: ಸಂಪರ್ಕಿಸಿ :
7022034200

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಸರಸ್ವತಿಪುರಂ ಏರಿಯಾದಲ್ಲಿ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 50 ವರ್ಷದೊಳಗೆ
ಸಂಬಳ : 21000 (8 hours, W/o)
ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819, 9880727819

ಬೇಕಾಗಿದ್ದಾರೆ
ಅಡಿಗೆ ಮಾಡುವವರು ಬೇಕಾಗಿದ್ದಾರೆ, (ಮಹಿಳೆ ಅಥವಾ ಪುರುಷ) (ಶಾಖಾಹಾರ ಮಾತ್ರ) ಅವರ ಅನುಭವಕ್ಕೆ ತಕ್ಕಂತೆ ಸಂಬಳ ನೀಡಲಾಗುವುದು. ಆಸಕ್ತರು ತಮ್ಮ ಬಗ್ಗೆ ವಿವರಗಳನ್ನು ವಾಟ್ಸಾಪ್ ಮೂಲಕ
9606961793
ಸಂಖ್ಯೆಗೆ ಆದಷ್ಟು ಬೇಗ ಕಳುಹಿಸುವುದು, ಮೊದಲು ತಿಳಿಸಿದವರಿಗೆ ಆದ್ಯತೆ ನೀಡಲಾಗುವುದು.

ಬೇಕಾಗಿದ್ದಾರೆ
45 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್ಸ್(ಪುರುಷರು) ಬನ್ನಿಮಂಟಪ ಶ್ರೀನಿವಾಸ ಟಾಕೀಸ್ ಪಕ್ಕ, ವಿಜಯನಗರ, ಜಯಲಕ್ಷ್ಮಿ ಪುರಂ, ಒಂಟಿಕೊಪ್ಪಲ್, ದೇವೇಗೌಡ ವೃತ್ತ & ಹೆಬ್ಬಾಳ್, ಇಎಸ್ಐ, ಪಿಎಫ್ ಕಡಿತದ ನಂತರ ತಿಂಗಳ ವೇತನ ರೂ. 14000/–
9900481819
9972945905

ಮನೆ ಬಾಡಿಗೆಗೆ ಇದೆ
4 ಚದರವುಳ್ಳ ಮನೆ. ಮರಿಮಲ್ಲಪ್ಪ ಶಾಲೆ ಹತ್ತಿರ,
Mob : 9141470575
9449599562

FREE ADOPTION
Kittens/Cat, Mysore
Call : 9513553695

ಬಾಡಿಗೆಗೆ/RENT
ಅಂಗಡಿ ಮಳಿಗೆ ಬಾಡಿಗೆಗೆ ಲಭ್ಯವಿದೆ. ಮೈಸೂರಿನ ರಾಯಲ್ ಓಕ್ ಹತ್ತಿರ, ಟಿ.ನರಸೀಪುರ ರಸ್ತೆ, ಸಿಗ್ನಲ್ ಬಳಿಯಯಲ್ಲಿ ನೆಲ ಮಳಿಗೆಯು ಬಾಡಿಗೆಗೆ ಲಭ್ಯವಿದೆ.
9964423245

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು / ಹುಡುಗರು ಬೇಕಾಗಿದ್ದಾರೆ.
ಸಂಬಳ : 15000/–
7899754149

ಬೇಕಾಗಿದ್ದಾರೆ
1. ಅಡುಗೆ ಸಹಾಯಕರು
2. ಕ್ಯಾಂಟೀನ್ ಕೆಲಸಕ್ಕೆ ಹುಡುಗರು.
ಉಚಿತ ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9964586817, 9343299998

ಮನೆ ಮಾರಾಟಕ್ಕಿದೆ
32x40 ಪೂರ್ವದಿಕ್ಕು, ಮೂರು ಮಹಡಿ, 25 ಚದರ ಅಡಿ, ನಂ.615, ಕನಕ ಲೇಔಟ್, ವಿಜಯನಗರ, 4ನೇ ಹಂತ ಹತ್ತಿರ, ಮೈಸೂರು
9538072720

COMMERCIAL SPACE FOR RENT
SPACE FOR RENT ATTACHED TO RING ROAD OPPOSITE TO APMC, MYSORE
Mob : 9886386698

ಬೇಕಾಗಿದ್ದಾರೆ
ಫರ್ನಿಚರ್ ಶೋರೂಂನಲ್ಲಿ ಕೆಲಸ ಮಾಡಲು ಸಹಾಯಕ (Helpers)ರುಗಳು, ಹಾಗೂ ಡ್ರೈವರ್‌ಗಳು ಬೇಕಾಗಿದ್ದಾರೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ :
8884551387
ಅನ್ನು ಸಂಪರ್ಕಿಸಬಹುದಾಗಿದೆ.

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.
9844436672

ವಾಣಿಜ್ಯ ಸ್ಥಳ ಬಾಡಿಗೆಗಿದೆ
ಮೈಸೂರಿನ ಶಾರದಾದೇವಿ ನಗರ ವೃತ್ತದ ಬಳಿಯ ನ್ಯೂ ಕಾಂತರಾಜೇ ಅರಸ್ ರಸ್ತೆಯಲ್ಲಿರುವ ಕಾರ್ನರ್ ಕಟ್ಟಡದಲ್ಲಿ ಹೊಸದಾಗಿ ನಿರ್ಮಿಸಲಾದ, ಉತ್ತರಾಭಿಮುಖವಾಗಿರುವ 1000 ಚದರ ಅಡಿ, ಮೊದಲ ಮಹಡಿ. ಕಚೇರಿಗಳು, ತರಬೇತಿ ತರಗತಿಗಳು ಅಥವಾ ಚಿಕಿತ್ಸಾಲಯಗಳಿಗೆ ಸೂಕ್ತವಾಗಿದೆ. ಸಂಪರ್ಕಿಸಿ:
9880581377

Used Laptops & desktops
EMI available
Pranitha Computers
74068 54998
Saraswathipuram, Mysore

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಹಾಗೂ ಸೋಲಾರ್ ಸರ್ವೀಸ್
Mob: 9964733988

HOUSE FOR RENT
2 BHK/1st Floor
1st Main, Saraswathipuram Mysore
9741208400

ಹೊಸ ಲೇಔಟ್ಸ್ ಆರಂಭವಾಗಿದೆ
- T.N ಪುರ ರಸ್ತೆ – ಸಪ್ತಮಾತೃಕ, ಪ್ರಶಾಂತ ಛಾಯ ಹೌಸಿಂಗ್ ಪ್ರಾಜೆಕ್ಟ್ ಪಕ್ಕ 14–25 ಲಕ್ಷ
- ಬನ್ನೂರು ರಸ್ತೆ – ಮಾನಸಿ ನಗರ ಹಿಂಭಾಗ ವಿದ್ಯಾವಿಕಾಸ್ ಕಾಲೇಜ್ ಎದುರು 25–49 ಲಕ್ಷ
- ಬೋಗಾಧಿ ರಸ್ತೆ – ಹೊಸ ಕ್ರಿಕೆಟ್ ಸ್ಟೇಡಿಯಂ ಜಟ್ಟಿ ಹುಂಡಿ ಹಿಂಬಾಗ 29 ಲಕ್ಷ
- 30X50 ಮರಟಿಕ್ಯಾತನಹಳ್ಳಿ 42 ಲಕ್ಷ

Brokers Excuse
81230 75038

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕೆ.ಆರ್.ನಗರದಲ್ಲಿ ಯಶಸ್ವಿ ಹನುಮ ಜಯಂತ್ಯೋತ್ಸವ ಶೋಭಾಯಾತ್ರೆ

ಮೊಳಗಿದ ಜೈ ಜೈ ಹನುಮ, ಜೈ ಜೈ ಶ್ರೀರಾಮ ಘೋಷಣೆ, ಕುಣಿದು ಕುಪ್ಪಳಿಸಿದ ಅಪಾರ ಭಕ್ತ ಸಾಗರ

ಕೆ.ಆರ್.ನಗರ: ಆಂಜನೇಯ ಬ್ಲಾಕ್‌ನ ಶ್ರೀ ಮಾರುತಿ ಯುವಕರ ಸಂಘ ಮತ್ತು ವಿವಿಧ ಹಿಂದೂಪರ ಸಂಘಟನೆಗಳ ವತಿಯಿಂದ ಹಮ್ಮಿಕೊಂಡಿದ್ದ ಹನುಮ ಜಯಂತ್ಯೋತ್ಸವದ ಶೋಭಾಯಾತ್ರೆಗೆ ಅಪಾರ ಹನುಮ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಶಾಂತಿಯುತ ಮತ್ತು ಯಶಸ್ವಿಯಾಗಿ ನಡೆಯಿತು. ಪಟ್ಟಣದೆಲ್ಲೆಡೆ ಜೈ ಜೈ ಹನುಮ, ಜೈ ಜೈ ಶ್ರೀರಾಮ ಎಂಬ ಘೋಷಣೆಗಳು ಮುಗಿಲು ಮುಟ್ಟಿದವು.

ಪಟ್ಟಣದ ಆಂಜನೇಯ ಬ್ಲಾಕ್‌ನಲ್ಲಿರುವ ಆಂಜನೇಯ ಸ್ವಾಮಿ ದೇವಾಲಯಗಳಲ್ಲಿ ಬೆಳಗ್ಗೆ ವಿವಿಧ ಪೂಜಾ ಕಾರ್ಯಗಳು ಜರುಗಿದವು. ಭಕ್ತಗಣ ಭಜನೆ ಮಾಡಿ, ವಾಯುಪುತ್ರನನ್ನು ಸ್ಮರಿಸಿತು. ಭಕ್ತರಿಗೆ ಪ್ರಸಾದ ವಿತರಿಸಲಾಯಿತು. ಭಕ್ತರು ಬೆಳಿಗ್ಗೆಯಿಂದಲೇ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಮೆರವಣಿಗೆಯು ಬಜಾರ್ ರಸ್ತೆ, ಗರುಡಗಂಭ ವೃತ್ತ, ವಿ.ವಿ.ರಸ್ತೆಯಲ್ಲಿ ಸಂಚರಿಸಿ, ಸಿ.ಎಂ.ರಸ್ತೆಯಲ್ಲಿ ಸಾಗಿತು. ಮೆರವಣಿಗೆ ಉದ್ದಕ್ಕೂ ಹಿಂದೂಪರ ಸಂಘಟನೆಯ ಕಾರ್ಯಕರ್ತರು ಕುಣಿದು ಕುಪ್ಪಳಿಸಿದರು. ಯುವತಿಯರು, ಮಹಿಳೆಯರು, ಮಕ್ಕಳು ಹಾಗೂ ಯುವಕರು ಕೇಸರಿ ಶಾಲು ಹಾಕಿಕೊಂಡು ಬಾವುಟ ಹಿಡಿದು ಹಾಡಿಗೆ ತಕ್ಕಂತೆ ಕುಣಿದು ಸಂಭ್ರಮಿಸಿದರು.





ಕೆ.ಆರ್.ನಗರದಲ್ಲಿ ಹನುಮ ಜಯಂತಿ ಅಂಗವಾಗಿ ಬುಧವಾರ ಬೃಹತ್ ಹನುಮಂತೋತ್ಸವ ಶೋಭಾಯಾತ್ರೆ ಮೆರವಣಿಗೆ ನಡೆಯಿತು. ಗಣ್ಯರು ಮತ್ತು ಸ್ವಾಮೀಜಿಗಳು ಪಾಲ್ಗೊಂಡಿದ್ದರು. ಶೋಭಾಯಾತ್ರೆಯಲ್ಲಿ ಭಾಗವಹಿಸಿದ್ದ ಅಪಾರ ಜನಸ್ತೋಮವನ್ನು ಬಲ ಚಿತ್ರದಲ್ಲಿ ಕಾಣಬಹುದು.

ಪಟ್ಟಣ ಸೇರಿದಂತೆ ಕೆಆರ್.ನಗರ ತಾಲೂಕು ಹಾಗೂ ವಿವಿಧೆಡೆಗಳಿಂದ ಆಗಮಿಸಿದ್ದ ಹನುಮ ಭಕ್ತರಿಗೆ ಗರುಡಗಂಭ ವೃತ್ತದಲ್ಲಿ ಸಂಚರಿಸಿದ ಸಂದರ್ಭದಲ್ಲಿ ಮುಸ್ಲಿಂ ಬಾಂಧವರು ಭಕ್ತರಿಗೆ ಹಣ್ಣು ಸಿಹಿ ಜತೆಗೆ ಮಜ್ಜಿಗೆ ನೀಡಿ ದೇವರಿಗೆ ನಮಿಸಿ ಭಾವೈಕ್ಯತೆ ಮೆರೆದರಲ್ಲದೇ, ರಾಜಸ್ಥಾನ ಸಮಾಜದವರು, ಗಿರವಿ ಅಂಗಡಿಗಳ ಮಾಲೀಕರು, ಮಿಲ್ಟ್ರಿ ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಮತ್ತು ದಾನಿಗಳು ಪ್ರಸಾದ, ಪಾನಕ, ಮಜ್ಜಿಗೆ ವಿತರಿಸಿದರು.

ಮಾರುತಿ ಯುವಕ ಸಂಘದ ವತಿಯಿಂದ ವೀರಾಂಜನೇಯ ಸ್ವಾಮಿ ಮೂರ್ತಿಯನ್ನು ಅಲಂಕೃತಗೊಂಡ ವಾಹನದಲ್ಲಿ ಕೂರಿಸಿ, ವಿವಿಧ ಕಲಾ ತಂಡಗಳೊಂದಿಗೆ ಆಂಜನೇಯ ಬಡಾವಣೆಯ ಆಂಜನೇಯ ದೇವಾಲಯದ ಬಳಿಯಿಂದ ಮೆರವಣಿಗೆಗೆ ಗಾವಡಗೆರೆ ಗುರುಲಿಂಗ ಜಂಗಮ ಮಠದ ಶ್ರೀ ನಟರಾಜ ಸ್ವಾಮೀಜಿ, ಶಾಸಕ.ಡಿ.ರವಿಶಂಕರ್ ಹಾಗೂ ಅವರ ಪತ್ನಿ ಸುನೀತಾ ರವಿಶಂಕರ್, ಜಿವಾ ಅರ್ಥೋ ಕೇರ್‌ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಖ್ಯಾತ ಮೂಳೆ ತಜ್ಞ ಡಾ.ಕೆ.ಆರ್.ಗೌತಮ್ ಸೇರಿದಂತೆ ಅನೇಕ ಮುಖಂಡರು. ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಯೋಜನಾ ಪ್ರಾಧಿಕಾರದ ಅಧ್ಯಕ್ಷ ಗಡ್ಡ ಮಹೇಶ್, ನಿರ್ದೇಶಕ ಕೆ.ಎನ್.ಪ್ರಸನ್ನ ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ, ಕಾಂಗ್ರೆಸ್ ಮುಖಂಡ ಗಂಧನಹಳ್ಳಿ ವೆಂಕಟೇಶ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ.ರಮೇಶ್, ಮಾರುತಿ ಯುವಕರ ಸಂಘದ ಅಧ್ಯಕ್ಷ ಗೌತಮ್ ಜಾಧವ್, ಗೌರವಾಧ್ಯಕ್ಷ ಎಸ್.ಯೋಗಾನಂದ್, ಪುರಸಭೆ ಮಾಜಿ ಅಧ್ಯಕ್ಷರಾದ ಕೋಳಿ ಪ್ರಕಾಶ್, ಶಿವುನಾಯಕ್, ಸದಸ್ಯರಾದ ಶಂಕರ್ ಸ್ವಾಮಿ, ಕೆ.ವಿನಯ್, ಮುಖಂಡ ಶಿಲ್ಪ ಶ್ರೀನಿವಾಸ್, ಶ್ರೀ ಮಾರುತಿ ಯುವಕರ ಸಂಘದ, ಪ್ರಚಾರ ಸಮಿತಿ ಅಧ್ಯಕ್ಷ ದರ್ಶನ್(ಮಂಡಿ), ಪೂಜಾ ಸಮಿತಿ ಅಧ್ಯಕ್ಷ ಅಂಗಡಿ ಲೋಕಿ, ಖಜಾಂಚಿ ಕೆಂಚಿ ಮಂಜು, ಪದಾಧಿಕಾರಿಗಳಾದ ವಿನಯ್, ಧನುಷ್, ನವೀನ್, ಸುಹಾಸ್, ತೇಜಸ್, ಮಹೇಂದ್ರ (ಮಹಿ), ಕನಕ, ಕರುಣಾ, ಪುನೀತ್, ಉಜ್ವಲ್, ಹೇಮಂತ್, ಗಿರೀಶ್ ಸೇರಿದಂತೆ ಅನೇಕ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಕಳೆದ ಮಂಗಳವಾರ ರಾತ್ರಿ ದೇವಾಲಯದಲ್ಲಿ ತೊಟ್ಟಿಲು ಸೇವೆಗೆ ಮಾಜಿ ಸಚಿವ ಸಾ.ರಾ.ಮಹೇಶ್ ಚಾಲನೆ ನೀಡಿದರು. ಬಳಿಕ ಪಟಾಕಿ ಪ್ರದರ್ಶನ ಬಹಳ ವಿಶಿಷ್ಟವಾಗಿ ಜರುಗಿತು. ಕಳೆದ 9 ದಿನಗಳಿಂದ ಆಂಜನೇಯಸ್ವಾಮಿ ದೇವಾಲಯದಲ್ಲಿ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿದವು.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿಷ್ಣುವರ್ಧನ್ ಮಂಗಳವಾರದಿಂದ ಮೊಕ್ಕಾಂ ಹೂಡಿ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಈ ಬಾರಿ ಕೂಡ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹಲವು ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದರು. ದಕ್ಷಿಣ ವಿಭಾಗದ ಡಿವೈಎಸ್‌ಪಿ ಟಿ.ಬಿ.ರಾಜಣ್ಣ, ಪೊಲೀಸ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ನೇತೃತ್ವದಲ್ಲಿ ಮೂರು ಮಂದಿ ಡಿವೈಎಸ್‌ಪಿ, ಹಾಗೂ ಏಳು ಮಂದಿ ಸರ್ಕಲ್ ಇನ್ಸ್‌ಪೆಕ್ಟರ್, 26 ಮಂದಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, 40 ಮಂದಿ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಮತ್ತು 285 ಮುಖ್ಯಪೇದೆ, ಪೊಲೀಸರು ಸೇರಿದಂತೆ ಕೆಎಸ್‌ಆರ್‌ಪಿ 3 ತುಕಡಿ, ಡಿಆರ್ ಪೊಲೀಸ್ ಮೂರು ತುಕಡಿಯನ್ನು ಭದ್ರತೆಗಾಗಿ ನಿಯೋಜಿಸಲಾಗಿತ್ತು.

ಕೀಳರಿಮೆ ಬಿಟ್ಟು ಹೋರಾಟದ ಮೂಲಕ ನಮ್ಮ ಹಕ್ಕು ಪಡೆಯೋಣ

ತಿ.ನರಸೀಪುರ, ಡಿ.10– ದೇಶದಲ್ಲಿ ಜನಸಂಖ್ಯೆಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ನಾಯಕ ಸಮುದಾಯ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದೆ ಎಂಬ ಬಗ್ಗೆ ಕೀಳಿರಿಮೆ ಬೆಳೆಸಿಕೊಳ್ಳದೇ ಹೋರಾಟದ ಮೂಲಕ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಮುಂದಾಗಬೇಕಿದೆ ಎಂದು ಕರ್ನಾಟಕ ರಾಜ್ಯ ನಾಯಕರ ಯುವ ಸೇನೆಯ ಅಧ್ಯಕ್ಷ ದೇವರಾಜ್ ಟಿ.ಕಾಟೂರ್ ತಿಳಿಸಿದ್ದಾರೆ.



ನಾಯಕರ ಯುವ ಸೇನೆಯ ತಾಲೂಕು ಘಟಕದ ಪದಾಧಿಕಾರಿಗಳ ಪಟ್ಟಿ ಬಿಡುಗಡೆ ಕಾರ್ಯಕ್ರಮದಲ್ಲಿ ಸೇನೆಯ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರ್ ಅವರನ್ನು ಸನ್ಮಾನಿಸಲಾಯಿತು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಬುಧವಾರ ನಾಯಕ ಸೇನೆಯನ್ನು ತಾಲೂಕಿನಲ್ಲಿ ಬಲಪಡಿಸುವ ಸಂಬಂಧ ಪದಾಧಿಕಾರಿಗಳ ಆಯ್ಕೆಗಾಗಿ ಕರೆಯಲಾಗಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ನಮ್ಮ ಸಮಾಜ ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದಿರಬಹುದು. ಆದರೆ ರಾಜ ಮಹಾರಾಜರಾಗಿ ಆಳ್ವಿಕೆ ಮಾಡುವುದರ ಜೊತೆಗೆ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಸಮಾಜವಾಗಿದೆ. ಹಾಗಾಗಿ ಸಮಾಜದ ಯಾರೊಬ್ಬರು ನಾಯಕ ಸಮಾಜದಲ್ಲಿ ಹುಟ್ಟಿದ್ದಕ್ಕೆ ಕೀಳರಿಮೆ ಬೆಳೆಸಿಕೊಳ್ಳದೇ ಇಂತಹ ಜನಾಂಗದಲ್ಲಿ ಜನಿಸಿರುವುದಕ್ಕೆ ಹೆಮ್ಮೆ ಪಡಬೇಕಿದೆ ಎಂದರು.

ಬಾಬಾ ಸಾಹೇಬ್ ಅಂಬೇಡ್ಕರ್ ಬರೆದ ಸಂವಿಧಾನದಲ್ಲಾಗಲೀ ಅಥವಾ ಮಹರ್ಷಿ ವಾಲ್ಮೀಕಿ ರಾಮಾಯಣದಲ್ಲಾಗಲಿ ಯಾರೂ ಮೇಲು ಯಾರು ಕೀಳೆಂಬ ಭೇದ ಭಾವ ಇಲ್ಲ. ದೇಶದಲ್ಲಿರುವ ಪ್ರತಿಯೊಬ್ಬ ಜಾತಿ ಜನಾಂಗದವರು ಇಲ್ಲಿ ಕನಿಷ್ಠರಲ್ಲ, ಶ್ರೇಷ್ಠರೂ ಅಲ್ಲ ಎಂಬುದನ್ನು ಅರ್ಥ ಮಾಡಿಕೊಂಡು ಸಹಬಾಳ್ವೆಯ ಬದುಕು ಮಾಡಬೇಕಿದೆ, ಎಲ್ಲ ಜಾತಿ ಜನಾಂಗದವರಿಗೂ ತಮ್ಮದೇ ಆದ ಇತಿಹಾಸಗಳಿವೆ, ಸಮಾಜಕ್ಕೆ ಅವರದ್ದೇ ಆದ ಕೊಡುಗೆಗಳಿವೆ ಎಂದು ತಿಳಿಸಿದರು.

ತಿ.ನರಸೀಪುರ ತಾಲೂಕು ಘಟಕಕ್ಕೆ ಪಧಾದಿಕಾರಿಗಳ ಆಯ್ಕೆ

ಇದೇ ವೇಳೆ ನಾಯಕ ಯುವ ಸೇನೆಯ ತಿ.ನರಸೀಪುರ ತಾಲೂಕು ಘಟಕದ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಡಣಾಯಕನಪುರ ಸಿದ್ದರಾಜು, ಉಪಾಧ್ಯಕ್ಷರಾಗಿ ತಲಕಾಡು ನಾಗರಾಜು, ತಿ.ನರಸೀಪುರ ವಿಜಯ್, ಮಹಾ ಕಾರ್ಯದರ್ಶಿಯಾಗಿ ಆಲಗೂಡು ಮಂಜುನಾಥ್, ಪ್ರಧಾನ ಕಾರ್ಯದರ್ಶಿಯಾಗಿ ಜೋಗಯ್ಯ, ಕಾರ್ಯದರ್ಶಿಗಳಾಗಿ ವ್ಯಾಸರಾಜಪುರ ಮಹೇಶ್, ಮಾಲಂಗಿ ಚಂದ್ರು, ಕೇತಹಳ್ಳಿ ಚಂದ್ರು, ಸಂಘಟನಾ ಕಾರ್ಯದರ್ಶಿಯಾಗಿ ರಾಜೇಶ್, ತಲಕಾಡು ಮಾದನಾಯ್ಕ, ಕೇತಹಳ್ಳಿ ಚೆಲುವರಾಜು ಹಾಗು ಕಾನೂನು ಸಲಹೆಗಾರರಾಗಿ ವಕೀಲ ಸುತ್ತೂರು ಶಾಂತನಾಗರಾಜ್‌ರವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಬ್ಯಾಕ್ ಲಾಗ್ ಹುದ್ದೆ ತುಂಬುತ್ತಿಲ್ಲ....!

ಪ.ಜಾತಿ–ಪಂಗಡಗಳಿಗೆ ಮೀಸಲಾದ ಲಕ್ಷಾಂತರ ಬ್ಯಾಕ್ ಲಾಗ್ ಹುದ್ದೆಗಳು ಖಾಲಿ ಇವೆ. ಆದರೆ ಅದನ್ನು ಸರ್ಕಾರ ತುಂಬುತ್ತಿಲ್ಲ. ಸರ್ಕಾರದ ನೀತಿಯಿಂದ ಪ.ಜಾತಿ/ವರ್ಗದವರಿಗೆ ಅನ್ಯಾಯವಾಗುತ್ತಿದೆ ಎಂದು ದೇವರಾಜ್ ಕಾಟೂರ್ ಆರೋಪಿಸಿದರು.

ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ ನಾಗಲಗೆರೆ ಶಿವಕುಮಾರ್, ನಿಲಸೋಗೆ ಸಿದ್ದರಾಜು, ಕಿರಗಸೂರು ಪ್ರಸಾದ್ ರನ್ನು ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಯುವಸೇನೆಯ ಶಿವಶಂಕರ್, ನಾಗಲಗೆರೆ ಶಿವಕುಮಾರ್, ನಿವೃತ್ತ ಶಿಕ್ಷಕ ಬೆಟ್ಟಯ್ಯ, ತಿರುಮಕೂಡಲು ವಾಸು, ಗೋವಿಂದರಾಜ್, ದರ್ಶನ್, ಮಲ್ಲಿಕಾರ್ಜುನ, ಮಂಜುನಾಥ, ಅತ್ತಿಕೆರೆ ನಾಗರಾಜು ಮತ್ತಿತರರಿದ್ದರು.

ಹುಲಿ ಕಾಟದಿಂದ ಹೈರಾಣಾಗಿರುವ ಹನಗೋಡು ಗ್ರಾಮಸ್ಥರು

ಹಸು, ಟಗರು ಕೊಂದು ಪರಾರಿ | ಕಾರ್ಯಾಚರಣೆ ಆರಂಭ



ಹೆಮ್ಮಿಗೆಯಲ್ಲಿ ಆನೆಗಳಿಗೆ ಪೂಜೆ ಮಾಡಿ ಕಾರ್ಯಾಚರಣೆಗೆ ತೆರಳುತ್ತಿರುವ ಅರಣ್ಯ ಸಿಬ್ಬಂದಿ.

ಹನಗೋಡು, ಡಿ.10– ಹುಲಿ ಕಾಟದಿಂದ ಹನಗೋಡು ಭಾಗದ ಗ್ರಾಮಸ್ಥರು ಹೈರಾಣಾಗಿದ್ದು, ಬುಧವಾರ ಬಿ.ಆರ್.ಕಾವಲ್‌ನಲ್ಲಿ ಹಸು, ಗೌಡಿಕೆರೆಯಲ್ಲಿ ಟಗರನ್ನು ಬೇಟೆಯಾಡಿದ್ದರೆ, ಹೆಮ್ಮಿಗೆ ಗ್ರಾಮದ ಬಳಿ ದರ್ಶನ ನೀಡಿ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿರುವ ಹಿನ್ನೆಲೆಯಲ್ಲಿ ಹುಲಿ ಸೆರೆಗಾಗಿ ಕೂಂಬಿಂಗ್ ಕಾರ್ಯಾಚರಣೆ ಆರಂಭಗೊಂಡಿದೆ.

ಮಂಗಳವಾರ ಮಧ್ಯರಾತ್ರಿ ಬಿ.ಆರ್.ಕಾವಲ್ ಗ್ರಾಮದ ತೋಳುಮಲೇಗೌಡರ ಪುತ್ರ ಚಂದ್ರುರವರ ಕೊಟ್ಟಿಗೆಗೆ ನುಗ್ಗಿರುವ ಹುಲಿಯು ಹಸುವೊಂದನ್ನು ಕೊಂದಿದೆ. ಈ ವೇಳೆ ಇತರೆ ಜಾನುವಾರುಗಳ ಕಿರುಚಾಟದಿಂದ ಎಚ್ಚರಗೊಂಡು ನೋಡಲಾಗಿ ಹುಲಿಯು ಹಸುವನ್ನು ಎಳೆದೊಯ್ಯುತ್ತಿರುವುದನ್ನು ಕಂಡು ಗಾಬರಿಯಿಂದ ಉಳಿದ ಜಾನುವಾರುಗಳನ್ನು ಮನೆಯೊಳಗೆ ಕಟ್ಟಿಕೊಂಡರು. ಮನೆಯವರ ಕೂಗಾಟದಿಂದ ಹುಲಿಯು ಸಹ ಗಾಬರಿಯಿಂದ ಹಸುವಿನ ಶವವನ್ನು ಬಿಟ್ಟು ಕಾಡಿನತ್ತ ಪರಾರಿಯಾಯಿತು. ಇದೇ ಹುಲಿ ಬುಧವಾರ ಮಧ್ಯಾಹ್ನ 12ರ ವೇಳೆಯಲ್ಲಿ ಮತ್ತೆ ಬೇಟೆಯಾಡಿದ್ದ ಹಸುವನ್ನು ತಿನ್ನಲು ಬರುತ್ತಿದ್ದುದ್ದನ್ನು ಕಂಡ ಚಂದ್ರು ಸಹೋದರ ರವಿ ಮತ್ತು ಮನೆಯವರು ಕೂಗಿಕೊಂಡಿದ್ದರಿಂದ ಸ್ಥಳದಿಂದ ಕಾಲ್ಕಿತ್ತಿದೆ.

ಮತ್ತೊಂದೆಡೆ ಬಿ.ಆರ್.ಕಾವಲ್‌ನ ಪಕ್ಕದ ಅರಣ್ಯದಂಚಿನ ಗೌಡಿಕೆರೆ ಬಳಿಯಲ್ಲಿ ಹುಲಿಯು ಟಗರೊಂದನ್ನು ಕೊಂದು ಹಾಕಿದ ನಂತರ ಹೊಲದಲ್ಲಿದ್ದ ಹುಲಿಯನ್ನು ರೈತರು ಕಂಡು ಕೂಗಾಟ ನಡೆಸಿದ್ದರಿಂದ ಕಾಡಿನತ್ತ ಪರಾರಿಯಾಗಿದೆ ಮಂಗಳವಾರ ಹತ್ತಿರದ ಮುತ್ತುರಾಯನಹೊಸಹಳ್ಳಿ ಅರಣ್ಯ ಪ್ರದೇಶದಂಚಿನ ನಾಗಮಂಗಲದಲ್ಲಿ ಹುಲಿ ಕಾಣಿಸಿಕೊಂಡಿತ್ತು.

ಹುಲಿ ಅವಾಂತರದಿಂದ ಹೈರಾಣಾಗಿರುವ ಗ್ರಾಮಸ್ಥರ ಮನವಿ ಮೇರೆಗೆ ಪ್ರಾದೇಶಿಕ ಅರಣ್ಯ ವಿಭಾಗ ಹಾಗೂ ವನ್ಯಜೀವಿ ವಿಭಾಗದವರು ಜಂಟಿಯಾಗಿ ಸಾಕಾನೆಗಳಾದ ಭೀಮ, ಏಕಲವ್ಯ, ವರಲಕ್ಷ್ಮಿ ಹಾಗೂ ಎರಡು ಥರ್ಮಲ್ ಡ್ರೋಣ್ ಮುಖಾಂತರ ಹೆಮ್ಮಿಗೆ ಬಳಿಯ ಅರಣ್ಯದಂಚಿನಲ್ಲಿ ನಾಗರಹೊಳೆ ಉದ್ಯಾನದ ಪಶು ವೈದ್ಯ ಡಾ.ರಮೇಶ್‌ರೊಂದಿಗೆ ಬುಧವಾರ ಸಂಜೆಯಿಂದ ಕೂಂಬಿಂಗ್ ಆರಂಭಿಸಲಾಗಿದೆ. ಹುಲಿಯು ಮುತ್ತುರಾಯನಹೊಸಹಳ್ಳಿ ಅರಣ್ಯ ಪ್ರದೇಶದ ಕಡೆಗೆ ತೆರಳಿರುವ ಹೆಜ್ಜೆ ಗುರುತು ಪತ್ತೆಯಾಗಿದ್ದು, ಇದೀಗ ರಾತ್ರಿಯೂ ಕೂಂಬಿಂಗ್ ನಡೆಸಲಾಗುತ್ತಿದೆ ಎಂದು ಎಸಿಎಫ್ ಲಕ್ಷ್ಮಿಕಾಂತ್ ತಿಳಿಸಿದ್ದಾರೆ.

ಗಿರಿಜನ ವಿವಿದೋದ್ದೇಶ ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಶೈಲೇಂದ್ರ ಹಾಗೂ ಉಪಾಧ್ಯಕ್ಷೆ ಗೀತಾ ಅವರನ್ನು ನಿರ್ದೇಶಕರು ಅಭಿನಂದಿಸಿದರು.

ಹೆಚ್.ಡಿ.ಕೋಟೆ, ಡಿ.10– ತಾಲೂಕು ಗಿರಿಜನ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘದ 2025–30ನೇ ಸಾಲಿಗೆ ಅಧ್ಯಕ್ಷರಾಗಿ ಶೈಲೇಂದ್ರ ಹಾಗೂ ಉಪಾಧ್ಯಕ್ಷರಾಗಿ ಗೀತಾ ಅವಿರೋಧವಾಗಿ ಆಯ್ಕೆಯಾದರು.

ಬುಧವಾರ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶೈಲೇಂದ್ರ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಗೀತಾ ಬಿಟ್ಟು ಬೇರ್‍ಯಾರು ನಾಮಪತ್ರ ಸಲ್ಲಿಸದಿದ್ದರಿಂದ ಚುನಾವಣಾಧಿಕಾರಿ ಅವಿರೋಧ ಆಯ್ಕೆ ಘೋಷಣೆ ಮಾಡಿದರು.

ಇತ್ತೀಚೆಗೆ ಸಂಘದ 11 ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶೈಲೇಂದ್ರ ಅವರ ತಂಡ 9 ಸ್ಥಾನ ಜಯಗಳಿಸಿದ್ದು ಇವರ ವಿರುದ್ಧ ತಂಡ 2 ಸ್ಥಾನಗಳನ್ನು ಮಾತ್ರ ಗೆದ್ದಿತು. ಹಾಗಾಗಿ ಶೈಲೇಂದ್ರ ಅವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾಧಿಕಾರಿ ಹರೀಶ್ ಅವಿರೋಧವಾಗಿ ಆಯ್ಕೆ ಘೋಷಣೆ ಮಾಡಿದ ನಂತರ ಅಧ್ಯಕ್ಷ, ಉಪಾಧ್ಯಕ್ಷರನ್ನು ನಿರ್ದೇಶಕರು ಅಭಿನಂದಿಸಿದರು.

ನಂತರ ಮಾತನಾಡಿದ ನೂತನ ಅಧ್ಯಕ್ಷ ಶೈಲೇಂದ್ರ, ಗಿರಿಜನ ಸಮುದಾಯದ ಜನರು ನಮಗೆ ಸಹಕಾರ ಸಂಘದ ಆಡಳಿತ ನಡೆಸಲು ಮೊದಲ ಬಾರಿಗೆ ಅವಕಾಶ ನೀಡಿದ್ದು ಬುಡಕಟ್ಟು ಸಮುದಾಯಗಳ ಶ್ರೇಯೋಭಿವೃದ್ಧಿಗೆ ಸಾಮಾಜಿಕ ನ್ಯಾಯದ ಅಡಿಯಲ್ಲಿ ಪ್ರಾಮಾಣಿಕವಾಗಿ ಎಲ್ಲರ ಸಹಕಾರದೊಂದಿಗೆ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ನಿರ್ದೇಶಕರುಗಳಾದ ದೇವರಾಜು, ಪುಟ್ಟಬಸವಯ್ಯ, ಮಹದೇವ, ಕೆ. ಮಾರ, ಜೆ.ಟಿ. ಅಯ್ಯಪ್ಪ, ಬಳ್ಳೆ ರಮೇಶ, ಕರ್ನಾಟಕ ಲ್ಯಾಂಪ್ಸ್ ರಾಜ್ಯ ಸಹಕಾರ ಮಂಡಳಿ ಅಧ್ಯಕ್ಷ ಹಾಗೂ ಲ್ಯಾಂಪ್ಸ್ ನಿರ್ದೇಶಕ ಬಿ.ಕಾವೇರ, ಕರ್ನಾಟಕ ರಾಜ್ಯ ಲ್ಯಾಂಪ್ಸ್ ಮಹಾಮಂಡಳಿ ನಿರ್ದೇಶಕ ಮುದ್ದಯ್ಯ, ಮುಖಂಡರುಗಳಾದ ಕಾಳ ಕಲ್ಕರ್, ರತ್ನಮ್ಮ, ಚಿಕ್ಕಬೊಮ್ಮ, ಜಯರಾಜ, ವೇಣುಗೋಪಾಲ, ನಿಂಗೇಗೌಡ, ನಾಗರಾಜಪ್ಪ ಸಿದ್ದರಾಜು, ಲೋಹಿತ ಕೀರ್ತಿ ಹಾಗೂ ಮುಖಂಡರು ಇದ್ದರು.

ಬಿಜೆಪಿ ಮಹಿಳಾ ಮೋರ್ಚಾ ಖಂಡನೆ

ಪಿರಿಯಾಪಟ್ಟಣ: ಮುಖ್ಯಮಂತ್ರಿ ಸಿದ್ದರಾಮಯ್ಯ ಮಹಿಳಾ ನಾಯಕರ ವಿರುದ್ಧ ಬಳಸುತ್ತಿರುವ ಅವಹೇಳನಕಾರಿ ಪದಪ್ರಯೋಗ ಈಗಲೂ ಮುಂದುವರೆಯುತ್ತಿದ್ದು ಇದನ್ನು ಭಾರತೀಯ ಜನತಾ ಪಕ್ಷ ಮಹಿಳಾ ಮೋರ್ಚ ತೀವ್ರವಾಗಿ ಖಂಡಿಸುತ್ತದೆ ಎಂದು ಮೈಸೂರು ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷ ನಳಿನಿ ಗೌಡ ತಿಳಿಸಿದ್ದಾರೆ.

ಈ ಹಿಂದೆ ಕೂಡ ಭಾರತದ ಗೌರವಾನ್ವಿತ ಮೊದಲ ಬುಡಕಟ್ಟು ಸಮುದಾಯದ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಅವಮಾನಿಸಿದ್ದರು. ಈಗ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನೂ ಅವಹೇಳನ ಮಾಡಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಸಿದ್ದರಾಮಯ್ಯನವರು ಕೂಡಲೇ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

ಮೂಗೂರು ತ್ರಿಪುರ ಸಂದರಿ ಅಮ್ಮನವರ ಹುಂಡಿಯಲ್ಲಿ 23.10 ಲಕ್ಷ ರೂ ಸಂಗ್ರಹ

ಮೂಗೂರು: ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಹುಂಡಿ ಎಣಿಕೆ ಕಾರ್ಯ ದೇವಾಲಯದ ಆವರಣದಲ್ಲಿ ಬುಧವಾರ ನಡೆಯಿತು. ಕಳೆದ ಬಾರಿ 6 ತಿಂಗಳಲ್ಲಿ 28,03,925. ಲಕ್ಷ ರೂ. ಸಂಗ್ರಹವಾಗಿದ್ದು ಈ ಬಾರಿ 6 ತಿಂಗಳಲ್ಲಿ 23,10,195 ಲಕ್ಷ ರೂಗಳು ಸಂಗ್ರಹವಾಗಿದೆ.



ಹುಂಡಿಯಲ್ಲಿನ ಹಣವನ್ನು ಮೂಗೂರು ಎಸ್‌ಬಿಐ ಶಾಖೆಯ ದೇವಾಲಯದ ಖಾತೆಗೆ ಜಮಾ ಮಾಡಲಾಗಿದೆ ಎಂದು ಕಂದಾಯ ಇಲಾಖೆ ಆರ್‌ಐ ಬಸವರಾಜು ತಿಳಿಸಿದರು.

ಈ ಸಂದರ್ಭದಲ್ಲಿ ನಾಡ ಕಚೇರಿಯ ಉಪ ತಹಸೀಲ್ದಾರ್ ಲಕ್ಷ್ಮಿ, ಮೂಗೂರು ಎಸ್‌ಬಿಐ ಶಾಖೆಯ ವ್ಯವಸ್ಥಾಪಕಿ ಕೋಕಿಲ ಪೊನ್ನಪ್ಪ, ಪ್ರಜ್ವಲ್, ಕಾರ್ತಿಕ, ದಿವ್ಯ, ಗೌಡರ ಎಂ.ಪಿ.ನಾಗರಾಜು, ಪಾರು ಪತ್ತೇಗಾರ ಸಾಗರ್, ಗ್ರಾಮಲೆಕ್ಕಿಗರಾದ ಪ್ರಮೋದ್, ಪದ್ಮಶ್ರೀ, ಚೈತ್ರ, ಶೃತಿ, ಗೀತಾ ವಿಜಯ್, ಗ್ರಾಮ ಸಹಾಯಕರು ಇತರರು ಹಾಜರಿದ್ದರು.

ಗಬ್ಬೆದ್ದು ನಾರುತ್ತಿರುವ ಕೆರೆಯ ನೀರು

ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಹರಳಹಳ್ಳಿ ಗ್ರಾಮು ಕೆರೆಯು ಗ್ರಾಮದ ಪಕ್ಕದಲ್ಲಿದ್ದು ಹಲವಾರು ವರ್ಷಗಳ ಹಿಂದೆ ಈ ಕೆರೆಯು ಜನರಿಗೆ ಕುಡಿಯಲು ಬಹಳ ಉಪಯೋಗವಾಗಿತ್ತು.



ಇದೀಗ ಈ ಕೆರೆಯು ಸಂಪೂರ್ಣ ಮಲಿನವಾಗಿದ್ದು ದನ ಕರುಗಳಿಗೆ, ಸಾಕು ಪ್ರಾಣಿಗಳಿಗೆ ಕುಡಿಯಲು ಯೋಗ್ಯವಿಲ್ಲದೆ ದುರ್ನಾಥ ಬೀರುತ್ತಿದೆ. ಇದರಿಂದ ಗ್ರಾಮಸ್ಥರಿಗೆ ಬಹಳ ತೊಂದರೆಯಾಗಿದ್ದು ಇಡೀ ಗ್ರಾಮವೇ ಅನಾರೋಗ್ಯದಿಂದ ನರಳುತ್ತಿದೆ ಕೂಡಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಈ ಕೆರೆಯನ್ನು ಸ್ವಚ್ಛಗೊಳಿಸಿ ಗ್ರಾಮದ ಜನರ ಆರೋಗ್ಯ ಕಾಪಾಡಬೇಕೆಂದು ಮುಖಂಡರಾದ ವೇದಮೂರ್ತಿ ಶ್ರೀಕಂಠ ಆರಾಧ್ಯರು ಹಾಗೂ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಕಾಂಗ್ರೆಸ್‌ಗೆ ನೇಮಕ

ತಿ.ನರಸೀಪುರ, ಡಿ.10– ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯನ್ನಾಗಿ ತಿರುಮಕೂಡಲು ಟಿ.ಎಸ್.ಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಬಿ.ಜೆ.ವಿಜಯಕುಮಾರ್ ಪ್ರಕಟಣೆ ತಿಳಿಸಿದ್ದಾರೆ.



ನಂ.ಗೂಡು–ಊಟಿ ಹೆದ್ದಾರಿ ಅಭಿವೃದ್ಧಿ ಹಿನ್ನೆಲೆ

ಮರಗಳ ಹನನ ಸಂಬಂಧ ಕರೆಯಲಾಗಿದ್ದ ಸಭೆಯಲ್ಲಿ ಪರಿಸರ ಪ್ರೇಮಿಗಳು, ರೈತರ ಆಕ್ರೋಶ

ಸಭೆ ರದ್ದು, ಮತ್ತೊಮ್ಮೆ ಸಭೆ ಕರೆಯಲು ನಿರ್ಧಾರ

ನಂಜನಗೂಡು: ಸಾರ್ವಜನಿಕರಿಗೆ ಸಮರ್ಪಕ ಮಾಹಿತಿ ನೀಡಿಲ್ಲ. ಕಾಟಾಚಾರಕ್ಕೆ ಸಭೆಯನ್ನು ಆಯೋಜಿಸಲಾಗಿದೆ ಎಂದು ಪರಿಸರ ಪ್ರೇಮಿಗಳು ಆಕ್ಷೇಪ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ರಸ್ತೆ ಅಭಿವೃದ್ಧಿಪಡಿಸುವ ಸಲುವಾಗಿ ನಂಜನಗೂಡು–ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ 98 ವಿವಿಧ ಜಾತಿ ಮರಗಳನ್ನು ತೆರವುಗೊಳಿಸುವ ಸಲುವಾಗಿ ಕರೆಯಲಾಗಿದ್ದ ಸಾರ್ವಜನಿಕ ಅಹವಾಲು ಸಭೆಯನ್ನು ರದ್ದುಪಡಿಸಿ ಹೆಚ್ಚಿನ ಪ್ರಚಾರದೊಂದಿಗೆ ಮತ್ತೊಮ್ಮೆ ಸಭೆ ಕರೆಯಲು ತೀರ್ಮಾನಿಸಲಾಯಿತು.

ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಬರುವ ಮುದ್ದಹಳ್ಳಿ ಸಮೀಪ ಸರಪಳಿ ಸಂಖ್ಯೆ 180.680ರಿಂದ 181.520ರವರೆಗಿನ ಮುಖ್ಯ ರಸ್ತೆಯಲ್ಲಿ 98 ವಿವಿಧ ಜಾತಿಯ ಮರಗಳನ್ನು ರಸ್ತೆ ಅಭಿವೃದ್ಧಿಪಡಿಸುವ ಸಲುವಾಗಿ ತೆರವುಗೊಳಿಸುವ ಸಲುವಾಗಿ ಬುಧವಾರ ತಾಲೂಕಿನ ಸಿಂಧುವಳ್ಳಿಪುರ ಸಮೀಪದಲ್ಲಿರುವ ಸಂತಾನ ಗಣಪತಿ ದೇವಾಲಯದ ಬಳಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸಾರ್ವಜನಿಕ ಅಹವಾಲು ಸಭೆಯನ್ನು ಕರೆದಿದ್ದರು.

ನಿಗಧಿತ ಸಭೆಗೆ ಆಗಮಿಸಿದ ಪರಿಸರ ಪ್ರೇಮಿಗಳು, ರೈತ ಸಂಘಟನೆಯ ಪದಾಧಿಕಾರಿಗಳು ಹಾಗೂ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಯಾವುದೇ ಪ್ರಚಾರವನ್ನು ನೀಡದೆ ಕಾಟಾಚಾರಕ್ಕೆ ಸಭೆಯನ್ನು ಆಯೋಜಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹಲವರು ತಹಸೀಲ್ದಾರ್ ಹಾಗೂ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಯಾವೊಬ್ಬ ಜವಾಬ್ದಾರಿಯುತ ಅಧಿಕಾರಿಯೂ ಅಹವಾಲು ಕೇಳಲು ಸಭೆಯಲ್ಲಿ ಭಾಗವಹಿಸಿಲ್ಲ. ಅಭಿವೃದ್ಧಿ ಹೆಸರಿನಲ್ಲಿ ಮರಗಳನ್ನು ಕಡಿದು ಪರಿಸರವನ್ನು ನಾಶ ಮಾಡಲಾಗುತ್ತಿದೆ. ರಸ್ತೆ ಅಭಿವೃದ್ಧಿಪಡಿಸಬೇಕಿದ್ದಲ್ಲಿ ರಸ್ತೆ ಅಗಲೀಕರಣದ ಬದಲಾಗಿ ಫ್ಲೈ ಓವರ್ ನಿರ್ಮಿಸಲಿ ಹಾಗೂ ಈಗಾಗಲೇ ಮೈಸೂರು ನಂಜನಗೂಡು ರಸ್ತೆಯಲ್ಲಿ ಟೋಲ್‌ನಲ್ಲಿ ದುಬಾರಿ ಸುಂಕ ವಸೂಲು ಮಾಡಲಾಗುತ್ತಿದ್ದು ನಂಜನಗೂಡು ನಗರ ವ್ಯಾಪ್ತಿಯಲ್ಲಿ ಸರ್ವೀಸ್ ರಸ್ತೆ ನಿರ್ಮಿಸುವಂತೆ ಹಲವು ವರ್ಷಗಳಿಂದ ಸ್ಥಳೀಯರು ಹೋರಾಟ ನಡೆಸುತ್ತಿದ್ದರೂ ಅಧಿಕಾರಿಗಳು ಯಾವುದೇ ಕ್ರಮಕ್ಕೆ ಮುಂದಾಗಿಲ್ಲ ಎಂದು ದೂರಿದರು.



ಮರಗಳನ್ನು ತೆರವುಗೊಳಿಸುವ ಸಲುವಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಕರೆದಿದ್ದ ಸಾರ್ವಜನಿಕ ಅಹವಾಲು ಸಭೆಯನ್ನುದ್ದೇಶಿಸಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುಮಿತ್ರ ಮಾತನಾಡಿದರು.

ಕೊನೆಗೆ ಹೆಚ್.ಡಿ.ಕೋಟೆ ಅರಣ್ಯ ವಲಯದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುಮಿತ್ರ ಈ ದಿನದ ಸಭೆಯನ್ನು ರದ್ದುಪಡಿಸಿರುವುದಾಗಿ ಪ್ರಕಟಿಸಿ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಹೊಸದಾಗಿ ಇನ್ನೊಂದು ದಿನ ಸಭೆ ಕರೆಯುವುದಾಗಿ ತಿಳಿಸಿದರು. ಸಭೆಯಲ್ಲಿ ಆರ್‌ಎಫ್‌ಓ ನಿತೀನ್, ಮಲ್ಲಹಳ್ಳಿ ನಾರಾಯಣ್, ಜನ ಸಂಗ್ರಾಮ ಪರಿಷತ್ ರಾಜ್ಯ ಗೌರವಾಧ್ಯಕ್ಷ ನಗರ್ಲೆ ವಿಜಯ್ ಕುಮಾರ್, ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್‌ರಾವ್, ಪರಶುರಾಮೇಗೌಡ, ಕಾರ್ಯ ಬಸವಣ್ಣ, ಶಂಕರಪುರ ಸುರೇಶ್, ಪಾಲಹಳ್ಳಿ ಪ್ರಸನ್ನ ಭಾಗವಹಿಸಿದ್ದರು.

ಮೈಸೂರಲ್ಲಿ ಕಲಾ ಪ್ರತಿಭೋತ್ಸವ

ಮಕ್ಕಳಲ್ಲಿ ಮನೋಸ್ಥೈರ್ಯ ತುಂಬುವುದು ಪೋಷಕರ ಕರ್ತವ್ಯ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಸಲಹೆ



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕರ್ನಾಟಕ ಕಲಾಮಂದಿರ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಆಯೋಜಿಸಿದ್ದ ಕಲಾ ಪ್ರತಿಭೋತ್ಸವದಲ್ಲಿ ವಿದ್ಯಾರ್ಥಿಗಳು ಭರತನಾಟ್ಯ ಪ್ರದರ್ಶಿಸಿದರು.

ಮೈಸೂರು, ಡಿ.10(ಜಿಎ)–ಮಕ್ಕಳು ಸೋಲನ್ನು ಸವಾಲಾಗಿ ಸ್ವೀಕರಿಸಿ ಗೆಲ್ಲುವ ಮನೋಸ್ಥೈರ್ಯ ತುಂಬುವುದು ಪೋಷಕರ ಕರ್ತವ್ಯ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕರ್ನಾಟಕ ಕಲಾಮಂದಿರ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ ಕಲಾ ಪ್ರತಿಭೋತ್ಸವ 2025–26 ಬಾಲ ಪ್ರತಿಭೆ, ಕಿಶೋರ ಪ್ರತಿಭೆ ಹಾಗೂ ಯುವ ಪ್ರತಿಭೆಗಳಿಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಅಭಿವೃದ್ಧಿಯಾಗಲು ಪ್ರೋತ್ಸಾಹ ಅಗತ್ಯ. ಮಕ್ಕಳ ಮನಸ್ಸು ಸೂಕ್ಷ್ಮವಾಗಿದ್ದು, ಸುಂದರವಾಗಿರುತ್ತದೆ. ಗೆಲುವಿನ ಹಾದಿಯಲ್ಲಿ ಸಾಗುವ ರೀತಿ ಅವರಿಗೆ ಸ್ವತಂತ್ರ್ಯ ನೀಡಬೇಕು ಎಂದರು.

ಪಾಲಕರು ತಮ್ಮ ಮಕ್ಕಳ ಬಗ್ಗೆ ಮತ್ತು ಅವರ ಜ್ಞಾನ ತಿಳುವಳಿಕೆ ಮಟ್ಟ ಇವುಗಳ ಬಗ್ಗೆ ಯಾವಾಗಲೂ ಸಕಾರಾತ್ಮಕ ಭಾವನೆ ಹಾಗೂ ಒಳ್ಳೆಯ ದೃಷ್ಟಿಕೋನ ಹೊಂದಿರಬೇಕು. ಮಗುವಿನ ಮನಸ್ಸು ಆಗ ತಾನೇ ಅರಳುವ ಸಂದರ್ಭದಲ್ಲಿಯೇ ಶಾಲೆಗೆ ಸೇರಿಸುತ್ತೇವೆ. ಶಾಲೆ ಹಾಗೂ ಮನೆ ಎರಡರಲ್ಲೂ ಮಗುವನ್ನು ಪ್ರೋತ್ಸಾಹಿಸಿದರೆ ಮಕ್ಕಳು ಸಮರ್ಥ ಪ್ರಜೆಯಾಗಿ ಹೊರಹೊಮ್ಮುತ್ತಾರೆ ಎಂದು ತಿಳಿಸಿದರು.

ರಾಷ್ಟ್ರಕವಿ ಕುವೆಂಪು ಅವರು ಈ ಜಗತ್ತಿಗೆ ಕಣ್ಣು ಬಿಟ್ಟು ಬರುವ ಪ್ರತಿಯೊಂದು ಮಗುವು ವಿಶ್ವ ಪ್ರಜೆಯಾಗಿರುತ್ತದೆ. ವಿಶ್ವ ಚೈತನ್ಯ ಅದರಲ್ಲಿ ಇರುತ್ತದೆ. ಜಗತ್ತಿನಲ್ಲಿ ಎಲ್ಲಿ ಬೇಕಾದರೂ ಯಾವ ವಿಭಾಗದಲ್ಲಿ ಬೇಕಾದರೂ ಪರಿಪೂರ್ಣವಾಗಿ ವಿಕಾಸ ಹೊಂದಿ ತನ್ನ ಚೈತನ್ಯದ ಶ್ರೀಮಂತಿಕೆಯ ಮಟ್ಟವನ್ನು ಹೆಚ್ಚಿಸಿಕೊಳ್ಳುವ ಅವಕಾಶ ಪ್ರತಿಯೊಂದು ಮಗುವಿನಲ್ಲಿ ಇರುತ್ತದೆ ಎಂದು ಹೇಳಿದರು. ಮಕ್ಕಳಲ್ಲಿರುವ ಧನಾತ್ಮಕ ಅಂಶ ಗುರುತಿಸಿ ಅವರನ್ನು ಪ್ರೋತ್ಸಾಹಿಸಿದಾಗ ಅವರ ಪ್ರದರ್ಶನ ಶಕ್ತಿ ಉತ್ತಮವಾಗುತ್ತದೆ. ಅದರ ಬದಲು ಮಕ್ಕಳನ್ನು ಕಡೆಗಣಿಸುವುದು, ಹೀಯಾಳಿಸುವುದು, ಬೇರೆಯವರೊಂದಿಗೆ ಹೋಲಿಸುವುದು ಮಾಡಿದಾಗ ಅವರು ಬೇರೆ ರೀತಿ ವರ್ತಿಸುತ್ತಾರೆ ಎಂದರು.

ಪೋಷಕರು ಮಕ್ಕಳಿಗೆ ಸ್ವಾತಂತ್ರ್ಯ ನೀಡುವುದರ ಜೊತೆಗೆ ಕೆಲವು ನಿಯಂತ್ರಣವನ್ನೂ ಹಾಕಬೇಕು. ಮಕ್ಕಳು ತಮ್ಮ ವ್ಯಕ್ತಿತ್ವದ ನಿರ್ಮಾಣದ ಕಡೆಗೆ ಹೆಚ್ಚು ಗಮನ ಹರಿಸಬೇಕು. ತಮ್ಮ ಓದಿನ ಬಗ್ಗೆ ಗಮನ ನೀಡಬೇಕು. ಉತ್ತಮ ವಿಚಾರಗಳನ್ನು ಆಸಕ್ತಿಯಿಂದ ಕಲಿಯಬೇಕು ಎಂದು ಸಲಹೆ ನೀಡಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಡಿ.ಉದಯ್ ಕುಮಾರ್ ಅವರು ಮಾತನಾಡಿ, ಮಕ್ಕಳೊಂದಿಗೆ ಸಂವಾದ ನಡೆಸಬೇಕು. ಅವರಲ್ಲಿ ಪಠ್ಯದ ಕುರಿತು ಆಸಕ್ತಿ ಹೆಚ್ಚಿಸಬೇಕು ಅವರ ಮನಸ್ಸನ್ನು ಬೋಧನೆಯತ್ತ ತಿರುಗಿಸಬೇಕು. ಅದು ಶಿಕ್ಷಕರಲ್ಲಿ ಮಾತ್ರ ಇರುವ ಕಲೆಯಾಗಿದ್ದು, ಶಿಕ್ಷಕರಲ್ಲಿ ಬದ್ಧತೆ ಅಗತ್ಯವಿದೆ. ಮಕ್ಕಳನ್ನು ಪಠ್ಯಕ್ಕೆ ಸೀಮಿತ ಮಾಡದೇ ಅವರಲ್ಲಿನ ಪ್ರತಿಭೆ ಗುರುತಿಸಿ ಹೊರತರುವುದು ಶಿಕ್ಷಣದ ಸಮಗ್ರ ಭಾಗವಾಗಿ ಪ್ರತಿಭಾ ಕಾರಂಜಿ ಹೆಚ್ಚು ಸೂಕ್ತ ಎಂದರು.

ಸರ್ಕಾರ ಶಾಲಾ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪ್ರತಿಭಾ ಕಾರಂಜಿ, ಮಕ್ಕಳ ಮೇಳ, ಕ್ರೀಡಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಇಲ್ಲಿ ಮಕ್ಕಳು ತಮ್ಮಲ್ಲಿರುವ ಕಲೆ, ಸಾಹಿತ್ಯ, ಜಾನಪದ ಪ್ರಕಾರದ ಪ್ರತಿಭೆಯನ್ನು ತೋರಿ ಸಾಂಸ್ಕೃತಿಕವಾಗಿ ಮುಂದೆ ಬರಬೇಕು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ತೀರ್ಪುಗಾರರಾದ ಶ್ರೀವಾಣಿ, ಲಕ್ಷ್ಮಿ, ರಮ್ಯಾ, ಅನಿತಾ, ಆನಂದ್ ಕುಮಾರ್, ರಮೇಶ್ ಚಂದ್ರ ಎ.ಪಿ. ಚಂದ್ರಶೇಖರ್ ಮತ್ತಿತರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಡೆವಿಲ್ (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಧುರಂದರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆವಿಲ್ (ಕ)	4 ಪ್ರದರ್ಶನಗಳು
ಸಂಗಂ	
ಡೆವಿಲ್ (ಕ)	3 ಪ್ರದರ್ಶನಗಳು
ಲಿಡೋ	
ಮಾಸ್ ಯಾತ್ರಾ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ (ಕ)	4 ಪ್ರದರ್ಶನಗಳು

ಡಿ.13 ಮೈಸೂರಲ್ಲಿ 'ಶರ್ಮಿಷ್ಠೆ' ನಾಟಕದ 25ನೇ ಪ್ರದರ್ಶನ

ಮೈಸೂರು, ಡಿ.10(ಜಿಎ)–ರಂಗತಂಡ 'ರಂಗಸಂಪದ'ದ ವತಿಯಿಂದ, ಹಿರಿಯ ರಂಗಭೂಮಿ ಕಲಾವಿದೆ ಉಮಾಶ್ರೀ ಅವರ ಅಭಿನಯದ 'ಶರ್ಮಿಷ್ಠೆ' ನಾಟಕದ 25ನೇ ಪ್ರದರ್ಶನವನ್ನು ಡಿ.13ರಂದು ಸಂಜೆ 6.30ಕ್ಕೆ ರಾಮಕೃಷ್ಣ ನಗರದ ನಟನ ರಂಗ ಶಾಲೆಯಲ್ಲಿ ನಡೆಯಲಿದೆ ಎಂದು ರಂಗತಂಡದ ಪದಾಧಿಕಾರಿ ಶಿವಲಿಂಗ ಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ 'ಶರ್ಮಿಷ್ಠೆ' ನಾಟಕವು ಹೊಸ ಪ್ರಯೋಗವಾಗಿದ್ದು, ಇದರ ಮೊದಲ ಪ್ರದರ್ಶನವನ್ನು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ರಂಗಾಯಣದ ಸಹಕಾರದೊಂದಿಗೆ ಕಲಾಮಂದಿರ ಆವರಣದಲ್ಲಿ ಏ.19, 20 ರಂದು ಪ್ರದರ್ಶನ ಮಾಡಲಾಗಿತ್ತು. ನಾಟಕಕ್ಕೆ ಉತ್ತಮ ಪ್ರಶಂಸೆ ದೊರೆತಿದ್ದು, ಈವರೆಗೂ ನಾಟಕವು ರಾಜ್ಯದ ಧಾರವಾಡ, ಬೆಳಗಾವಿ, ಶಿವಮೊಗ್ಗ, ತೀರ್ಥಹಳ್ಳಿ, ದಾವಣಗೆರೆ ಮತ್ತು ಬೆಂಗಳೂರಿನಲ್ಲಿ ಪ್ರದರ್ಶನ ಕಂಡಿದ್ದು, ಮೈಸೂರಿನಲ್ಲಿ ಹೆಚ್ಚು ಪ್ರದರ್ಶನಗೊಂಡಿದೆ. ಇಲ್ಲಿವರೆಗೆ 24 ಪ್ರದರ್ಶನ ಕಂಡಿರುವ ನಾಟಕದ 25ನೇ ಪ್ರದರ್ಶನವನ್ನು ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಈ 'ಶರ್ಮಿಷ್ಠೆ' ನಾಟಕವನ್ನು ಡಾ. ಬೇಲೂರು ರಘುನಂದನ್ ಅವರು ರಚಿಸಿದ್ದು, ಚಿದಂಬರ ರಾವ್ ಜಂಬೆ ನಿರ್ದೇಶನದ ಹೊಣೆ ಹೊತ್ತಿದ್ದಾರೆ. ರಂಗಭೂಮಿಯ ಹಿರಿಯ ಕಲಾವಿದೆ ಉಮಾಶ್ರೀ ಅವರ ಅದ್ಭುತ ನಟನೆಯಿಂದ ನಾಟಕ ಹೆಚ್ಚು ಮೆಚ್ಚುಗೆ ಪಡೆದುಕೊಂಡಿದೆ. ನಾಟಕ ವೀಕ್ಷಣೆಗೆ ಪ್ರತಿ ವ್ಯಕ್ತಿಗೆ 300 ರೂ.ದರವಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಲಾಭಿಮಾನಿಗಳು ನಾಟಕವನ್ನು ವೀಕ್ಷಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ವಿ.ಎಂ.ನಾಗೇಶ್, ಅಪ್ಪಯ್ಯ, ಅಕ್ಷರ, ರಚನ ಉಪಸ್ಥಿತರಿದ್ದರು.

ಉದ್ಯೋಗಾಕಾಂಕ್ಷಿಗಳ ಬಂಧನ ಖಂಡಿಸಿ ಪ್ರತಿಭಟನೆ



ಉದ್ಯೋಗಾಕಾಂಕ್ಷಿಗಳನ್ನು ಬಂಧಿಸಿರುವ ಕ್ರಮ ಖಂಡಿಸಿ ಎಐಡಿವೈಓ ಯುವಜನ ಸಂಘಟನೆ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.10(ಜಿಎ)–ಉದ್ಯೋಗಾಕಾಂಕ್ಷಿಗಳಿಗೆ ಕಿಂಚಿತ್ತೂ ಸ್ಪಂದಿಸದಿದ್ದ ರಾಜ್ಯ ಕಾಂಗ್ರೆಸ್ ಸರ್ಕಾರ ಯಾವುದೇ ನೋಟಿಸ್ ನೀಡದೆ ಧರಣಿಗೆ ಸಜ್ಜಾಗುತ್ತಿದ್ದ ಉದ್ಯೋಗಾಕಾಂಕ್ಷಿಗಳನ್ನು ಏಕಾಏಕಿ ಬಂಧಿಸಿರುವ ಕ್ರಮ ಖಂಡಿಸಿ ಎಐಡಿವೈಓ ಯುವಜನ ಸಂಘಟನೆ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಕಾಂಗ್ರೆಸ್ ಸರ್ಕಾರದ ಆಳ್ವಿಕೆಯಲ್ಲಿ ಕನಿಷ್ಠ ಪ್ರತಿಭಟನೆಯ ಹಕ್ಕು ಲಭ್ಯವಿಲ್ಲ ಎಂದು ಇದರಿಂದ ಜಗಜ್ಜಾಹೀರಾಗಿದೆ. ಹಲವು ತಿಂಗಳುಗಳಿಂದ ಮುಖ್ಯಮಂತ್ರಿಗಳ ಭೇಟಿಗೆ ಅವಕಾಶ ಕೇಳುತ್ತಲೇ ಇದ್ದರೂ, ಮುಖ್ಯ ಕಾರ್ಯದರ್ಶಿಗೆ ಉದ್ಯೋಗಾಕಾಂಕ್ಷಿಗಳ ಹಕ್ಕೊತ್ತಾಯಗಳ ಆಗ್ರಹಪತ್ರ ತಲುಪಿಸಿದ್ದರೂ ಕನಿಷ್ಠ ಮಟ್ಟದ ಸ್ಪಂದನೆಯನ್ನೂ ನೀಡದೆ, ಯಾವುದೇ ಬಾಧ್ಯತೆ ತೋರದೆ ಉದ್ಯೋಗಾಂಕ್ಷಿಗಳನ್ನು ಬಂಧಿಸಿ ರಾಜ್ಯವನ್ನು ಪೊಲೀಸ್ ರಾಜ್ಯವನ್ನಾಗಿಸಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಇದು ಅತ್ಯಂತ ಯುವಜನ ವಿರೋಧಿ ಕ್ರಮವಷ್ಟೇ ಅಲ್ಲ, ಯುವಜನರ ಬವಣೆಗೆ ಕವಡೆ ಕಾಸಿನ ಕಿಮ್ಮತ್ತನ್ನು ನಾವು ನೀಡುವುದಿಲ್ಲ. ನಮಗೆ ಕೇವಲ ಮತಬ್ಯಾಂಕ್ ಅಷ್ಟೇ ಎಂಬ ಕಾಂಗ್ರೆಸ್ ಸರ್ಕಾರದ ನಿಲುವಿಗೆ ಇನ್ನೊಂದು ಸಾಕ್ಷಿ ಒದಗಿದೆ. ಉದ್ಯೋಗದ ಕನಿಷ್ಠ ಹಕ್ಕು ಕೇಳುವುದೇ ಒಳಮಿಸಲಾತಿಯ ಕುಂಟು ನೆಪ ಮುಂದಿಟ್ಟುಕೊಂಡು ಹಲವು ತಿಂಗಳುಗಳಿಂದ ನೇಮಕಾತಿ ವಿಳಂಬ ಮಾಡುತ್ತಲೇ ಇರುವ ಕಾಂಗ್ರೆಸ್ ಸರ್ಕಾರ ಇಂದು ಜನವಿರೋಧಿ ಕ್ರಮ ತೆಗೆದುಕೊಂಡು ಜನತಂತ್ರದ ಹರಣ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಈ ದಮನಕಾರಿ ಕ್ರಮಕ್ಕೆ ಉದ್ಯೋಗಾಕಾಂಕ್ಷಿಗಳು ಹೆದರುವುದಿಲ್ಲ. ಬೇಡಿಕೆಗಳನ್ನು ಈಡೇರಿಸುವವರೆಗೆ ಹೋರಾಟ ಮುಂದುವರೆಯುತ್ತದೆ ಮತ್ತು ಇನ್ನು ಬಲಿಷ್ಠವಾಗುತ್ತದೆ ಹಾಗೂ ಅದಕ್ಕೆ ಸರ್ಕಾರವೇ ನೇರ ಹೊಣೆ. ಬಂಧಿತರನ್ನು ಈ ಕೂಡಲೇ ಬಿಡುಗಡೆ ಮಾಡಬೇಕು. ನಮ್ಮ ಎಲ್ಲಾ ನ್ಯಾಯಯುತ ಬೇಡಿಕೆಗಳು ಈಡೇರುವವರೆಗೆ ಹೋರಾಟ ಮುಂದುವರಿಸುತ್ತೇವೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಎಸ್‌ಯುಸಿಐ(ಸಿ)ಜಿಲ್ಲಾ ಕಾರ್ಯದರ್ಶಿ ಬಿ.ರವಿ, ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ, ಎಐಎಂಎಸ್‌ಎಸ್ ಜಿಲ್ಲಾ ಉಪಾಧ್ಯಕ್ಷೆ ಸೀಮಾ, ಎಐಕೆಕೆಎಂಎಸ್ ಜಿಲ್ಲಾಧ್ಯಕ್ಷ ಬಸವರಾಜ್, ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ನಿತಿನ್, ಎಐಡಿವೈಓ ಕರ್ನಾಟಕ ರಾಜ್ಯ ಸಮಿತಿ ಸದಸ್ಯ ರಣಜೀತ್, ಎಐಯುಟಿಯುಸಿ ಜಿಲ್ಲಾಧ್ಯಕ್ಷೆ ಯಶೋಧರ, ಎಐಎಂಎಸ್‌ಎಸ್‌ನ ಆಸಿಯಾ, ಪುಷ್ಪಾ, ಎಐಡಿಎಸ್‌ಓನ ಸ್ವಾತಿ, ಹೇಮಲತಾ, ಅಂಜಲಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಹಳೆ ಜಿಲ್ಲಾಧಿಕಾರಿ ಕಚೇರಿಗೆ ನಗರಪಾಲಿಕೆ ಕಚೇರಿ ಸ್ಥಳಾಂತರಿಸಲು ಆಗ್ರಹಿಸಿ ಪ್ರತಿಭಟನೆ



ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿಯನ್ನು ಹಳೆ ಜಿಲ್ಲಾಧಿಕಾರಿ ಕಚೇರಿಗೆ ಸ್ಥಳಾಂತರಿಸುವಂತೆ ಒತ್ತಾಯಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಮೈಸೂರು ಮಹಾನಗರ ಪಾಲಿಕೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.10(ಜಿಎ)–ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿಯನ್ನು ಹಳೆ ಜಿಲ್ಲಾಧಿಕಾರಿ ಕಚೇರಿಗೆ ಸ್ಥಳಾಂತರಿಸುವಂತೆ ಒತ್ತಾಯಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಮೈಸೂರು ಮಹಾನಗರ ಪಾಲಿಕೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಈಗಾಗಲೇ ಬೃಹತ್ ನಗರವಾಗಿ ಬೆಳೆಯುತ್ತಿರುವ ಮೈಸೂರು ನಗರದ ಪಾಲಿಕೆಯ ಮೇಯರ್ ಹಾಗೂ ಆಯುಕ್ತರ ಕಚೇರಿ ಅರಮನೆ ಮುಂಭಾಗದಲ್ಲಿ ಇರುವುದರಿಂದ ನಗರದ ನಿರ್ವಹಣೆಯಲ್ಲಿ ತೊಂದರೆ, ಸಂಚಾರದ ಅವ್ಯವಸ್ಥೆ ಎದುರಾಗುವುದರಲ್ಲಿ ಅನುಮಾನವಿಲ್ಲ. ರಾಜ್ಯ ಸರ್ಕಾರ ಮಹಾನಗರ ಪಾಲಿಕೆಯನ್ನು ಆಡಳಿತಾತ್ಮಕ ದೃಷ್ಟಿಯಿಂದ ಬೃಹತ್ ಮಹಾನಗರ ಪಾಲಿಕೆಯಾಗಿ ಘೋಷಣೆ ಮಾಡಿದೆ. ಪ್ರಸ್ತುತ ನಗರ ಪಾಲಿಕೆಯ ಆವರಣ, ಕೌನ್ಸಿಲ್ ಸಭಾಂಗಣ ಪಾಲಿಕೆ ವಾಹನ ನಿಲುಗಡೆ, ನಗರ ಪಾಲಿಕೆ ಸದ್ಯಸರ ಸಂಖ್ಯೆ, ಹೆಚ್ಚಾಗುವ ಅವರ ವಾಹನ ನಿಲುಗಡೆಗೆ ದೊಡ್ಡ ಸಮಸ್ಯೆಯಾಗುತ್ತದೆ. ಹೀಗಾಗಿ ಈಗಾಗಲೇ ಹಲವು ವರ್ಷಗಳಿಂದ ಜಿಲ್ಲಾಧಿಕಾರಿ ಕಚೇರಿಯಾಗಿ ಸೇವೆ ಸಲ್ಲಿಸಿರುವ ಪಾರಂಪರಿಕ ಕಟ್ಟಡ ಸೂಕ್ತ ನಿರ್ವಹಣೆ ಇಲ್ಲದೆ ಶಿಥಿಲಾವಸ್ಥೆಗೆ ತಲುಪುವ ಹಂತಕ್ಕೆ ಮುನ್ನವೇ ಜಿಲ್ಲಾಡಳಿತ ಎಚ್ಚೆತ್ತು ಹಳೆ ಜಿಲ್ಲಾಧಿಕಾರಿ ಕಚೇರಿಗೆ ಸ್ಥಳಾಂತರ ಮಾಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಮಹಾನಗರ ಪಾಲಿಕೆಯ ಪ್ರದಾನ ಕಚೇರಿಯನ್ನು ಹಳೆ ಜಿಲ್ಲಾಧಿಕಾರಿ ಕಚೇರಿಗೆ ಸ್ಥಳಾಂತರಿಸುವ ಮೂಲಕ ಕಟ್ಟಡವನ್ನು ನವೀಕರಿಸಿ ಅರಮನೆ ನಗರಿಯ ಪಾರಂಪರಿಕತೆಯನ್ನು ಕಾಪಾಡಿಕೊಳ್ಳಬಹುದು. ಇದರಿಂದ ಸಂಚಾರ, ಆಡಳಿತವೂ ಸುಗಮವಾಗುತ್ತದೆ. ಜತೆಗೆ ನಗರದ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡಗಳನ್ನು ಕೆಡವಲು ಮುಂದಾಗಿದ್ದು, ಹಳೇ ಜಿಲ್ಲಾಧಿಕಾರಿ ಕಚೇರಿಯನ್ನು ಸೂಕ್ತವಾಗಿ ನಿರ್ವಹಣೆ ಮಾಡಿ, ನವೀಕರಿಸಿ, ಪಾಲಿಕೆ ಕಚೇರಿಯನ್ನು ಸ್ಥಳಾಂತರ ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ನಾಲಾ ಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಪ್ಯಾಲೇಸ್ ಬಾಬು, ಚಾಮರಾಜು ಮಂಡಕಳ್ಳಿ, ಗೋಪಿ, ಮಾದಪ್ಪ, ಎಲ್‌ಐಸಿ ಸಿದ್ದಪ್ಪ, ಸ್ವಾಮಿ, ಮಹದೇವಸ್ವಾಮಿ, ಚೆಲುವರಾಯಸ್ವಾಮಿ, ಚಿನ್ನಪ್ಪ, ಶಿವುಗೌಡ, ಗೋವಿಂದರಾಜು, ಹರೀಶ್, ಸ್ವಾಮಿ, ಸುನಿಲ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಬಹುಭಾಷಾ ಜನಪ್ರಿಯ ಚಿತ್ರಗೀತೆ ಗಾಯನ



ಜನ ಚೈತನ್ಯ ಫೌಂಡೇಷನ್ ಸಂಸ್ಥೆ ಹಮ್ಮಿಕೊಂಡಿದ್ದ ಪದನಿಸ ಚಿತ್ರಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ರಂಗಕರ್ಮಿ ರಾಜಶೇಖರ ಕದಂಬ, ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ನಾಗರಾಜ್ ವಿ.ಭೈರಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ರಘುರಾಂ ವಾಜಪೇಯಿ, ಪತ್ರಕರ್ತ ರಂಗನಾಥ್ ಮೈಸೂರು ಅವರನ್ನು ಸನ್ಮಾನಿಸಲಾಯಿತು. ಫೌಂಡೇಶನ್‌ನ ಅಧ್ಯಕ್ಷ ಲಕ್ಷ್ಮಣ್ ಮತ್ತು ಗಾಯಕರು ಉಪಸ್ಥಿತರಿದ್ದಾರೆ.

ಹನುಮಾನ್ ಜಯಂತಿ



ಹನುಮಾನ್ ಜಯಂತಿ ಅಂಗವಾಗಿ ಮೈಸೂರಿನ ದೇವರಾಜ ಅರಸ್ ರಸ್ತೆಯಲ್ಲಿರುವ ಜಯದೇವ ಆಂಜನೇಯ ದೇವಸ್ಥಾನದಲ್ಲಿ ಶಾಸಕ ಹರೀಶ್‌ಗೌಡರ ಪತ್ನಿ ಗೌರಿ ಹರೀಶ್‌ಗೌಡರು ದೇವರ ದರ್ಶನ ಪಡೆದರು. ಈ ಸಂದರ್ಭದಲ್ಲಿ ರಾಮರಾಜ, ಕಿಶನ್ ಹರೀಶ್ ಗೌಡ, ಪುರುಷೋತ್ತಮ್, ನವೀನ್, ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿಚಂದ್ರ ಇನ್ನಿತರರು ಹಾಜರಿದ್ದರು.

ಅಕ್ಯುಪ್ರೆಷರ್ ಸುಜೋಕ್ ಕಪ್ಪಿಂಗ್ ಥೆರಪಿ ಚಿಕಿತ್ಸಾ ಶಿಬಿರ

ಮೈಸೂರು, ಡಿ. 10– ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ ವತಿಯಿಂದ ವಿ.ವಿ. ಮೊಹಲ್ಲಾದ ಶ್ರೀಸಾಗರಕಟ್ಟೆ ಮಠ ಟ್ರಸ್ಟ್ ಆಶ್ರಯದಲ್ಲಿ ಡಿ. 11 ರಿಂದ 21 ದಿನಗಳ ಕಾಲ ಅಕ್ಯುಪ್ರೆಷರ್ ಸುಜೋಕ್ ಕಪ್ಪಿಂಗ್ ಥೆರಪಿ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಬಿಪಿ, ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸ್ತಮ, ಅಜೀರ್ಣತೆ, ಅಲರ್ಜಿ, ವೆರಿಕೋಸ್ ವೇನ್, ಬೆನ್ನುನೋವು, ಸಯಾಟಿಕಾ, ಸಂದಿವಾತ, ಥೈರಾಯ್ಡ್, ನಿದ್ರಾಹೀನತೆ ಇನ್ನಿತರ ರೋಗಗಳಿಗೆ ಚಿಕಿತ್ಸೆ ನೀಡಲಾಗುವುದು. ಶಿಬಿರವು ವಿ.ವಿ. ಮೊಹಲ್ಲಾದ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 98451 82716, 78927 98768 ಸಂಪರ್ಕಿಸಬಹುದು.

ಡಿ.13ಕ್ಕೆ ಬ್ರಾಹ್ಮಣ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 'ವಿಶ್ವಾಮಿತ್ರ' ಪ್ರತಿಭಾ ಪುರಸ್ಕಾರ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಮಾತನಾಡಿದರು.

ಮೈಸೂರು, ಡಿ.10(ಜಿಎ)–ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ 2025ನೇ ಸಾಲಿನಲ್ಲಿ ಹೆಚ್ಚು ಅಂಕ ಪಡೆದ ಸಮುದಾಯದ ಎಸ್‌ಎಸ್‌ಎಲ್‌ಸಿಯ ವಿದ್ಯಾರ್ಥಿಗಳಿಗೆ ಡಿ.13ರಂದು ಬೆಳಗ್ಗೆ 10.30ಕ್ಕೆ ಶಾರದ ವಿಲಾಸ ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ 'ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ' ನೀಡಿ ಸನ್ಮಾನಿಸಲಾಗುವುದು ಎಂದು ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತ ಭವನದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮತ್ತು ಬೆಂಗಳೂರು ಭಾಗದ 98 ವಿದ್ಯಾರ್ಥಿಗಳಿಗೆ 'ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ' ನೀಡಿ ಸನ್ಮಾನಿಸಲಾಗುತ್ತದೆ. ಅಂದು ಕಾರ್ಯಕ್ರಮವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಲಿದ್ದಾರೆ. ವಿಪ್ರ–ಸ್ವ ಉದ್ಯಮ ನೇರ ಸಾಲ ಯೋಜನೆಯ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣೆ ಕರ್ನಾಟಕ ಸರ್ಕಾರದ ಕಂದಾಯ ಸಚಿವ ಕೃಷ್ಣಭೈರೇಗೌಡ ಮಾಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ ಪ್ರತಿಭಾ ಪುರಸ್ಕಾರವನ್ನು ನೀಡಲಿದ್ದಾರೆ ಹಾಗೂ ಶಾಸಕ ಟಿ.ಎಸ್ ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೆಗೌಡ, ತನ್ವೀರ್ ಸೇಠ್, ಕೆ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ಧರಾಮಯ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ ರಾಜೀವ್, ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ.ಪ್ರಕಾಶ್, ವಿಪ್ರ ಮಹಿಳಾ ಸಂಘದ ಅಧ್ಯಕ್ಷೆ ಡಾ.ಕೆ.ವಿ.ಲಕ್ಷ್ಮೀದೇವಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸಂಘಟನಾ ಕಾರ್ಯದರ್ಶಿಗಳಾದ ನಂ.ಶ್ರೀಕಂಠ ಕುಮಾರ್ ಸೇರಿದಂತೆ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿರ್ದೇಶಕರುಗಳು ಉಪಸ್ಥಿತರಿರುತ್ತಾರೆ ಎಂದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ ರಾಜೀವ್, ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ. ಪ್ರಕಾಶ್, ವಿಪ್ರ ಮಹಿಳಾ ಸಂಘದ ಅಧ್ಯಕ್ಷೆ ಡಾ.ಕೆ.ವಿ. ಲಕ್ಷ್ಮೀದೇವಿ, ಮುಖಂಡರಾದ ಕೆ.ನಾರಾಯಣ ಮೂರ್ತಿ, ಬೆಳ್ಳೂರು ಶ್ರೀಧರ್, ಡಾ.ಸುಜಾತ ಹಾಜರಿದ್ದರು.

ಕಾಂಗ್ರೆಸ್ ನಮಗೆ ಶಕ್ತಿ ತುಂಬಿದೆ

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯೂ ಸ್ಥಾಪನೆಯಾದ ನಂತರ 2018ರಲ್ಲಿ ಮೈತ್ರಿ ಸರ್ಕಾರದಿಂದ ಅಂದು 50 ಕೋಟಿ ರೂ. ಮಂಡಳಿಗೆ ಮಂಜೂರು ಮಾಡಲಾಯಿತು. ಆದರೆ, ನಂತರ ಸರ್ಕಾರ ಪತನವಾದ ಹಿನ್ನೆಲೆಯಲ್ಲಿ ಮೊದಲ ಕಂತಿನಲ್ಲಿ 25 ಕೋಟಿ ರೂ. ಮಾತ್ರ ಅನುದಾನ ದೊರಕಿದೆ. ನಂತರ ಬಂದ ಸರ್ಕಾರವು ಕೇವಲ 4 ಕೋಟಿ ರೂ. ಅನುದಾನ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಳಿಗೆ ಅನುಕೂಲವಾಗುವಂತೆ ವರ್ಷಕ್ಕೆ 10 ಕೋಟಿ ರೂ. ಅನುದಾನ ನೀಡುತ್ತಿದ್ದಾರೆ. ಈ ಅನುದಾನವನ್ನು ಸಮುದಾಯದ ಮಹಿಳೆಯರಿಗೆ ಗುಡಿ ಕೈಗಾರಿಕೆ ಸೇರಿದಂತೆ ವಿವಿಧ ಸ್ವಯಂ ಉದ್ಯೋಗಕ್ಕೆ ದಾರಿ ಮಾಡಿಕೊಟ್ಟಿದೆ. ಕಾಂಗ್ರೆಸ್ ಪಕ್ಷ ಬ್ರಾಹ್ಮಣ ಸಮುದಾಯಕ್ಕೆ ಶಕ್ತಿ ತುಂಬಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳಿಗೆ ಧನ್ಯವಾದ ತಿಳಿಸುತ್ತೇನೆ.

-ಅಸಗೋಡು ಜಯಸಿಂಹ, ಅಧ್ಯಕ್ಷ, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ

ಡಿ.26ಕ್ಕೆ ಅಹಿಂದ ಒಕ್ಕೂಟದಿಂದ ಮೈಸೂರಲ್ಲಿ ಕನ್ನಡ ರಾಜ್ಯೋತ್ಸವ



ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ ಮಾತನಾಡಿದರು.

ಮೈಸೂರು, ಡಿ.10(ಜಿಎ)–ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದ ವತಿಯಿಂದ ಡಿ.26ರಂದು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಟೌನ್‌ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟ ಸ್ಥಾಪನೆ ಮೊದಲ ವರ್ಷದ ದೊಡ್ಡ ಕಾರ್ಯಕ್ರಮವನ್ನಾಗಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುತಿದ್ದು, ಕಾರ್ಯಕ್ರಮದ ಅಂಗವಾಗಿ ಹಲವಾರು ಸ್ಪರ್ಧೆಗಳು, ವಿವಿಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ನಾಡಿನ ಜನತೆಗೆ ಸೇವೆ ಸಲ್ಲಿಸುತ್ತಿರುವ 100 ಜನ ಅಹಿಂದ ವರ್ಗದ ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ ಹಾಗೂ ಮನೆ ಕೆಲಸದ 100 ಜನ ಬಡ ಮಹಿಳೆಯರಿಗೆ ಗೌರವಿಸುವ ನಿಟ್ಟಿನಲ್ಲಿ ಸೀರೆ ವಿತರಿಸಿ, ಅವರಲ್ಲಿ ಆತ್ಮ ಸ್ಥೈರ್ಯ ತುಂಬವ ಕಾರ್ಯಕ್ಕೆ ಚಾಲನೆ ನೀಡಲಾಗುತ್ತದೆ ಎಂದರು.

ವಿದ್ಯಾರ್ಥಿಗಳಿಗೆ ಕನ್ನಡ ನಾಡು ನುಡಿಯ ಬಗ್ಗೆ ಸಾಮಾನ್ಯ ಜ್ಞಾನ ವೃದ್ಧಿಸಿಕೊಳ್ಳಲು ಪ್ರಬಂಧ ಸ್ಪರ್ಧೆ, ಚಿತ್ರಕಲಾಸ್ಪರ್ಧೆ, ಮಹಿಳೆಯರಿಗೆ ಮ್ಯೂಜಿಕಲ್‌ಛೇರ್ ಸ್ಪರ್ಧೆ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಅಂದು ಬೆಳಿಗ್ಗೆ 8.30 ಗಂಟೆಗೆ ಗಣ್ಯರಿಂದ ಕನ್ನಡ ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಮಧ್ಯಾಹ್ನ 12 ಗಂಟೆಗೆ ವೇದಿಕೆ ಕಾರ್ಯಕ್ರಮದಲ್ಲಿ ನಡೆಯಲಿದ್ದು, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ತಿಳಿಸಿದರು.

ಒಟ್ಟು 35ಕ್ಕೂ ಹೆಚ್ಚಿನ ಸಮುದಾಯಗಳನ್ನು ಒಳಗೊಂಡಿರುವ ಸಮಾನ ಮನಸ್ಕರು ಸೇರಿ ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟವನ್ನು ಸ್ಥಾಪಿಸಿದ್ದು, ಒಕ್ಕೂಟದ ಈ ಮಹತ್ವ ಪೂರ್ಣ ಕಾರ್ಯಕ್ರಮಕ್ಕೆ ಮೈಸೂರಿನ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಮೊ.6364156593, 8123444656 ಈ ನಂಬರ್‌ಗಳಿಗೆ ಸಂಪರ್ಕಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಕಾರ್ಯದರ್ಶಿ ಎಸ್.ಮಂಜುನಾಥ್, ಖಜಾಂಚಿ ಕೇಶವ, ಮೈಸೂರು ಜಿಲ್ಲಾಧ್ಯಕ್ಷ ಕೆ.ವಿ ರಾಜು, ಉಪಾಧ್ಯಕ್ಷ ಡಾ.ಶಾಂತರಾಜೇ ಅರಸ್, ರಾಜ್ಯ ಮಹಿಳಾ ಅಧ್ಯಕ್ಷೆ ಎಂ.ಎಸ್ ಗೀತಾ, ಕಾರ್ಯದರ್ಶಿ ಮೀನಾಕ್ಷಿ, ಗೌರವ ಸಲಹೆಗಾರರಾದ ನಾಗಮ್ಮ, ರಾಜ್ಯ ಸಂಘಟನಾ ಕಾರ್ಯದರ್ಶಿ ಮಹೇಶ್, ನಿರ್ದೇಶಕರಾದ ಎಂ.ಮುತ್ತುರಾಜು, ಪಲ್ಲವಿ ಉಪಸ್ಥಿತರಿದ್ದರು.

ಮಂಡ್ಯದಲ್ಲಿ ಟ್ರಾಮಾ ಕೇರ್ ಸೆಂಟರ್; ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ತುರ್ತು ಪ್ರಸ್ತಾವನೆ ಸಲ್ಲಿಸಿ

ರಾಜ್ಯ ಸರ್ಕಾರಕ್ಕೆ ಕೇಂದ್ರ ಸಚಿವ ಕುಮಾರಸ್ವಾಮಿ ಪತ್ರ

ಜೊತೆ-ಜೊತೆಗೆ ಡಿಪಿಆರ್ ಸಿದ್ಧಪಡಿಸಲು ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್‌ಗೆ ಸೂಚನೆ

ಮಂಡ್ಯ, ಡಿ.10– ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಯಡಿ ಮಂಡ್ಯ ನಗರದಲ್ಲಿ ಸುಸಜ್ಜಿತ, ಅತ್ಯಾಧುನಿಕ ಟ್ರಾಮಾ ಕೇರ್ ಸೆಂಟರ್ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಸಂಬಂಧ ತುರ್ತಾಗಿ ಪ್ರಸ್ತಾವನೆ ಕಳುಹಿಸಿಕೊಡುವಂತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ಸರಕಾರಕ್ಕೆ ಪತ್ರ ಬರೆದಿದ್ದಾರೆ.

ರಾಜ್ಯದ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್ ಅವರಿಗೆ ಪತ್ರ ಬರೆದಿರುವ ಅವರು, ಮಂಡ್ಯದಲ್ಲಿ ತುರ್ತು ಚಿಕಿತ್ಸಾ ಘಟಕ (ಟ್ರಾಮಾ ಸೆಂಟರ್) ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣದ ತುರ್ತು ಅಗತ್ಯವಿದೆ. ಇದಕ್ಕಾಗಿ ಕ್ರೋಢೀಕೃತ ಯೋಜನೆಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಕೂಡಲೇ ಕಳಿಸುವಂತೆ ಹೇಳಿದ್ದಾರೆ.


ಹೆಚ್.ಡಿ.ಕುಮಾರಸ್ವಾಮಿ

ಈ ಮೊದಲೇ ಜಿಲ್ಲೆಯ ಉನ್ನತ ಅಧಿಕಾರಿಗಳ ಜತೆ ಹಲವು ಸುತ್ತಿನ ಮಾತುಕತೆ ನಡೆಸಲಾಗಿದೆ. ಇದೀಗ ಪ್ರಸ್ತಾವನೆ ಕಳುಹಿಸುವ ಜತೆಗೆ ಜತೆಗೆ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸುವಂತೆ ಸೂಚಿಸಿರುವುದಾಗಿ ತಿಳಿಸಿದ್ದಾರೆ. ಹೃದಯಾಘಾತ, ರಸ್ತೆ ಅಪಘಾತ ಸೇರಿ ಯಾವುದೇ ತುರ್ತು ಆರೋಗ್ಯ ಸಮಸ್ಯೆಗೆ ಇಲ್ಲಿ ಉತ್ತಮ ಗುಣಮಟ್ಟದ ಚಿಕಿತ್ಸೆ ದೊರೆಯಬೇಕು. ಯೋಜನೆಗೆ ಆಗುವ ಅಷ್ಟೂ ವೆಚ್ಚದ ಅನುದಾನವನ್ನು ಕೇಂದ್ರದಿಂದಲೇ ತರುವ ಪ್ರಯತ್ನ ಮಾಡಲಾಗುವುದು. ರಾಜ್ಯ ಸರಕಾರ ಸೂಕ್ತ ಜಾಗ ನೀಡಬೇಕು ಎಂದು ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಮಂಡ್ಯದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆ ಮಾಡಬೇಕೆಂಬುದು ಜನರ ಬಹುದಿನಗಳ ಬೇಡಿಕೆಯಾಗಿದೆ. ನಾನು ಸಂಸದನಾದ ಮೇಲೆ ಈ ಬಗ್ಗೆ ಕಾರ್ಯೋನ್ಮುಖನಾಗಿದ್ದು, ಈ ಬಗ್ಗೆ ಅಧಿಕಾರಿಗಳ ಜತೆ ಚರ್ಚೆ ನಡೆಸಿದ್ದೇನೆ ಎಂದು ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಾವುದೇ ತುರ್ತು ಚಿಕಿತ್ಸೆಗೆ ಮಂಡ್ಯ ಜಿಲ್ಲೆಯ ಜನರು ಮೈಸೂರು ಅಥವಾ ಬೆಂಗಳೂರಿಗೆ ಹೋಗಬೇಕಾಗುತ್ತದೆ. ಇದನ್ನು ತಪ್ಪಿಸಲು ಮಂಡ್ಯ ನಗರದಲ್ಲಿಯೇ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಲೇಬೇಕಿದೆ. ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ (ಮಿಮ್ಸ್) ಆವರಣದಲ್ಲಿಯೇ ಟ್ರಾಮಾ ಸೆಂಟರ್ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಮಾಡಬೇಕೆನ್ನುವುದು ಜಿಲ್ಲೆಯ ಜನರ ಬಯಕೆಯಾಗಿದೆ. ಅಲ್ಲೇ ನಿರ್ಮಿಸುವುದು ಸೂಕ್ತ ನಿರ್ಧಾರವಾಗಲಿದೆ. ಹೀಗಾಗಿ ಮಿಮ್ಸ್ ಆವರಣದಲ್ಲಿಯೇ ಸರಕಾರ ಸೂಕ್ತ ಜಾಗ ನೀಡಬೇಕು ಎಂದಿದ್ದಾರೆ.

ಬಸ್–ಟ್ರಕ್ ಮುಖಾಮುಖಿ ಡಿಕ್ಕಿ: ನಾಲ್ವರು ಸಾವು



ಜೈಪುರ: ರಾಜಸ್ಥಾನದ ಸಿಕಾರ್ ಜಿಲ್ಲೆಯ ಜೈಪುರ–ಬಿಕಾನೇರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳ ವಾರ ರಾತ್ರಿ ಬಸ್ ಮತ್ತು ಟ್ರಕ್ ಮುಖಾ ಮುಖಿ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಸಾವನ್ನಪ್ಪಿದ್ದು, 27 ಮಂದಿ ಗಾಯಗೊಂಡಿದ್ದಾರೆ.

ಬಿಕಾನೇರ್‌ನಿಂದ ಜೈಪುರ ಕಡೆಗೆ ಪ್ರಯಾಣಿಸುತ್ತಿದ್ದ ಸ್ಲೀಪರ್ ಬಸ್ ಪರಸ್ಪರ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

15 ಮಂದಿ ಗಾಯಾಳುಗಳನ್ನು ಸಿಕಾರ್ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, 13 ಮಂದಿಗೆ ಫತೇಘರ್‌ನಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಸಿಕಾರ್ ಜಿಲ್ಲಾ ಆಸ್ಪತ್ರೆಯಿಂದ ಜೈಪುರದ ಎಸ್‌ಎಂಎಸ್ ಆಸ್ಪತ್ರೆಗೆ ಕರೆದೊಯ್ಯಲಾದ ಒಬ್ಬ ಗಂಭೀರ ಗಾಯಗೊಂಡ ವ್ಯಕ್ತಿ ಚಿಕಿತ್ಸೆಯ ಸಮಯದಲ್ಲಿ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ ನಂತರ ಪ್ರಯಾಣಿಕರ ತಂಡ ಗುಜರಾತ್‌ಗೆ ಹಿಂತಿರುಗುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯದಲ್ಲಿ ಕಳೆದ ಮೂರು ವರ್ಷದಲ್ಲಿ 57,733 ಸೈಬರ್ ಪ್ರಕರಣ ದಾಖಲು; 5475 ಕೋಟಿ ರೂ.ವಂಚನೆ

ವಿಧಾನಸಭೆಯಲ್ಲಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಮಾಹಿತಿ

ಬೆಳಗಾವಿ, ಡಿ.10– ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 57,733 ಸೈಬರ್ ಅಪರಾಧಗಳು ನಡೆದಿದ್ದು, ಜನರು 5,475 ಕೋಟಿ ರೂಪಾಯಿ ಕಳೆದುಕೊಂಡಿದ್ದಾರೆ ಎಂಬ ಆಘಾತಕಾರಿ ಮಾಹಿತಿ ಹೊರಬಿದ್ದಿದೆ.

ಆದರೆ, ಪೊಲೀಸರು ಕೇವಲ 10,717 ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಮತ್ತು ಕೇವಲ 627 ಕೋಟಿ ರೂಪಾಯಿ ವಸೂಲಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಈ ವರ್ಷ ಸರ್ಕಾರ ತೆಗೆದುಕೊಂಡ ಕ್ರಮಗಳಿಂದಾಗಿ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ.

ವಿಧಾನ ಸಭೆಯಲ್ಲಿ ಶಾಸಕ ಸಿಮೆಂಟ್ ಮಂಜು ಅವರ ಪ್ರಶ್ನೆಗೆ ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರು ಉತ್ತರಿಸುತ್ತಾ, ಸೈಬರ್ ಅಪರಾಧಗಳನ್ನು ನಿಗ್ರಹಿಸಲು ಮತ್ತು ಪತ್ತೆಹಚ್ಚಲು ಪೊಲೀಸರಿಗೆ ಅಧಿಕಾರ ನೀಡಲು ಪೊಲೀಸ್ ಕಾಯ್ದೆಯಲ್ಲಿ ಬದಲಾವಣೆಗಳನ್ನು ತರಲಾಗಿದೆ ಎಂದು ಹೇಳಿದರು.



ಸರ್ಕಾರ ತೆಗೆದುಕೊಂಡ ಕ್ರಮಗಳ ಹೊರತಾಗಿಯೂ ಅಂತಹ ಅಪರಾಧಗಳಲ್ಲಿ ಭಾಗಿಯಾಗಿರುವ ವ್ಯಕ್ತಿಗಳು ಸುಧಾರಿತ ತಂತ್ರಜ್ಞಾನವನ್ನು ಬಳಸಿಕೊಂಡು ಅಮಾಯಕ ಜನರನ್ನು ವಂಚಿಸುತ್ತಿದ್ದಾರೆ ಎಂದು ಅವರು ಹೇಳಿದರು.

2023 ರಲ್ಲಿ ವರದಿಯಾದ ಸೈಬರ್ ಅಪರಾಧಗಳ ಸಂಖ್ಯೆ 22,255 ಹಣ ವಂಚನೆ 873.29 ಕೋಟಿ ರೂಪಾಯಿಗಳು. ಪೊಲೀಸರು 6,159 ಪ್ರಕರಣಗಳನ್ನು ಪತ್ತೆಹಚ್ಚಿ 177 ಕೋಟಿ ರೂಪಾಯಿ ವಸೂಲಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಈ ವರ್ಷ ಪ್ರಕರಣಗಳ ಸಂಖ್ಯೆ ಕಡಿಮೆಯಿದ್ದರೂ, ಕಳವಾದ ಹಣ 2,039 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಒಟ್ಟಾರೆಯಾಗಿ, 1,009 ಪ್ರಕರಣಗಳು ಪತ್ತೆಯಾಗಿದ್ದು, 127 ಕೋಟಿ ರೂಪಾಯಿ ವಶಪಡಿಸಿಕೊಳ್ಳಲಾಗಿದೆ.

ರಾಜ್ಯಾದ್ಯಂತ 43 ಸೈಬರ್ ಅಪರಾಧ, ಆರ್ಥಿಕ ಅಪರಾಧಗಳು ಮತ್ತು ಮಾದಕ ದ್ರವ್ಯ ಪೊಲೀಸ್ ಠಾಣೆಗಳನ್ನು ಸ್ಥಾಪಿಸುವುದು ಸೇರಿದಂತೆ ಗೃಹ ಇಲಾಖೆ ತೆಗೆದುಕೊಂಡ ಹಲವಾರು ಉಪಕ್ರಮಗಳಿಂದಾಗಿ ಈ ಸಂಖ್ಯೆಯಲ್ಲಿ ಇಳಿಕೆ ಕಂಡುಬಂದಿದೆ ಎಂದು ಗೃಹಸಚಿವರು ಹೇಳಿದರು.

ಆನ್‌ಲೈನ್ ಬೆಟ್ಟಿಂಗ್ ಮತ್ತು ಗೇಮ್‌ಗಳನ್ನು ನಿಯಂತ್ರಿಸುವ ಕುರಿತು ರಾಜ್ಯ ಸರ್ಕಾರವು ಪೊಲೀಸ್ ಕಾಯ್ದೆಗೆ ತಂದ ಬದಲಾವಣೆಗಳನ್ನು ಗೇಮಿಂಗ್ ಫೆಡರೇಶನ್ ನ್ಯಾಯಾಲಯದಲ್ಲಿ ಪ್ರಶ್ನಿಸಿ ತಡೆಯಾಜ್ಞೆ ತಂದಿತು. ಆನ್‌ಲೈನ್ ಗೇಮಿಂಗ್ ಪ್ಲಾಟ್‌ಫಾರ್ಮ್‌ಗಳನ್ನು ನಿಯಂತ್ರಿಸಲು ಕೇಂದ್ರವು ಒಂದು ಕಾಯ್ದೆಯನ್ನು ಅಂಗೀಕರಿಸಿದೆ. ಅದನ್ನೂ ನ್ಯಾಯಾಲಯದಲ್ಲಿಯೂ ತಡೆಹಿಡಿಯಲಾಗಿದೆ. ಮುಂದಿನ ವಿಚಾರಣೆ ಡಿ.19ರಂದು ನಡೆಯಲಿದೆ ಎಂದು ಸಚಿವರು ಹೇಳಿದರು.

ಪಿ.ಮಾನಸರಿಗೆ ಪಿಎಚ್.ಡಿ



ಮೈಸೂರು, ಡಿ.10–ಡಾ.ಎಸ್.ಜೆ. ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ಪಿ. ಮಾನಸ ಅವರು ವ್ಯವಸ್ಥಾಪನಾ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮದುವೆಯಾಗಿ ಮೂರೇ ದಿನಕ್ಕೆ ವಿಚ್ಛೇದನ ಕೇಳಿದ ವಧು!

ಗೋರಖ್‌ಪುರ: ಗೋರಖ್‌ಪುರದ ನವವಿವಾಹಿತ ಯುವತಿಯೊಬ್ಬರು ಮದುವೆಯಾದ ಕೇವಲ ಮೂರೇ ದಿನಗಳಲ್ಲಿ ವಿಚ್ಛೇದನ ಕೋರಿದ್ದಾರೆ. ಮದುವೆಯಾದ ಮೊದಲ ರಾತ್ರಿಯೇ ಅವರ ಪತಿ ದೈಹಿಕವಾಗಿ ದುರ್ಬಲವಾಗಿದ್ದು, ಲೈಂಗಿಕ ಸಂಬಂಧ ಹೊಂದಲು ಅಸಮರ್ಥ ಎಂದು ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ನಂತರ ವಧುವಿನ ಕುಟುಂಬ, ವರ ತಂದೆಯಾಗಲು ಸಾಧ್ಯವಿಲ್ಲ ಎಂದು ವೈದ್ಯಕೀಯ ವರದಿ ದೃಢಪಡಿಸಿದೆ ಎಂದು ಹೇಳಿಕೊಂಡಿದೆ. ಇದರಿಂದಾಗಿ ಉಡುಗೊರೆಗಳು ಮತ್ತು ಮದುವೆಯ ವೆಚ್ಚಗಳನ್ನು ಹಿಂದಿರುಗಿಸುವಂತೆ ಒತ್ತಾಯಿಸಿದೆ. ಮಹಿಳೆ ಕಳುಹಿಸಿದ ಲೀಗಲ್ ನೋಟಿಸ್‌ನಲ್ಲಿ, ನಾನು ದೈಹಿಕವಾಗಿ ಅಸಮರ್ಥನಾಗಿರುವ ವ್ಯಕ್ತಿಯೊಂದಿಗೆ ನನ್ನ ಜೀವನ ನಡೆಸಲು ಸಾಧ್ಯವಿಲ್ಲ. ಮದುವೆಯ ರಾತ್ರಿಯೇ ಅವರು ನನಗೆ ವಿಷಯ ಹೇಳಿದಾಗ ಆಘಾತವಾಯಿತು ಎಂದಿದ್ದಾರೆ.

25 ವರ್ಷದ ವರ ಸಹಜನ್ವಾದಲ್ಲಿರುವ ಉತ್ತಮ ರೈತ ಕುಟುಂಬದ ಏಕೈಕ ಪುತ್ರನಾಗಿದ್ದು, ಗೋರಖ್‌ಪುರ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರದ ಕೈಗಾರಿಕಾ ಘಟಕದಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಬೆಂಗಳೂರು ವಿಜಯ್ ಗುರೂಜಿ, ಸಹಚರ ಬಂಧನ

ಟೆಕ್ಕಿಗೆ ಲೈಂಗಿಕ ಶಕ್ತಿ ಹೆಚ್ಚಿಸುವುದಾಗಿ ರೂ. 40 ಲಕ್ಷ ವಂಚನೆ

ಬೆಂಗಳೂರು, ಡಿ.10– ಲೈಂಗಿಕ ವೈದ್ಯಕೀಯ ಸಮಸ್ಯೆಗಳಿಗೆ ಪರಿಹಾರ ನೀಡುವ ಹೆಸರಿನಲ್ಲಿ ಸಾರ್ವಜನಿಕರಿಗೆ ವಂಚನೆ ಮಾಡುತ್ತಿದ್ದ ವಿಜಯ್ ಚಿತ್ತೋಡಿಯಾ ಗುರೂಜಿ ಎಂಬ ನಕಲಿ ಸ್ವಾಮೀಜಿ ಮತ್ತು ಆತನ ಸಹಚರನನ್ನು ಜ್ಞಾನ ಭಾರತಿ ಪೊಲೀಸರು ಬಂಧಿಸಿದ್ದಾರೆ. ಲೈಂಗಿಕ ಸಮಸ್ಯೆ ಎಂದು ಬಂದಿದ್ದ ಟೆಕ್ಕಿಗೆ ಬರೋಬ್ಬರಿ 40 ಲಕ್ಷ ರೂ.ವಂಚಿಸಿದ್ದ ಈ ಖತರ್ನಾಕ್ ಗ್ಯಾಂಗ್ ಐಷಾರಾಮಿ ಜೀವನ ನಡೆಸುತ್ತಿತ್ತು.



ವಿಜಯ್ ಗುರೂಜಿಯ ವೈದ್ಯಕೀಯ ಟೆಂಟ್

ಬಂಧಿತರನ್ನು ವಿಜಯ್ ಚಿತ್ತೋಡಿಯಾ ಗುರೂಜಿ ಮತ್ತು ಆತನ ಸಹಚರ ಮನೋಜ್ ಸಿಂಗ್ ಚಿತ್ತೋಡಿಯಾ ಎಂದು ಗುರುತಿಸಲಾಗಿದೆ. ಇವರು ಮೂಲತಃ ಗುಜರಾತ್ ಮೂಲದವರಾಗಿದ್ದಾರೆ.

ಇವರು ಬೆಂಗಳೂರು, ತುಮಕೂರು ಸೇರಿದಂತೆ ವಿವಿಧ ನಗರಗಳಲ್ಲಿ ಒಟ್ಟು 8 ಟೆಂಟ್‌ಗಳನ್ನು ಹಾಕಿಕೊಂಡು ಬಹುತೇಕ ಎಲ್ಲಾ ರೀತಿಯ ಆರೋಗ್ಯ ಮತ್ತು ವೈದ್ಯಕೀಯ ಸಮಸ್ಯೆಗಳಿಗೆ ಪರಿಹಾರ ನೀಡುವುದಾಗಿ ನಂಬಿಸಿ ಜನರನ್ನು ವಂಚಿಸುತ್ತಿದ್ದರು.

ಲೈಂಗಿಕ ಸಮಸ್ಯೆ ನೆಪದಲ್ಲಿ 40 ಲಕ್ಷ ವಂಚನೆ: ಲೈಂಗಿಕ ಸಮಸ್ಯೆ ಎದುರಿಸುತ್ತಿದ್ದ ಟೆಕ್ಕಿಯೊಬ್ಬರು ಈ ನಕಲಿ ಗುರೂಜಿ ಬಳಿ ಹೋಗಿದ್ದರು. ಸಮಸ್ಯೆ ಸರಿಪಡಿಸುತ್ತೇವೆ ಎಂದು ಭರವಸೆ ನೀಡಿದ ಆರೋಪಿಗಳು ಹಂತ ಹಂತವಾಗಿ ಅವರಿಂದ 40 ಲಕ್ಷ ರೂ. ಗಳಷ್ಟು ಪಡೆದು ವಂಚಿಸಿದ್ದರು. ಈ ಗುರೂಜಿ ಗ್ಯಾಂಗ್ ವಂಚಕರು ಎಂಬುದು ಅವರಿಗೆ ಮನವರಿಕೆಯಾದಾಗ ಜ್ಞಾನ ಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಪ್ರಕರಣ ದಾಖಲಿಸಿಕೊಂಡ ಜ್ಞಾನ ಭಾರತಿ ಪೊಲೀಸರು, ತಲೆಮರೆಸಿಕೊಂಡಿದ್ದ ಆರೋಪಿಗಳ ಪತ್ತೆಗೆ ವಿಶೇಷ ಕಾರ್ಯಾಚರಣೆ ನಡೆಸಿದರು. ಸೈಬರಬಾದ್ ಪೊಲೀಸರ ನೆರವಿನಿಂದ ವಿಜಯ್ ಗುರೂಜಿಯನ್ನು ತೆಲಂಗಾಣದ ಮೊಹಬೂಬ್ ನಗರದಲ್ಲಿ ಮತ್ತು ಆತನ ಸಹಚರ ಮನೋಜ್ ಸಿಂಗ್ ಚಿತ್ತೋಡಿಯಾನನ್ನು ಸೈಬರಬಾದ್‌ನಲ್ಲಿ ಬಂಧಿಸಲಾಯಿತು.

ಆರೋಪಿಗಳಿಂದ ವಂಚನೆ ಮಾಡಿದ್ದ 40 ಲಕ್ಷ ರೂಪಾಯಿಗಳ ಪೈಕಿ 19.50 ಲಕ್ಷ ರೂ. ನಗದು ಹಾಗೂ ಐಷಾರಾಮಿ ಜೀವನ ನಡೆಸಲು ಬಳಸುತ್ತಿದ್ದ ಒಂದು ಟಿಟಿ ವಾಹನವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಎರಡು ಟ್ರಕ್ ನಡುವೆ ಮುಖಾಮುಖಿ ಡಿಕ್ಕಿ; ಮೂವರ ಸಾವು

ಬಾಗಲಕೋಟೆ: ಜಿಲ್ಲೆಯಲ್ಲಿ ಎರಡು ಟ್ರಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಮೂವರು ಸಾವಿಗೀಡಾಗಿದ್ದು, ಒಬ್ಬ ವ್ಯಕ್ತಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಮೃತರನ್ನು ಮಲ್ಲಿಕಾರ್ಜುನ್ (22), ರೇವಣಸಿದ್ದಪ್ಪ (20) ಮತ್ತು ಸುರೇಶ್ (33) ಎಂದು ಗುರುತಿಸಲಾಗಿದ್ದು, ಗಾಯಾಳು ರಮೇಶ್ (22) ಎಂಬುವವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಮುಧೋಳ ತಾಲೂಕಿನ ಬಂಟನೂರು ಕ್ರಾಸ್ ಬಳಿ ಮಂಗಳವಾರ ತಡರಾತ್ರಿ ಈ ಅಪಘಾತ ಸಂಭವಿಸಿದ್ದು, ಸಿಮೆಂಟ್ ಸಾಗಿಸುತ್ತಿದ್ದ ವಾಹನವು ಮತ್ತೊಂದು ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಸಿಮೆಂಟ್ ತುಂಬಿದ್ದ ವಾಹನವು ಉರುಳಿಬಿದ್ದು ನಜ್ಜುಗುಜ್ಜಾಗಿದೆ.

ಸಿಮೆಂಟ್ ತುಂಬಿದ ಟ್ರಕ್ ಚಾಲಕನೊಂದಿಗೆ ಇನ್ನೊಂದು ಟ್ರಕ್‌ನಲ್ಲಿದ್ದ ಚಾಲಕ ಮತ್ತು ಅವರ ಸಹಾಯಕ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ ಎಂದು ಬಾಗಲಕೋಟೆ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ್ ಗೋಯಲ್ ತಿಳಿಸಿದ್ದಾರೆ.



